ಸಂಡೂರು ಪರಿಸರದ ಗ್ರಾಮದೈವಗಳು

(ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ಸವಿತಾ

ಮಾರ್ಗದರ್ಶಕರು

ಡಾ. ಹೆಬ್ಬಾಲೆ ಕೆ. ನಾಗೇಶ್
ಹಿರಿಯ ಶ್ರೇಣಿ ಉಪನ್ಯಾಸಕರು
ಜಾನಪದ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜಾನಪದ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೫-೦೬

ಸಂಡೂರು ಪರಿಸರದ ಗ್ರಾಮದೈವಗಳು

(ಎಂ.ಫಿಲ್.ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ಸವಿತಾ

ಮಾರ್ಗದರ್ಶಕರು

ಡಾ. ಹೆಬ್ಬಾಲೆ ಕೆ. ನಾಗೇಶ್

ಹಿರಿಯಶ್ರೇಣಿ ಅಧ್ಯಾಪಕರು

ಜಾನಪದ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜಾನಪದ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ದೃಢೀಕರಣ ಪತ್ರ

ಶ್ರೀಮತಿ ಸವಿತಾ ಇವರು **ಸಂಡೂರು ಪರಿಸರದ ಗ್ರಾಮದೈವಗಳು: ಒಂದು ಅಧ್ಯಯನ** ಎಂಬ ಶೀರ್ಷಿಕೆಯ ಎಂ.ಫಿಲ್. ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಈ ಪ್ರಬಂಧವನ್ನು ಸಲ್ಲಿಸಲಾಗುತ್ತಿದೆ. ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇತರೇ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ:

ಸ್ಥಳ:

ಡಾ. ಹೆಬ್ಬಾಲೆ ಕೆ. ನಾಗೇಶ್
ಮಾರ್ಗದರ್ಶಕರು ಹಾಗೂ ಹಿ.ಶ್ರೇ.ಅಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಇವರಿಂದ,

ಸವಿತಾ
ಎಂ.ಫಿಲ್. ವಿದ್ಯಾರ್ಥಿನಿ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಮೂಲಕ,

ಮುಖ್ಯಸ್ಥರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಇವರಿಗೆ

ನಿರ್ದೇಶಕರು
ಅಧ್ಯಯನಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಮಾನ್ಯರೆ,

ವಿಷಯ: **ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪ್ರಬಂಧವನ್ನು ಸಲ್ಲಿಸುವ ಕುರಿತು.**

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನಾನು ೨೦೦೫ - ೦೬ ನೇ ಸಾಲಿಗೆ ಜಾನಪದ ಅಧ್ಯಯನ ವಿಭಾಗದ ವತಿಯಿಂದ ಎಂ.ಫಿಲ್. ಪದವಿಗಾಗಿ ಡಾ. ಹೆಬ್ಬಾಲೆ ಕೆ. ನಾಗೇಶ್ ಅವರ ಮಾರ್ಗದರ್ಶನದಲ್ಲಿ **ಸಂಡೂರು ಪರಿಸರದ ಗ್ರಾಮದೈವಗಳು: ಒಂದು ಅಧ್ಯಯನ** ಎಂಬ ವಿಷಯವನ್ನು ಕುರಿತು ಸಂಶೋಧನೆ ಮಾಡಿರುತ್ತೇನೆ. ಪ್ರಸ್ತುತ ಪ್ರಬಂಧದ ಆರು ಪ್ರತಿಗಳನ್ನು ಈ ಪತ್ರದೊಂದಿಗೆ ಅಧ್ಯಯನಾಂಗಕ್ಕೆ ಸಲ್ಲಿಸುತ್ತಿದ್ದೇನೆ. ಆದ್ದರಿಂದ ನನ್ನ ಈ ಎಂ.ಫಿಲ್. ಪ್ರಬಂಧವನ್ನು ಗಮನಿಸಿ ಮುಂದಿನ ಕ್ರಮಕೈಗೊಳ್ಳಬೇಕೆಂದು ಕೋರುತ್ತೇನೆ.

ವಂದನೆಗಳೊಂದಿಗೆ,

ಸ್ಥಳ:
ದಿನಾಂಕ:

ತಮ್ಮ ವಿಶ್ವಾಸಿ
ಸವಿತಾ.

ಸವಿತಾ
ಸಂಶೋಧನಾ ವಿದ್ಯಾರ್ಥಿ

ಡಾ. ಹೆಬ್ಬಾಲೆ ಕೆ. ನಾಗೇಶ್
ಮಾರ್ಗದರ್ಶಕರು

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ನಮ್ಮ ಜಾನಪದವು ಬಹಳ ಹಿಂದಿನಿಂದಲೂ ಇರುವಂತಹದ್ದು ಇದು ಎಲ್ಲಾ ಜ್ಞಾನ ಶಿಸ್ತುಗಳಿಗೂ ತಾಯಿ ಬೇರಿನಂತಹದು. ಇದು ತಲೆಮಾರಿನಿಂದ ತಲೆಮಾರಿನ ಸೊಗಡಿನೊಂದಿಗೆ ಹರಿದು ಬಂದ ಪರಂಪರಾನುಗತ ಜ್ಞಾನವಾಗಿ ಮೌಖಿಕ ರೂಪದಲ್ಲಿ ತನ್ನ ಅಸ್ತಿತ್ವವನ್ನು ಸಾರುತ್ತಲೇ ಇದೆ. ಇದು ನಿರಂತರವಾದುದು. ಎಂದೂ ಬತ್ತದ ಜೀವಂತ ನದಿಯಂತೆ ಈ ಪರಂಪರೆಯ ವಿಕಸನಕ್ಕೆ ಜನಪದವೇ ಮೂಲ ಪ್ರೇರಣೆಯಾಗಿರಬೇಕು. ಇಲ್ಲಿರುವ ಜನಪದರು ಹಿಂದಿನಿಂದಲೂ ದೈವವನ್ನು ಪೂಜಿಸುತ್ತಾ ಬಂದವರಾಗಿದ್ದಾರೆ. ಅವರು ಆ ದೈವಗಳ ಸಂಪ್ರದಾಯ, ಪೂಜಾ ವಿಧಾನ, ಆಚರಣೆ, ರೂಢಿಗಳು, ಜಾತ್ರೆ ಉತ್ಸವ ಮುಂತಾದವುಗಳನ್ನು ತಲೆಮಾರಿನಿಂದ ತಲೆಮಾರಿಗೆ ಸಾಗಿಬರುವಂತೆ ಮಾಡಿದ್ದಾರೆ. ವಿವಿಧತೆಯಲ್ಲಿ ಏಕತೆಯನ್ನು ಈಜನಪದರಲ್ಲಿ ಕಾಣಬಹುದಾಗಿದೆ.

"ನಮ್ಮ ಭಾವನೆಗಳಿಗೆ ಮೂಲ ದೇವರು" ಎಂಬ ಜನಪದರ ಉಕ್ತಿಯಂತೆ ಮಾನವರು ಆದಿಮಕಾಲದಲ್ಲಿ ದಟ್ಟಅರಣ್ಯಗಳು, ಬೆಟ್ಟಗಳು, ನದಿ ಹೊಳೆ, ತೊರೆ, ಕಣಿವೆಗಳಿಂದ ಕೂಡಿದ ಪ್ರಕೃತಿಯೊಂದಿಗೆ ವಾಸಿಸುತ್ತಿದ್ದರು. ಪ್ರಕೃತಿಯು ಒಮ್ಮೊಮ್ಮೆ ತಾಯಿವಾತ್ಸ್ಯಲ್ಯವನ್ನು ಉಣಬಡಿಸಿದರೆ ಮಗದೊಮ್ಮೆ ತನ್ನ ರೌದ್ರತೆಯನ್ನು ಪ್ರದರ್ಶಿಸಿ ಆದಿಮ ಮಾನವನಲ್ಲಿ ಸೃಷ್ಟಿಯ ಕುರಿತಾದ ಚಿಂತನೆಯ ಬೀಜವನ್ನು ಊರುತ್ತಿದ್ದಳು. ಈ ಪ್ರಕೃತಿಯ ಏರುಪೇರುಗಳನ್ನು ಅರ್ಥೈಸಿಕೊಳ್ಳಲು ಯತ್ನಿಸುತ್ತಲೇ ಸಮಸ್ತ ಸೃಷ್ಟಿಯ ಹಿಂದಿನ ರಹಸ್ಯ ಕಣ್ಣಿಗೆ ಕಾಣದ ಯಾವುದೋ ಅಗಾಧವಾದ ಶಕ್ತಿಯ ಕುರಿತಾಗಿ ಅವನು ದಿಘ್ಮೂಢನಾಗಿ ಯೋಚಿಸತೊಡಗಿದ. ಬೇಕಾದಾಗ ತನ್ನನ್ನು ತಾಯಿಯಂತೆ ಸಂತೈಸುವ ಪ್ರಕೃತಿಯು ಒಲ್ಲದಾದಾಗ ಭೂಕಂಪನ, ಸುನಾಮಿ, ಕಾಳ್ಗಿಚ್ಚು ಗುಡುಗು ಸಿಡಿಲುಗಳಿಂದ ನುಂಗಿ ನೊಣೆದು ಹಾಕಬಲ್ಲ ಅದಮ್ಯ ಚೈತನ್ಯವೆಂಬ ಅರಿವು ಅವನಲ್ಲಿ ಜಾಗೃತವಾಗತೊಡಗಿತು. ಅಂತಹ ಶಕ್ತಿಯ ಕುರಿತಾದ ಅವ್ಯಕ್ತ ಭಯ, ಭೀತಿ, ಮತ್ತು ಅದನ್ನು ಸಂಪ್ರೀತಿಗೊಳಿಸಿಕೊಳ್ಳಬೇಕೆನ್ನುವ ಹಂಬಲವು ಅವನನ್ನು ದೈವತ್ವದ ಸಾಕಾರಾದ ಕಡೆಗೆ ಪ್ರೇರೇಪಿಸಿತು. ಇಂತಹ ದೈವತ್ವದ ಪರಿಕಲ್ಪನೆಯು ಲಕ್ಷಾಂತರ ವರ್ಷಗಳು ಕಳೆದಾಗ್ಯೂ ಇನ್ನೂ ಜೀವಂತವಾಗಿ ಗ್ರಾಮೀಣ ದೈವಗಳ ಆರಾಧನೆಯಲ್ಲಿ ಉಳಿದುಕೊಂಡು ಬಂದಿದೆಯಾದ್ದರಿಂದಲೇ ಈ ಬಗೆಯ ಗ್ರಾಮದೈವಗಳ ಅಧ್ಯಯನಕ್ಕೆ ತುಂಬಾ ಮಹತ್ವವಿದೆ.

ಇಂದು ಪ್ರಚಲಿತದಲ್ಲಿರುವ ಅಭಿಜಾತ ಧರ್ಮಗಳ ಆಶಯಗಳಿಗೆ ತುಂಬಾ ಭಿನ್ನವಾಗಿ, ಮನುಷ್ಯನ ಮೂಲಭೂತ ಗುಣ, ಅನುಕಂಪ, ಮಾನವೀಯತೆ, ಮತ್ತು ನಿರ್ದಿಷ್ಟ ಸಮುದಾಯಗಳ ಉನ್ನತಿಯನ್ನು ಅಪೇಕ್ಷಿಸುವ ಗ್ರಾಮದೈವಗಳ ಸ್ವರೂಪವನ್ನು ಅರ್ಥೈಸುವುದರ ಮೂಲಕ ಆಧುನಿಕ ಯುಗದಲ್ಲಿ ಮಾರಣ ಹೋಮ ಮತ್ತು ರಕ್ತಪಾತಕ್ಕೆ (ಬಲಿಗೆ) ಕಾರಣವಾಗುವ ಧಾರ್ಮಿಕ ಆಶಯಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಲು ಸಾಧ್ಯವಾಗುತ್ತದೆಂದು ನಂಬಲಾಗಿದೆ. ಈ ಮುಖ್ಯ ಉದ್ದೇಶವನ್ನು ಈ ಅಧ್ಯಯನವು ಹೊಂದಿದೆ. ಒಂದು ನಾಡಿನ

ಸಂಸ್ಕೃತಿ. ಆಚರಣೆ, ರೂಢಿಗಳು, ಸಂಪ್ರದಾಯ ಇತಿಹಾಸಕಲೆ ಜನಜೀವನಗಳಂತಹ ವಿಷಯಗಳ ಕುರಿತು ಸಂಶೋಧನೆ ಮಾಡುವಾಗ ಕ್ಷೇತ್ರಕಾರ್ಯ ಮುಖ್ಯವಾಗುತ್ತದೆ. ಅದರಲ್ಲೂ ಮೌಖಿಕ ಪರಂಪರೆಯನ್ನೇ ನೆಚ್ಚಿಕೊಂಡ ಜಾನಪದ ಅಧ್ಯಯನಗಳಂತೂ ಪೂರ್ತಿಯಾಗಿ ಕ್ಷೇತ್ರಕಾರ್ಯವನ್ನವಲಂಬಿಸಲೇಬೇಕಾಗುತ್ತದೆ. ಈ ಅಧ್ಯಯನಕ್ಕೆ ಮೂಲ ಸಾಮಗ್ರಿಯಾಗಿ ಸಂಡೂರು ಪರಿಸರದ ಗ್ರಾಮೀಣ ದೈವಗಳ ಆರಾಧನೆಯನ್ನು ಬಳಸಿಕೊಳ್ಳಲಾಗಿದೆ. ಈ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಛಾಯಾಚಿತ್ರಣ, ಮಾಡುವುದು, ಅಧ್ಯಯನಕ್ಕೆ ಪೂರಕವಾದ ಮೌಖಿಕ ಸಾಹಿತ್ಯವನ್ನು ಸಂಗ್ರಹಿಸುವುದು, ವಿಶಿಷ್ಟ ಗ್ರಾಮದೇವತೆಗಳು ಮತ್ತು ಆರಾಧನಾ ವಿಧಾನಗಳನ್ನು ಗ್ರಹಿಸುವುದು ಮುಖ್ಯವಾಗಿದೆ. ಇದಿಷ್ಟಲ್ಲದೆ ಸಂಶೋಧನಾ ಮಹಾಪ್ರಬಂಧಗಳನ್ನು, ಜಾನಪದ ಸಾಹಿತ್ಯದ ಸಂಗ್ರಹಗಳು, ನಿಘಂಟುಗಳು, ಅನುವಾದ ಗ್ರಂಥಗಳು, ದೇಶಿವಿದೇಶಿ ಪ್ರವಾಸಿಗರ ಬರವಣಿಗೆಗಳು, ಸಂಶೋಧನಾ ಲೇಖನಗಳು ಪತ್ರಿಕೆಗಳು ಸಂಪಾದನಾ ಗ್ರಂಥ ಹೀಗೆ ಮುಂತಾದವುಗಳನ್ನು ಈ ಅಧ್ಯನಕ್ಕೆ ಸಾಮಗ್ರಿಯಾಗಿ ಬಳಸಲಾಗಿದೆ. ಅಲ್ಲದೆ ಬೇರೆ - ಬೇರೆ ಸ್ಥಳಗಳಲ್ಲಿನ ಗ್ರಂಥಾಲಯಗಳು, ಸ್ಥಳ ಪುರಾಣಗಳನ್ನು ತಿಳಿದುಕೊಳ್ಳುವುದು ಮುಖ್ಯವಾಗಿದೆ.

ಜಾನಪದ ರೂಪ ಸ್ವರೂಪಗಳನ್ನು ಕುರಿತು ಪ್ರಪಂಚದಾದ್ಯಂತ ಇಂದು ಗಂಭೀರ ಚಿಂತನೆ ನಡೆಯುತ್ತಿದೆ. ಕಳೆದು ಸು. ೧೫೦ ವರ್ಷಗಳಲ್ಲಿ ಜಾನಪದದ ಶಾಬ್ದಿಕ ಮತ್ತು ಅಶಾಬ್ದಿಕ ರೂಪಗಳನ್ನು ಸಂಗ್ರಹಿಸಿ, ವರ್ಗೀಕರಿಸಿ, ವಿಶ್ಲೇಷಿಸುವ ಕಾಯಕ ತುಂಬಾ ವ್ಯಾಪಕವಾಗಿ ಜರಗುತ್ತಿದೆ. ಜಾನಪದ, ಜನಾಂಗೀಯ ಸಂಸ್ಕೃತಿಯ ಅಧ್ಯಯನಕ್ಕೆ ಮೂಲ ಮತ್ತು ಪ್ರಬಲ ಆಕರ ಎನ್ನುವ ಆಧಾರವೇ ಇದಕ್ಕೆ ಪ್ರೇರಣೆ. ಒಂದು ನಿಟ್ಟಿನಲ್ಲಿ ಸಂಗ್ರಹಕಾರ್ಯ ನಡೆದರೆ ಅದೇ ನಿಟ್ಟಿನಲ್ಲಿ ಅವುಗಳ ಕ್ಷೇತ್ರಕಾರ್ಯ ನಡೆಯಬೇಕಾಗಿದೆ. ಒಂದು ನೆಲೆಯಲ್ಲಿ ವಿಶ್ಲೇಷಣೆ ನಡೆಯುವದಾದರೆ ಅದೇ ನೆಲೆಯಲ್ಲಿ ಆಯಾ ಶಾಬ್ದಿಕ ಅಶಾಬ್ದಿಕ ಸಾಹಿತ್ಯ ಆಚರಣೆಗಳು ರಂಗಕಲೆಗಳು ಜನಪದ ಬದುಕಿನಲ್ಲಿ ಹೇಗೆ ಅನ್ವಯಗೊಂಡಿವೆ? ಹೇಗೆ ಅವು ನಮ್ಮ ಜನಪದರ ಕೌಟುಂಬಿಕ ಜೀವನದಿಂದ ಮೊದಲಗೊಂಡು ಸಮುದಾಯ ಜೀವನದವರೆಗೆ ಹರಡಿ ಅವರ ಕ್ರಿಯೆ ನಂಬಿಗೆಗಳಲ್ಲಿ ಬೇರು ಬಿಟ್ಟಿವೆ? ಹೇಗೆ ತಲತಲಾಂತರದಿಂದ ಜನಪದ ಜೀವನವನ್ನು ರೂಪಿಸುವ ಅವರ ಸರ್ವಮುಖ ಕ್ರಿಯೆಗಳನ್ನು ನಿಯಂತ್ರಿಸುವ ಶಕ್ತಿಗಳಾಗಿವೆ? ಇತ್ಯಾದಿ ಸಂಗತಿಗಳ ಆಳವಾದ ಪರಿಶೀಲನೆ ಸಂಶೋಧನೆಗಳ ಬೆಳಕಿನಲ್ಲಿ ಸಾಗಬೇಕಾಗಿದೆ. ಸಮಕಾಲೀನ ಜಾನಪದ ಅಧ್ಯಯನ ಕೇವಲ ಸಂಕೀರ್ಣ ಅಧ್ಯಯನವಾಗಿ ಉಳಿಯದೆ ಅದೊಂದು ಕಡ್ಡಾಯವಾದ ವ್ಯಾಸಂಗದ, ವಿವಿಧ ಮಾನವಿಕ ವಿಜ್ಞಾನಗಳ ಆಂಶಿಕ ನೆರವಿನಿಂದ ನಡೆಯಬೇಕಾಗಿರುವ ತೀಕ್ಷ್ಣ ಪ್ರಮಾಣದ ಸಂಶೋಧನೆಯ ವಿವರಣೆಯಾಗಿದೆ.

ಕಳೆದ ೧೫ ವರ್ಷಗಳಿಂದ ಕರ್ನಾಟಕದಲ್ಲಿ ನಡೆದಿರುವ ಜಾನಪದ ಅಧ್ಯಯನ ಈ ನಿಟ್ಟಿನಲ್ಲಿ ತನ್ನ ಕಾಲನ್ನಿಡುತ್ತಿದೆ. ಅನೇಕ ಜನಾಂಗ ಸಂಸ್ಕೃತಿಗಳ ಕರಗುವಿಕೆ ಎಂದು (Melting pot) ವಿದ್ವಾಂಸರಿಂದ ಗುರ್ತಿಸಲಾಗಿರುವ ಭಾರತದ ಜಾನಪದ ಅಧ್ಯಯನಕ್ಕೆ ಬರುವ ಶತಮಾನ ಒಂದು ಅಹ್ವಾನವಾಗಿದೆ. ಅದರ ಫಲಸ್ವರೂಪವಾಗಿ ಕನ್ನಡ ವಿ.ವಿ.ಗಳಲ್ಲಿ ಜಾನಪದದ ಕೆಲವು ಮೂಲಭೂತ ಸಮಸ್ಯೆಗಳನ್ನು ಕುರಿತು ವ್ಯಾಸಾಂಗ ಸಂಶೋಧನೆಗಳು ನಡೆದಿವೆ. ಮೊದಲಿನಿಂದ ಇಂದಿನ ವರೆಗಿನ ಹತ್ತಾರು ಮಹಾಪ್ರಬಂಧಗಳು ರೂಪುಗೊಂಡಿವೆ.

ದೈವಗಳ ಪೂಜೆಯು ಮಾನವನೊಡನೆ ಅನಾದಿಕಾಲದಿಂದಲೂ ಬಂದಿದೆ. ಮನುಷ್ಯ ಸಂಘಜೀವಿಯಾಗಿ ಬದುಕಲು ಪ್ರಾರಂಭಿಸಿದೊಡನೆ ಕೆಲವೊಂದು ವ್ಯವಸ್ಥೆಗಳನ್ನು ಮಾಡಿಕೊಂಡು ಬದುಕಲು ಪ್ರಾರಂಬ ಮಾಡಿದ. ಹಸಿವನ್ನು ಇಂಗಿಸಲು ಬೇಟೆ, ಬೇಟೆಯೊಡನೆ ಬೆಂಕಿ, ಬೆಂಕಿಯ ಬಳಕೆಯ ನಂತರ ಮಾನವನ ಆಸೆ - ಆಕಾಂಕ್ಷೆಗಳಿಗೆ

ರೆಕ್ಕೆ-ಪುಕ್ಕೆಗಳು ಹುಟ್ಟಿಕೊಂಡವು. ನಂತರ ಕೃಷಿಯನ್ನು ಆರಂಭಿಸಿದೊಡನೆ ಅವನ ಬದುಕಿನ ದಿಕ್ಕೆ ಬದಲಾಯಿತು. ಅವನ ಬದುಕು ಸಂಕೀರ್ಣಗೊಳ್ಳಲಾರಂಭಿಸಿತು. ಜೊತೆಗೆ ತನ್ನ ಸುತ್ತಣ ಪರಿಸರ ಅವನಿಗೆ ನಿಗೂಢವಾಗಿ ಕಾಣಲಾರಂಭಿಸಿರಬೇಕು. 'ಭಯ' ಗೊಂಡ ಮಾನವ ತನ್ನದೇ ಆದ ದೈವಕ್ಕೆ ಮೊರೆ ಇಟ್ಟಿರಬೇಕು. ದೈವದ ಸೃಷ್ಟಿಗೆ ಕೆಲವೊಂದು ಪರಿಸರ ನಿರ್ಮಿತವಾದ ಕಾರಣಗಳು, ಮತ್ತು ಮಾನವ ತಾನು ಕಂಡುಕೊಂಡು ಕೆಲವೊಂದು ಮಾಂತ್ರಿಕ ಆಚರಣೆಗಳು ಕಾರಣವಾಗಿರಬಹುದು. ಇವು ಮನುಷ್ಯನಲ್ಲಿ ಭಯವನ್ನು ಹುಟ್ಟಿಸಿ ದೈವಗಳ ಧಾರ್ಮಿಕ ಆಚರಣೆಗಳು ಬಂದಿರಬೇಕು.

ಸ್ತ್ರೀ ದೇವತಾ ಪರಂಪರೆಯು ಅನಾದಿಕಾಲದಿಂದಲೂ ಅಂದರೆ, ಸು ೪,೦೦೦೦ ವರ್ಷಗಳಿಂದಲೂ ಆಚರಣೆಯಲ್ಲಿರುವ ಅಥವಾ ಆಚರಿಸುತ್ತಾ ಬಂದಿರುವ ಒಂದು ವಿಶೇಷವಾದ ಪರಂಪರೆ. ಈ ಪರಂಪರೆ ಇಂದಿಗೂ ನಮ್ಮ ಜನಪದರಲ್ಲಿ ಉಳಿದಿರುವುದು ಕಂಡುಬರುತ್ತದೆ. ಉದಾ:- ಭೂಮಿಪೂಜೆ, ಸ್ತ್ರೀ ರೂಪದಲ್ಲಿ ಪೂಜಿಸುವ ಅನೇಕ ದೇವತೆಗಳೂ ಗ್ರಾಮದೇವತೆಗಳೂ ಸ್ತ್ರೀ ಆರಾಧನೆಯ ಮೂಲದಿಂದಲೇ ಬಂದಿರುವಂತಹವು. ಕಾಳಿ, ದುರ್ಗಿ ಪಾರ್ವತಿ, ಮಾರಮ್ಮ, ಊರಮ್ಮ, ಹೀಗೆ ಅನೇಕ ದೇವತೆಗಳು ತಮ್ಮ ಇರುವನ್ನು ಇಂದಿಗೂ ಇಟ್ಟುಕೊಂಡಿದ್ದು ಈಗ ಶಿಷ್ಟ ಪರಂಪರೆಯಲ್ಲಿ ಸೇರಿಕೊಂಡು ಹೋಗಿರುವಂತಹವುಗಳಾಗಿವೆ.

ಗ್ರಾಮೀಣ ದೈವಗಳ ಅಧ್ಯಯನವನ್ನು ಹಲವು ನಿಟ್ಟುಗಳಿಂದ ಮಾಡಲು ಸಾಧ್ಯ. ಐತಿಹಸಿಕವಾಗಿ, ಪೌರಾಣಿಕವಾಗಿ, ಸ್ಥಳಪುರಾಣದಿಂದಾಗಿ, ಜನಪದ ಕಥೆಗಳಿಂದಾಗಿ, ಮಾನವಶಾಸ್ತ್ರದ, ಸಮಾಜ ಶಾಸ್ತ್ರದ ಹಿನ್ನೆಲೆಯಲ್ಲಿ ಸಾಹಿತ್ಯದ ಹಿನ್ನೆಲೆಯಲ್ಲಿ ಅಧ್ಯಯನವನ್ನು ಮಾಡಬಹುದಾಗಿದೆ. ಅದಕ್ಕಾಗಿ ಮೊದಲು ನಮ್ಮ ಗ್ರಾಮಗಳಲ್ಲಿ ಸ್ತ್ರೀದೇವತೆಯೇ ಗ್ರಾಮದೇವತೆಯಾಗಿ ಕುಳಿತಳು. ಅನಂತರ ಆ ಪ್ರದೇಶಕ್ಕೆ ಬಂದವರು ಪುರುಷ ಪ್ರಧಾನ ಕುಟುಂಬದವರಾದ ಆರ್ಯರು. ಆರ್ಯರು ನಮ್ಮ ಜೀವನ ಪ್ರವಾಹದಲ್ಲಿ ಬೆರೆತ ಬಳಿಕ ಗಂಡು ದೇವತೆಗಳಿಗೆ ಪ್ರಾಶಸ್ತ್ಯ ಬರತೊಡಗಿತು.

ಗ್ರಾಮದೈವಗಳೆಂದರೆ ಸರ್ಕಾರಿ ಗೆಜೆಟಿಯರಿನಲ್ಲಿ ಹೆಣ್ಣು ದೈವಗಳೆಂದು ವಿವರಿಸಲಾಗಿದೆ. ಸಪ್ತಮಾತೃಕೆಯರೆಂದು ಹೆಸರಾದ ಶಕ್ತಿ ಅವತಾರಗಳೆಂದು ಜನರಿಂದ ಕರೆಸಿಕೊಳ್ಳುವ ದ್ಯಾವಮ್ಮ, ಮರಗಮ್ಮ, ಎಲ್ಲಮ್ಮ, ಊರಮ್ಮ, ದುರಗಮ್ಮ, ಚೌಡಮ್ಮ, ಕಾಳಮ್ಮ, ರಲ್ಲಿ ಒಬ್ಬೊಬ್ಬರು ಒಂದೊಂದು ಪ್ರದೇಶದಲ್ಲಿ ಗ್ರಾಮದೇವತೆಗಳಾಗಿರುವರು. ಈ ದೇಶದ ಜನಾಂಗದ ಜೊತೆಗೆ ಆರ್ಯರು ಬಂದಾದ ಮೇಲೆ ಅವರ ಅಧಿದೇವರಾದ ವಿಷ್ಣುವಿನ ಹೆಂಡತಿಯಾದ ಲಕ್ಷ್ಮಿಯನ್ನು ಪಾರ್ವತಿಯೆದರು ಹೊಯ್‌ಕೈಯಾಗಿ ನಿಲ್ಲಿಸಲು, ಪಾರ್ವತಿಯಂತೆ ಲಕ್ಷ್ಮಿಯೂ ಆದಿಶಕ್ತಿಯ ಅವತಾರವೆಂದು ಕಲ್ಪಿಸಿ ಅವಳ ಸುತ್ತ ಪುರಾಣ ಸೃಷ್ಟಿಸಿ ಆಕೆಯ ಮಹತ್ವವನ್ನು ಸ್ಥಾಪಿಸಿದರು. ರೋಗ ನಿವಾರಣೆ ಮಾಡಿ ಆರೋಗ್ಯ ಕಾಪಾಡುವ ದೇವತೆ ಪಾರ್ವತಿಯಾದರೆ, ಆ ಆರೋಗ್ಯವನ್ನು ಬೆಳೆಸಬಲ್ಲ, ಸಂರಪತ್ತಿನ ದೇವತೆ ಲಕ್ಷ್ಮಿ. ಪರಂಪೆಯ ದೇವತೆಗಳು ಅಲ್ಲಲ್ಲಿ ಗ್ರಾಮದೇವತೆಗಳಾಗಿ ಕಾಣಿಸಿಕೊಳ್ಳತೊಡಗಿದರು. ಗ್ರಾಮೀಣದೈವಗಳಿರುವ ಈ ಸಂಡೂರು ಗ್ರಾಮದಲ್ಲಿ ಹೆಚ್ಚಾಗಿ ಪಾರ್ವತಿ ಪರಂಪರೆಯ ದೇವತೆಗಳನ್ನು ಕಾಣಬಹುದಾಗಿದೆ. ಹೀಗೆ ಗ್ರಾಮೀಣ ದೈವಗಳನ್ನು ಕುರಿತ ಅಧ್ಯಯನ ಸಂಸ್ಕೃತಿಯಲ್ಲಿ ಬೇರೂರಿದೆ. ದೇವತಾ ಉಪಾಸನೆಯಲ್ಲಿ ಪುರುಷ ದೇವತಾ ಉಪಾಸನೆ ಇರುವಂತೆ ಸ್ತ್ರೀ ದೇವತೋಪಾಸನೆ ಬೆಳೆದು ಬಂದಿದೆ. ಈ ತೆರನ ಅಧ್ಯಯನ ವ್ಯಾಪಕವಾದ ಅರ್ಥದಲ್ಲಿ ಭಾರದ ಇತರ ಕಡೆಗಳಲ್ಲಿಯೂ ಸಾಧ್ಯ. ಆದರೆ ಪ್ರಸ್ತುತ

ಅಧ್ಯಯನದಲ್ಲಿ ಒಂದು ಪ್ರದೇಶಕ್ಕೆ (ಸಂಡೂರು ಪ್ರದೇಶಕ್ಕೆ) ಪರಿಮಿತವಾಗಿ ವಿಷಯ ವಿವೇಚನೆಯನ್ನು ಮಾಡಲಾಗಿದೆ.

ನನ್ನ ಕಾರ್ಯಕ್ಷೇತ್ರದಲ್ಲಿ ಕಂಡುಬಂದ ಅನುಭವಗಳ ಆಧಾರದ ಮೇಲೆ ಇದನ್ನು ಪರಿಶೀಲಿಸಲಾಗಿದೆ. ಇದರಲ್ಲಿ (ನನ್ನ ಕ್ಷೇತ್ರಕಾರ್ಯ ಅಧ್ಯಯನದಲ್ಲಿ) ತಪ್ಪಿದ್ದರೆ ಕ್ಷಮೆ ಇರಲಿ. ಬೇರೆ ಕಡೆಗಳಲ್ಲಿ ಈ ರೀತಿಯ ಅಧ್ಯಯನ ನಡೆದಿರುವುದ ಕಂಡು ಬಂದರೂ ಇಲ್ಲಿನ ಪ್ರದೇಶ, ಸಂಸ್ಕೃತಿ ಆಚಾರಗಳ ಪರಿಣಾಮವಾಗಿ ಈ ಪ್ರಬಂಧವು ಕೆಲವು ನೂತನ ಅಂಶಗಳನ್ನೊಳಗೊಂಡಿದೆ.

ಅಧ್ಯಯನಕ್ಕೆ ಹೊಸ ಕ್ಷೇತ್ರಗಳನ್ನು ತೆರೆಯುತ್ತಲಿವೆ. ಮುಖ್ಯವಾಗಿ ಈ ದಿಸೆಯಲ್ಲಿ ಡಾ. ಚೆನ್ನಣವಾಲೀಕರರ ಮಹಾಪ್ರಬಂಧವಾದ 'ಹೈದ್ರಾಬಾದ ಕರ್ನಾಟಕದ ಗ್ರಾಮದೇವತೆಗಳು', ಡಾ. ಸಿದ್ದಲಿಂಗಯ್ಯನವರ 'ಗ್ರಾಮದೇವತೆಗಳು', ಡಾ. ಡಿ.ಲಿಂಗಯ್ಯನವರ 'ಕರ್ನಾಟಕ ಗ್ರಾಮದೇವತೆಗಳು' ಹೀಗೆ ಮುಂತಾದವು ನನ್ನ ಅಧ್ಯಯನದ ಮುಖ್ಯವಾದ ಮತ್ತು ಅಷ್ಟೆ ಮಹತ್ವದ ಕೃತಿಗಳಾಗಿವೆ ಎಂದು ನನಗೆ ಅನ್ನಿಸುತ್ತದೆ.

ನಮ್ಮ ಜನಾಂಗ ಮತ್ತು ಸಂಸ್ಕೃತಿಯಲ್ಲಿ ವ್ಯಾಪಕ ಮತ್ತು ಸಕೀರ್ಣ ಸ್ವರೂಪದಲ್ಲಿ ಗ್ರಾಮ ಮತ್ತು ಗ್ರಾಮದೇವತೆಗಳ ಪಾತ್ರ ಹಿರಿದಾದುದಾಗಿದೆ. ಜನಸಮುದಾಯದಿಂದಲೇ ರೂಪಗೊಂಡ ಈ ದೇವಾನುದೇವತೆಗಳು ಜನಸಾಮಾನ್ಯರಿಗಿಲ್ಲದ ಶಕ್ತಿ ಪ್ರತಿಷ್ಠೆಗಳನ್ನು ಪಡೆದು ಎಲ್ಲಿಬೇಕೆಂದರಲ್ಲಿ ದಿಢೀರ್ ಪ್ರವೇಶಿಸುತ್ತವೆ. ಏನು ಬೇಕಾದರೂ ಮಾಡುವ, ಯಾರ ಜೊತೆಗಾದರೂ ವ್ಯವಹರಿಸುವ ಮತ್ತು ಮಾಡಿದ್ದನ್ನೆಲ್ಲ ದಕ್ಕಿಸಿಕೊಳ್ಳುತ್ತ ಜನಪದದ ವಿವಿಧ ವೃಂದ, ಬುಡಕಟ್ಟು, ಸಮುದಾಯ, ಕುಲಗುಂಪುಗಳ ಮೇಲೆ ತಮ್ಮ ಪ್ರಭಾವ ಬೀರುತ್ತ ಮನುಷ್ಯನಿಗೆ ಅತೀತವಾಗಿ ಬೆಳೆದು ಸೃಷ್ಟಿಕರ್ತನಿಂದಲೇ ದೂರಸರಿದು ಅವನಿಗೆ ಅಹ್ವಾನವಾಗುತ್ತವೆ. ಜನಪದರ ವ್ಯಾಪಕ ಜೀವನದ ಸರ್ವ ಮುಖದ ಕ್ರಿಯೆಗಳಿಗೆ ಚಾಲಕ ಪ್ರೇರಕ ಮತ್ತು ನಿಯಂತ್ರಣ ಶಕ್ತಿಗಳಾಗಿ ಪರಿಚಲನೆಗೊಳ್ಳುತ್ತವೆ. ಈ ಬಗೆಯ ಅತ್ಯಂತ ಕೂತೂಹಲಕಾರಿ ಮತ್ತು ರೋಮಾಂಚಕಾರಿ ದೇವಾನು ದೇವತೆಗಳನ್ನು ಕುರಿತು ವಿಶೇಷತಃ ಗ್ರಾಮೀಣ ದೈವಗಳನ್ನು ಕುರಿತು ಸಂಶೋಧನಾ ಅಧ್ಯಯನವನ್ನು ನಾನು ನನ್ನ ಮಿತಿಯಲ್ಲಿ ಕೈಗೊಂಡಿದ್ದೇನೆ. ಇದೇ ಅಂತಿಮವಲ್ಲ.

ಸಂಡೂರು ಗ್ರಾಮೀಣ ದೈವಗಳನ್ನು ಕುರಿತಾದ ಈ ಅಧ್ಯಯನವು ಗ್ರಾಮದೈವ ಎಂಬ ಪದದ ನಿರ್ವಚನ ಮತ್ತು ಆ ಪರಿಕಲ್ಪನೆಯ ಇತಿಹಾಸದಿಂದ ಪ್ರಾರಂಭವಾಗುವುದು ಸೂಕ್ತವಾಗಿದೆ. ದೈವದ ಕಲ್ಪನೆ ಬಂದುದೇ ಭಯದಿಂದಾಗಿ. ದೇವತೆ ಎಂಬ ಪದ ಕೇವಲ ಸ್ತ್ರೀ ಲಿಂಗವನ್ನು ಸೂಚಿಸದಯೇ ಪುಲ್ಲಿಂಗವನ್ನು ಸೂಚಿಸುವುದರಿಂದ ಗ್ರಾಮದೇವತೆಗಳೆಂದರೆ ಹಳ್ಳಿಯಲ್ಲಿರುವ ಗಂಡು ದೇವರುಗಳು ಮತ್ತು ಹೆಣ್ಣು ದೇವರುಗಳು ಎಂದು ಅರ್ಥಬರುವುದು. ಅದರೆ ಜಗತ್ತಿನಲ್ಲಿ ಮೊದಲು ಪೂಜೆಗೊಂಡದ್ದು ಸ್ತ್ರೀ ದೇವತೆಯೇ . ನಮ್ಮ ಹಳ್ಳಿಗಳ ರಕ್ಷಣೆಗಾಗಿ ಮೊದಲು ಹುಟ್ಟಿಕೊಂಡದ್ದು ಸ್ತ್ರೀ ದೇವತೆಯೇ. ನಮ್ಮ ದೇಶದಲ್ಲಿ ಆರ್ಯರಿಗಿಂತ ಮೊದಲಿದ್ದವರು ದ್ರಾವಿಡರು. ಇವರಿಗಿಂತ ಮೊದಲಿದ್ದವರು ನಿಷಾಧರು. ಇವರು ಮಾತೃಪ್ರಧಾನ ಪ್ರಧಾನ ಕುಟುಂಬವುಳ್ಳವರಾಗಿದ್ದರು.

ಆದಿಮಾನವರು ತಮ್ಮ ಜೀವನದ ಅವಧಿಯಲ್ಲಿ ಹಸಿವನ್ನು ಇಂಗಿಸಿಕೊಳ್ಳಲು ಕಾಡು ಮೇಡುಗಳಲ್ಲಿ ಅಲೆದು ಗಡ್ಡೆ ಗೆಣಸುಗಳನ್ನು ತಿಂದು ಮರಗಳ ಪೂಟರೆ, ಗುಹೆಗಳಲ್ಲಿ ವಾಸ ಮಾಡುತ್ತಿದ್ದರು. ಆ ಸಂದರ್ಭದಲ್ಲಿ

ಪ್ರಕೃತಿಯಲ್ಲಿ ಉಂಟಾಗುತ್ತಿದ್ದ ದೈನಂದಿನ ಘಟನೆಗಳಿಗೆ ಹೆದರಿ ತಮಗೆ ಕಾಣಿಸದ ಯಾವುದೋ ಅಗೋಚರ ಶಕ್ತಿಯಿದೆ ಎಂದು ಅವುಗಳನ್ನು ಸಂತೃಪ್ತಪಡಿಸದಿದ್ದರೆ, ಅವುಗಳಿಂದ ತಮಗೆ ಅನಾಹುತ ಒದಗುವುದೆಂದು ಅರಿತರು. ತಮ್ಮ ಸುತ್ತ-ಮುತ್ತಲಿರುವ ಪ್ರಾಕೃತಿಕ ವಿಸ್ಮಯ ವಸ್ತುಗಳಾದ ಬೆಟ್ಟ-ಗುಟ್ಟ ನದಿ- ಸಮುದ್ರ, ಸೂರ್ಯ - ಚಂದ್ರ, ಗಾಳಿ, ಅಗ್ನಿ, ಜ್ವಾಲಾಮುಖಿ, ಭೂಕಂಪ, ಬಿರುಗಾಳಿ, ಗುಡುಗು, ಸಿಡಿಲು, ಮುಂತಾದ ಮಾನವಾತೀತ ಶಕ್ತಿಗಳಿಗೆ ಶರಣಾಗಿ ಪೂಜೆ ಸಲ್ಲಿಸತೊಡಗಿದರು ಎಂಬುದು. ಚರಿತ್ರೆಯಿಂದ ತಿಳಿದು ಬರುತ್ತದೆ. ಇದರಿಂದಲೇ ಈ ರೀತಿಯ ದೈವಗಳು ಮಾನವರಿಗೆ "ದುಷ್ಟ ಶಕ್ತಿಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ತೊಂದರೆ ಬರದಂತೆ ಕಾಪಾಡುತ್ತವೆ" ಎಂಬ ಮಾತು ಸ್ಪಷ್ಟವಾಗಿದೆ. (ಡಾ.ಕೆ.ಜಿ.ಗುರುಮೂರ್ತಿ) ಹೀಗೆ ಬೆಳೆದು ಬಂದ ಜೀವನ ಕ್ರಮವು ಬೇಟೆ, ಪಶುಪಾಲನೆ, ಕೃಷಿ, ಕೈಗಾರಿಕೆ, ಕ್ಷೇತ್ರದಂತಹ ಹಲವು ಹಂತಗಳನ್ನು ದಾಟಿ ಬಂದ ಮಾನವನ ಸಮಾಜದಲ್ಲಿ ಜೀವನ ವಿಧಾನವು ನಿರಂತರ ವಿಕಾಸ ಹೊಂದುತ್ತಾ ಸಾಗುತ್ತಲಿದೆ. ಜೊತೆಗೆ ಅವನ ಮೆದಳು ಬೆಳೆಯುತ್ತಾ ಹೋದಂತೆಲ್ಲಾ ಚಿಂತನೆಯ ಕ್ರಮದಿಂದ ಬದಲಾವಣೆಯು ಆಗುತ್ತಿದೆ ಎಂಬರಷ್ಟರಮಟ್ಟಿಗೆ ಇಂದಿಗೂ ಸಹ ಜನಪದರು ಜನಪದ ದೈವಗಳ ಆರಾಧನೆಯಲ್ಲಿ ಲೋಪವಾಗದಂತೆ ಆಚರಿಸುತ್ತಿರುವುದು ಕಂಡುಬರುತ್ತದೆ.

ಜನಪದ ದೈವಗಳ ಅಧ್ಯಯನ ತುಂಬಾ ರೋಮಾಂಚಕಾರಿ ಹಾಗೂ ಅಷ್ಟೇ ಪ್ರಯಾಸಕರವೂ ಹೌದು ಏಕೆಂದರೆ ಮಾಹಿತಿ ಸಂಗ್ರಹ ಕಾರ್ಯದಲ್ಲಿ ಅನುಭವಿಸಿದ ಅನುಭವಗಳೇ ಈ ಮಾತಿಗೆ ಸಾಕ್ಷಿ. ದೈವಗಳ ಸುತ್ತ ಹೆಣೆದುಕೊಂಡಿರುವ ಪುರಾಣ, ಐತಿಹ್ಯ, ಗಾದೆ. ಒಗಟು, ಮುಂತಾದ ಸಂಗತಿಗಳು ತುಂಬಾ ಕುತೂಹಲಕಾರಿಯಾಗಿ ಪರಿಣಮಿಸುತ್ತವೆ. ಜನಪದ ದೈವವನ್ನು ನಂಬುವವರಿಗೆ ಇವುಗಳ ಅಧ್ಯಯನದ ಆಳ, ವಿಸ್ತಾರದ ಬಗ್ಗೆ ತಿಳಿದುಕೊಳ್ಳುವುದು ಪ್ರಮುಖವಲ್ಲದಿರಬಹುದು. ಏಕೆಂದರೆ ಅವರುಗಳು ಆಯಾ ದೈವದೊಂದಿಗೆ ಜೀವನ ಸಾಗಿಸುತ್ತಿರುವರೋ ಎಂಬ ಭಾವನೆ ವ್ಯಕ್ತವಾಗುತ್ತದೆ. ಆದೆರ ದೈವಗಳ ಕಲ್ಪನೆಯಿಂದ ಹೊರಗಿದ್ದವರಿಗೆ ಇದು ಪ್ರಸ್ತುತ. ಜನಪದ ದೈವಗಳು ಒಂದು ಜನಸಮೂಹ ಸೃಷ್ಟಿ. ಅದರೆ ನಂತರದ ಕಾಲದಲ್ಲಿ ಶಿಷ್ಟ ದೈವವಾಗಿ ವಿಕಾಸ ಹೊಂದಿ, ಹೀಗೆ ವಿಕಾಸ ಹೊಂದುತ್ತಲೇ ದೈವಗಳಿದಲೇ ಕಾರ್ಯ-ಕಾರಣ ಸಂಬಂಧಗಳ ಜೀವ ಜಗತ್ತಿನ ನಿಯಂತ್ರಣವಿದೆಯಂಬ ನಂಬಿಕೆಯು ಬೆಳೆದು ಬಂದಿದೆ.

ಈ ರೀತಿಯ ಜನಪದ ದೈವಗಳನ್ನು ಮೊದಲಿಗೆ ಮಾಹಿತಿ ರೂಪದಲ್ಲಿ ತಿಳಿಸಿಕೊಟ್ಟವರು ಮಾನವಶಾಸ್ತ್ರಜ್ಞರು. ಅವರುಗಳಲ್ಲಿ ಬ್ರಾಸೆಸ್ ಮೆಕೆಲೆನ್ನಾನ್, ಪ್ರೇಜರ್, ಟೈಲರ್, ಮಾರೆಟ್ ಮುಂತಾದವರು ೧೯೨೧ ರಲ್ಲಿ ಹನ್ನಿ ವೈಟ್ ಹೆಡ್‌ರವರ "The village of South India" ಕೃತಿಯಲ್ಲಿ ಗ್ರಾಮದೇವತೆಗೆ ಸಂವಾದಿಯಾಗಿ (ಗ್ರಾಮೀಣದೈವಗಳಿಗೆ) 'Village Godds' ಎಂಬ ಪದವನ್ನು ಬಳಸಿದರು. ಈ ಕೃತಿಗಳನ್ನು ಪ್ರಮುಖವಾಗಿಟ್ಟುಕೊಂಡು ನಮ್ಮ ಅನೇಕ ವಿದ್ವಾಂಸರುಗಳು ಗ್ರಾಮದಲ್ಲಿ ಗ್ರಾಮದೇವತೆಯ ಅಧಿಕ ಆಚರಣೆ ಇರುವುದರಿಂದಲೋ ಏನೋ ಆಯ ದೈವವನ್ನು ಗ್ರಾಮದ ದೈವವೆಂದು ಕರೆದರು. ಕನ್ನಡದಲ್ಲಿ 'ಗ್ರಾಮದೇವತೆ' ಯ ಕುರಿತು ಅಧ್ಯಯನ ನಡೆಸಿದವರಲ್ಲಿ ಪ್ರಮುಖವಾಗಿ ಡಾ. ಚೆನ್ನಣ್ಣ ವಾಲೀಕಾರರು ಮತ್ತು ಸಿದ್ಧಲಿಂಗಯ್ಯನವರನ್ನು ಹೆಸರಿಸಬಹುದು. ವಾಲೀಕರಾರರ 'ಹೈದ್ರಬಾದ್ ಕರ್ನಾಟಕದ ಗ್ರಾಮದೇವತೆಗಳು', ಎಂಬ ವಿಷಯದ ಮೇಲೆ ಸಂಶೋಧನೆ ನಡೆಸಿದರೆ, ಡಾ. ಸಿದ್ಧಲಿಂಗಯ್ಯನವರು ತಮ್ಮ ಕೃತಿಗೆ 'ಗ್ರಾಮದೇವತೆ' ಎಂಬ ಪದವನ್ನೆ ಬಳಸಿದ್ದಾರೆ. ಅದರೆ ಎಸ್.ಆರ್.ನಾಯಕ ಹಾಗೂ ಇತರ ವಿದ್ವಾಂಸರು 'ಶಕ್ತಿ ದೇವತೆ' ಎಂಬ

ಅರ್ಥ ಸೂಚಿಸುವ ಪದ ಪ್ರಯೋಗಿಸಿ ಅಧ್ಯಯನ ಮಾಡಿದ್ದಾರೆ. ಒಂದು ಮನೆಯಲ್ಲಿರುವ ದೈವ, ಮನೆದೈವ ಎಂದು ಕರೆಯಿಸಿಕೊಳ್ಳುತ್ತದೆ. ಆಯಾ ಗ್ರಾಮದ ಅದಿದೈವವಾಗಿ ಪೂಜಿಸಲ್ಪಡುವ ದೈವವು 'ಗ್ರಾಮದೈವ' ವೆಂದು ಕರೆಯಿಸಿಕೊಂಡರೆ ಒಂದು ನಾಡಿನ ಜನರೆಲ್ಲರೂ ಸೇರಿ ಪೂಜಿಸುವ ದೈವವು 'ನಾಡದೈವ' ಎಂದು ಕರೆಯಲ್ಪಡುತ್ತದೆ. ನನ್ನ ಅಧ್ಯಯನದಲ್ಲಿ ಸಂಡೂರಿನ ಗ್ರಾಮೀಣ ದೈವಗಳಿಗೆ ಹೆಚ್ಚು ಒತ್ತು ನೀಡಲಾಗಿದೆ. ಈ ರೀತಿಯ ದೈವಗಳ ಸಮೂಹವನ್ನು ''ಜನಪದ ದೈವ'' ಎಂದು ಗುರ್ತಿಸಿ ಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದೇನೆ.

ಈ ಜನಪದ ದೈವಗಳ ಉಗಮ ವಿಕಾಸ ತಿಳಿಯುವುದು ತುಂಬಾ ಮಹತ್ವವಾದುದಾಗಿದೆ. ಈ ಹಿಂದೆ ಬುಡಕಟ್ಟು ಜನರ ಭಯದ ಪಂಥವೇ (ಟೋತೆಂ ಪಂಥವೇ) ಪರಿವರ್ತನೆಯಾಗಿ ದೈವವಾಗಿರಬೇಕು. ಹೀಗೆ ಬೆಳೆದು ಬಂದ ದೈವದ ಜನಸಮೂಹವು ಸಮುದಾಯವೊಂದರ ಆರ್ಥಿಕ ಕಾರಣಗಳಿಂದಾಗಿಯೂ ಮತ್ತು ರಾಜಕೀಯದ ಪ್ರವೇಶದಿಂದಾಗಿಯೂ ಆ ದೈವದ ವಿಕಾಸವು ಬೆಳೆಯುತ್ತದೆ ಎಂಬ ವಾದವಿದೆ. ಅಂತೆಯೇ ಎಸ್.ಎಸ್. ಹಿರೇಮಠರು ದೈವವೊಂದರ ವಿಕಾಸವು ಆಯಾ ಆರಾಧಕರ ಆರ್ಥಿಕ ಬಲಾಬಲವನ್ನು ಆಧರಿಸಿದೆ ಎಂಬುದು ಸ್ಥೂಲಗ್ರಹಿಕೆ ಎಂದು ತಿಳಿಸಿರಿವುದು ಸ್ಪಷ್ಟವಾಗಿದೆ. ಆಚರಣೆಗೆ ಒಳಪಡುವ ದೈವಗಳಲ್ಲಿ ಹೆಚ್ಚಾಗಿ ಮಾತೃ ಮೂಲ ಶಕ್ತಿಯ ಪ್ರತೀಕವು ವ್ಯಕ್ತಗೊಳ್ಳುತ್ತದೆ. ಏಕೆಂದರೆ ಆದಿಮಾನವನು ಬೇಟೆಗೆ ಹೋದ ಸಂದರ್ಭದಲ್ಲಿ ಸ್ತ್ರೀಯು ಮನೆಯಲ್ಲಿ ಬೇಸಾಯ ವೃತ್ತಿಯನ್ನು ಅವಲಂಬಿಸಿದ್ದಳು. ಅಲ್ಲಿ ಯಾವುದೇ ಧಾನ್ಯದ ಬೆಳೆಯು ಫಲವಂತಿಕೆಯ ಪ್ರತೀಕವಾಗಿರುವುದರಿಂದ ಸ್ತ್ರೀಯು ಅವರವರ ಮಕ್ಕಳ ಲಾಲನೆ ಪಾಲನೆಯಲ್ಲಿ ತೊಡಗಿಕೊಂಡಿರುವುದರಿಂದಲೂ ಸ್ತ್ರೀಯು ಪ್ರಮುಖವಾದಳು. ಅಂತೆಯೇ ಪ್ರಕೃತಿಯ ಶಕ್ತಿಗಳಲ್ಲಿ ಬಹುತೇಕವಾಗಿ ನೆಲ. ಜಲ, ವಾಯು, ಅಗ್ನಿ ಮುಂತಾದ ಪಂಚಭೂತಗಳು 'ಅಮ್ಮ' ಎಂಬ ಹೆಸರಿನಿಂದ ಬಳಕೆಯಾಗಿರುವುದು ಕಂಡುಬರುತ್ತದೆ. ಇದು ಪುರುಷರ ಬೇಟೆ-ಪಶುಪಾಲನೆ ಸಂಸ್ಕೃತಿಯ ಆಕ್ರಮಣದವರೆಗೂ ಮುಂದುವರೆಯಿತು. ಆಗ ಪುರುಷ ಪ್ರಧಾನವಾಗಿ 'ಪುರುಷದೈವ'ಕ್ಕೆ ಸ್ಥಾನ ಕಲ್ಪಿಸಲಾಯಿತು. ಈ ಎರಡು ಸಂಘರ್ಷಗಳ ಪೂರ್ವದಲ್ಲಿದ್ದ ಆದಿಮಾನವನು ಗುಹೆಯಲ್ಲಿ ವಾಸವಾಗಿದ್ದಾಗ ಕೊರೆದ ಚಿತ್ರಗಳು ಶಿಲಾ ಪ್ರತಿಮೆಗಳೇ ಅವರ ದೈವಗಳಾಗಿರಬೇಕೆಂದು ಶೋಧನೆಯಿಂದ ತಿಳಿದು ಬಂದಿದೆ. ಈಗಲೂ ಸಂಡೂರಿನಲ್ಲಿ ಹಳೆಯ ಕಾಲದ ಗುಂಡಗಳನ್ನು, ಶಿಲೆಗಳನ್ನು ದೈವಮೂರ್ತಿಗಳಾಗಿ ಬಳಸಲ್ಪಟ್ಟಿರುವುದು ಕ್ಷೇತ್ರಧ್ಯಾಯನದಿಂದ ತಿಳಿದುಬಂದಿರುವ ಸಂಗತಿಯಾಗಿದೆ.

ಹೀಗೆ ಪುರುಷ ದೈವಕ್ಕೆ ಪ್ರಧಾನ್ಯತೆ ನೀಡಿದರೂ ಸ್ತ್ರೀ ದೈವಕ್ಕೆ ಪ್ರಮುಖಸ್ಥಾನವನ್ನು ನೀಡಲ್ಪಡುತ್ತಿದೆಯೆಂದು ಆಚರಣೆಗಳಿಂದ ಗಮನಿಸಬಹುದಾಗಿದೆ. ಯಾವುದೇ ಗ್ರಾಮದಲ್ಲಿ ಸ್ತ್ರೀದೈವಕ್ಕೆ ಪ್ರಧಾನ ಸ್ಥಾನ ಕಲ್ಪಿಸಿ ಆ ಊರಿನ ಗ್ರಾಮದ ಅಧಿದೇವತೆಯಾಗಿ ಗುರ್ತಿಸಲ್ಪಟ್ಟಿರುವುದನ್ನು ಕಾಣಬಹುದು. ಅನೇಕ ವಿದ್ವಾಂಸರು ಸಹ 'ಗ್ರಾಮದೇವತೆ' ಎಂಬ ಪದ ಬಳಸಿಯೇ ಸ್ತ್ರೀದೇವತೆಗಳ ಕುರಿತಾದ ಸಂಶೋಧನೆ ಕೈಗೊಂಡರು.

ಗ್ರಾಮೀಣ ಪರಿಸರದಲ್ಲಿ ಹೆಚ್ಚಾಗಿ ಆರಾಧನೆಯ ಸ್ವರೂಪದಲ್ಲಿ ಸ್ತ್ರೀ ದೈವದ ಅಭಿವ್ಯಕ್ತಿ ಕಂಡುಬರುತ್ತದೆ. ಆದರೆ ನನ್ನ ಅಧ್ಯಯನದಲ್ಲಿ ಸ್ತ್ರೀ ಹಾಗೂ ಪುರುಷ ದೈವವನ್ನು ತೊಡಗಿಸಿಕೊಂಡಿರುವುದರಿಂದ 'ಜನಪದ ದೈವ' ಅಥವಾ 'ಗ್ರಾಮೀಣ ದೈವಗಳು' ಎಂಬ ವಿಶಾಲಾರ್ಥವನ್ನು ಇಟ್ಟು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಹೀಗೆ ಬೆಳೆದುಬಂದ ಜನಪದ ದೈವವು ಮಾತೃಪ್ರಧಾನ ಸ್ವರೂಪದಿಂದಲೇ ಆರಂಭವಾಗಿರಬೇಕು. ಇದರಿಂದಲೇ ಆತನಿಗೆ ಗೋಚರವಾಗುವ ವಸ್ತುಗಳಲ್ಲಿ ಮಾತೃ ಸ್ವರೂಪವನ್ನು ಗುರುತಿಸಿ ಅಮ್ಮ ಎಂಬ ಹೆಸರನ್ನು

ಸಮ್ಮ ಜನಪದರು ಬಳಸಿದರು. ಅವುಗಳಲ್ಲಿ ಊರಮ್ಮ, ಗಾಳೆಮ್ಮ, ಎಲ್ಲಮ್ಮ, ಬಿಸಿಲಮ್ಮ, ಮಳೆಯಮ್ಮ, ಗೌರಮ್ಮ, ಕಾಳಮ್ಮ ಉಡೂತಮ್ಮ ಮುಂತಾದವುಗಳನ್ನು ಹೆಸರಿಸಬಹುದು. ಈ ದೈವಗಳು ಮೂಲತಃ ದ್ರಾವಿಡರಲ್ಲಿ ಸೃಷ್ಟಿಯಾಗಿ ವೈದಿಕರಲ್ಲಿ ಅವರದೇ ಆದ ಮಾರ್ಪಟುಗಳೊಂದಿಗೆ ಆರಾಧನೆಯಲ್ಲಿ ತೊಡಗಿಸಿರುವುದು ಕಾಣಸಿಗುತ್ತದೆ. ಇಲ್ಲಿ ಬಳಸ್ಪಟ್ಟ ದ್ರಾವಿಡರ 'ಅಮ್ಮ' ಎಂಬ ಪದರವು ವೈದಿಕರಲ್ಲಿ 'ಅಂಬಿಕಾ' ಪದವಾಗಿ ಬಳಕೆಯಾಗುತ್ತದೆ. ಇಂದು ಸಹಜವಾಗಿ ಪೂಜೆಗೆ ಅರ್ಹವಾಗಿ ಜನಮನ್ನಣೆ ಪಡೆದ 'ಶಿವಲಿಂಗ' ಕೆಳಭಾಗದ ಪಾಣಿ ಪೀಠವು ಈ ಹಿಂದೆ ಇದ್ದ ಯೋನಿ ಆರಾಧನೆಯನ್ನು ಪ್ರತಿನಿಧಿಸಿದರೆ ಮೇಲ್ಭಾಗದ ಲಿಂಗವು ಶಿಶ್ನಾರಾಧನೆಯನ್ನು ಸಂಕೇತಿಸುತ್ತಿದೆ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಏಕೆಂದರೆ ಸಂಡೂರು ಗ್ರಾಮದ ಬೈರವನ ಕೊಳ್ಳದಲ್ಲಿ ಯೋನಿ ಆಕಾರದ ಕಲ್ಲುಬಂಡೆಗೆ ಅಲ್ಲಿಗೆ ಹೋದ ಸ್ತ್ರೀಯರು ಹಣವನ್ನು ಕಾಣಿಕೆ ರೂಪದಲ್ಲಿ ನೀಡಿ ತಮಗೆ ಸಂತಾನಭಾಗ್ಯ ಲಭಿಸಲಿ ಎಂದು ಪೂಜಿಸಿ ಬರುವರು. ಸಂಡೂರು ಗ್ರಾಮದ ಶ್ರೀ ಕುಮಾರ ಸ್ವಾಮಿ ಗುಡಿ ಹತ್ತಿರ ಅನೇಕ ಶಿಶ್ನಾಕಾರದ ಕಲ್ಲುಗಳು ಶೋಧನೆಯಿಂದ ಪತ್ತೆಯಾಗಿವೆ. ಇದರಿಂದ ಈ ಭಾಗದಲ್ಲಿ ಶಿಶ್ನಾರಾಧನೆ ಇರಬೇಕೆಂದು ತಿಳಿಯುತ್ತದೆ. ಅಂತೆಯೇ ಇಂದಿಗೂ ಯಾವುದೇ ಸ್ತ್ರೀ ದೈವದ ಆಚರಣೆ ಜಾತ್ರೆಯ ಸಂದರ್ಭದಲ್ಲಿ ಜರಗಿಸುವ ಜೋಕುಮಾರ ಸ್ವಾಮಿ ಆರಾಧನೆ, ದೀಢನಮಸ್ಕಾರ ದೀಪಾಕಾಯುವುದು, ನಡೆಮೂಡಿ ಹಾಸುವುದು. ಮುಂತಾದ ಸೇವೆಗಳು ಈ ರೀತಿಯ ಆಚರಣೆಗಳಾಗಿ ಪರಿವರ್ತನೆಯಾಗಿವೆ ಎಂದು ಊಹಿಸಬಹುದು.

"ಆಧುನಿಕ ನಾಗರೀಕತೆಯ ತರ್ಕ ಒಂದು ಏಕರೂಪೀ ಜೀವನಕ್ರಮವನ್ನು ರೂಪಿಸುವುದಾಗಿದೆ. ಹಳೆಯ ಜ್ಞಾನವ್ಯವಸ್ಥೆಗಳು ಭಾವನಾಲಯಗಳು ತೀವ್ರರೀತಿಯ ಹಿಂಸೆಯನ್ನು ಅನುಭವಿಸಿ ಕಣ್ಮರೆಯಾಗುತ್ತಿವೆ" ಗ್ರಾಮದೇವತೆಗಳು ಶೀಘ್ರವಾಗಿ ಕಣ್ಮರೆಯಾಗುತ್ತಿರುವುದನ್ನು ಕೂಡ ಈ ನಾಗರಿಕತೆಯ ತರ್ಕದಲ್ಲೇ ನೋಡಬೇಕಾಗಿದೆ. ಆಧುನಿಕ ಬಂಡವಾಳಶಾಹಿ ನಾಗರಿಕತೆ ತನಗಿಂತ ಭಿನ್ನವಾದ ಲೋಕಗ್ರಹಿಕೆ, ನಂಬಿಕೆ, ಆಚರಣಾ ಕ್ರಮಗಳನ್ನು ನಿರ್ದಯವಾಗಿ ಹೊಸಕಿ ಹಾಕುತ್ತಿದೆ. ಆಧುನೀಕರಣದ ಸಂದರ್ಭದಲ್ಲಿ ಗ್ರಾಮ ದೇವತಾ ವ್ಯವಸ್ಥೆ ಸೂಚಿಸುತ್ತಿರುವ ಮೌಲ್ಯಗಳು ಮತ್ತು ಎದುರಿಸುತ್ತಿರುವ ಸಮಸ್ಯೆಗಳನ್ನು ಸಾರಾಂಶ ರೂಪದಲ್ಲಿ ಕೆಳಗೆ ಹೇಳಲಾಗಿದೆ.

ಗ್ರಾಮದೇವತೆಗಳು ಸ್ತ್ರೀ ಚೈತನ್ಯ ಶಕ್ತಿಯ ಆರಾಧನೆ ಎಂದರೆ ತಪ್ಪಾಗಲಾರದು. ಕೆಳವರ್ಗಗಳು ಲೋಕವನ್ನು ನೋಡುವ ಕ್ರಮವನ್ನು ಇವು ಸೂಚಿಸುತ್ತವೆ. ಸ್ಥಳೀಯ ಮೂಲದಿಂದ ಬಂದ ಈ ಗ್ರಾಮದೇವತೆಗಳ ಅರ್ಚಕರು ಸಾಮಾನ್ಯವಾಗಿ ಕೆಳಜಾತಿಗೆ ಸೇರಿದವರಾಗಿರುತ್ತಾರೆ. ಅದ್ದರಿಂದ ಗ್ರಾಮದೇವತೆಗಳು ಇಷ್ಟ ಪಡುವ ಆಹಾರವು ಕೆಳವರ್ಗದ ಆಹಾರ ಪದ್ಧತಿಗೆ ಸಂಬಂಧಿಸಿದ್ದೆ ಆಗಿರುತ್ತದೆ. ಆಯಾ ಜನವರ್ಗದ ಭಾಷೆ, ಉಪಭಾಷೆಗಳೇ ಆಗ ಬಳಕೆ ಆಗುವುದನ್ನು ಕಾಣಬಹುದು. ಹೀಗೆ ಗ್ರಾಮದೇವತೆಗಳು ತಮ್ಮ ಸಮಾಜದ ವೈದಿಕೇತರ ಜನವರ್ಗದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಗ್ರಾಮದೇವತೆಯ ಪರಿಕಲ್ಪನೆ ಮೂರು ನೆಲೆಗಳಲ್ಲಿ ಕ್ರಿಯಾಶೀಲವಾಗಿದೆ. ಅವು ಮನುಷ್ಯ ಮತ್ತು ಸಮಾಜ, ಮನುಷ್ಯ ಮತ್ತು ಮನುಷ್ಯ, ಮನುಷ್ಯ ಮತ್ತು ನಿಸರ್ಗ ಸಂಬಂಧದ ನೆಲೆಯಲ್ಲಿ ಗ್ರಾಮದೇವತೆಯ ಪರಿಕಲ್ಪನೆ ವರ್ಣ ಸಂಕರದ ಮೇಲೆ ಹೇರಿದ ನಿಷೇಧವಾಗಿ ಕಾಣುತ್ತದೆ. ಮನುಷ್ಯ ಮತ್ತು ನಿಸರ್ಗದ ನೆಲೆಯಲ್ಲಿ ಗ್ರಾಮದೇವತೆಯ ಪರಿಕಲ್ಪನೆ ಪ್ರಕೃತಿಯ ವಿವಿಧ ವ್ಯಾಪಾರಗಳ ಆರಾಧನೆಯಾಗಿದೆ.

ಗ್ರಾಮದೇವತೆಯ ಕಲ್ಪನೆ ಮಾನವ ತನ್ನ ಸಾಂಘಿಕ ಜೀವನದಲ್ಲಿ ಗ್ರಾಮಗಳನ್ನು ಕಟ್ಟಿಕೊಂಡ ನಂತರದ ಕಲ್ಪನೆಯಾಗಿದ್ದು, ಈ ಪರಿಕಲ್ಪನೆ ವಿಸ್ತರಣೆಯಾದಂತೆಲ್ಲಾ ಶಿಷ್ಟದೇವತೆಗಳ ಸಂಪರ್ಕ ಇವುಗಳಿಗೆ ಒದಗಿಬಂದು

ಅವುಗಳು ಬದಲಾವಣೆಗೆ ಒಳಗಾಗುತ್ತವೆ. ಈ ಬದಲಾವಣೆ ಮುಖ್ಯವಾಗಿ ಕಂಡುಬರುವುದು ವೈದಿಕೀಕರಣದಲ್ಲಿ. ಹೀಗೆ ವೈದಿಕೀಕರಣಕ್ಕೆ ಪಕ್ಕಾಗುವ ಗ್ರಾಮದೇವತೆಗಳ ಸ್ವರೂಪದಲ್ಲಿ ಗುಣ ಸ್ವಭಾವದಲ್ಲಿ ಅಪಾರವಾದ ಬದಲಾವಣೆಗೆ ಒಳಗಾಗುತ್ತವೆ. ವೈದಿಕ ಅರ್ಚಕರ ಸಂಪರ್ಕ ಬಂದ ಕೂಡಲೇ ಗ್ರಾಮದೇವತೆಗಳ ಕಿವಿಯ ಮೇಲೆ ಸಂಸ್ಕೃತದ ಮಂತ್ರಘೋಷ ಬೀಳಲು ಪ್ರಾರಂಭವಾಗಿ ಜನಪದ ಅರ್ಚನಾ ವಿಧಾನವೇ ಕಣ್ಮರೆಯಾಗುತ್ತದೆ. ಕೋಣ, ಕುರಿ, ಕೋಳಿಗಳ ಬಲಿಯ ಬದಲು ತೆಂಗಿನಕಾಯಿ, ಬಾಳೆಹಣ್ಣು, ಮೃಷ್ಟಾನ್ನ ಭೋಜನದ ನೈವೇದ್ಯ ಆಗುತ್ತದೆ. ಕೆಲವು ಹಳ್ಳಿಗಳಲ್ಲಿ ಕೋಣನ ಮೈಗೆ ಸೂಜಿಯನ್ನು ಚುಚ್ಚಿ ಅದರ ಮೈಯಿಂದ ರಕ್ತ ತೆಗೆಯುವ ಪದ್ಧತಿ ಈಗ ಆರಂಭವಾಗಿದೆ. ಈ ಹಿಂಸೆಯ ಪರಿಕಲ್ಪನೆಯ ಪ್ರಭಾವವು ಇದಕ್ಕೆ ಕಾರಣವಿರಬಹುದು. ದೇವತೆಗಳಿಗೆ ಬೆಳ್ಳಿ ಬಂಗಾರ ತೊಡುಗೆ ಆರಂಭವಾಗುತ್ತದೆ. ಅನೇಕ ಸಂದರ್ಭದಲ್ಲಿ ದೇವತೆಯ ಹೆಸರೇ ಬದಲಾವಣೆ ಆಗುತ್ತದೆ. ಕಾಳಮ್ಮ, ಕಾಳಿಕಾ ಎಂಬ ಹೆಸರನ್ನು, ಮೂಕಮ್ಮ, ಮೂಕಾಂಬಿಕೆ ಹೀಗೆ ಉಡುಚಮ್ಮ, ಉಡುಚಲಮ್ಮ ಎಂಬ ಹೆಸರನ್ನು ಪಡೆಯುತ್ತಾಳೆ.

ಪ್ರತಿಷ್ಠಿತರಿಗೆ ಸಿಗುವ ಸೌಲಭ್ಯಗಳೆಲ್ಲಾ ಗ್ರಾಮದೇವತೆಗಳಿಗೂ ಸಿಗಲು ಪ್ರಾರಂಭವಾದದ್ದು ಆಧುನೀಕರಣದ ಪರಿಣಾಮ. ಗ್ರಾಮದೇವತೆಯ ಹಬ್ಬದಲ್ಲಿ ಅನುವಂಶಿಕವಾಗಿ ಮಡಿವಾರು ಹಿಡಿಯುತ್ತಿದ ಪಂಜಿನ ಬದಲು ಟ್ಯೂಬೇಲೈಟುಗಳನ್ನು ಹಿಡಿದು ಮೆರವಣಿಗೆ ಮಾಡುತ್ತಾರೆ. ಕುಂಬಾರ ಮಾಡಿಕೊಡುತ್ತಿದ ಮಣ್ಣಿನ ಹಣತೆಯ ಬದಲು ವಿದ್ಯುತ್ ದೀಪಗಳು ಬೆಳಗುತ್ತವೆ. ಕ್ಷೌರಿಕನ ಓಲಗ ಮತ್ತು ಅಸ್ಪೃಶ್ಯನ ತಮಟೆಯ ಬದಲು ಗ್ರಾಮ ಫೋನ್ ರೇಕಾರ್ಡಗಳು ಧ್ವನಿವರ್ಧಕದ ಮೂಲಕ ಕೇಳಿಸುತ್ತವೆ. ಇವು ಹಳ್ಳಿಯ ಹೆಂಗಸರು ಗ್ರಾಮದೇವತೆಗಳನ್ನು ಕುರಿತು ಹಾಡುವ ಹಾಡುಗಳನ್ನೂ ಮೂಲೆಗುಂಪು ಮಾಡುತ್ತವೆ. ಟ್ರಾಕ್ಟರಿನಲ್ಲಿ ಗ್ರಾಮ ದೇವತೆಯ ಮೆರವಣಿಗೆ ಹೊರಡುವುದರಿಂದ ಮಡಿವಾಳರು ಹಾಸುತ್ತಿದ್ದ ನಡೆಮೂಡಿ ಇಲ್ಲವಾಗುತ್ತದೆ. ಆಧುನಿಕ ವಾಹನ ಸೌಕರ್ಯ ವ್ಯವಸ್ಥೆಯು ಜಾತ್ರೆ ಹಬ್ಬಗಳಿಗೆ ಹೆಚ್ಚು-ಹೆಚ್ಚು ಜನರನ್ನು ಆಕರ್ಷಿಸಲು ಸಹಾಯಕವಾಗಿದೆ. ಜಾತ್ರೆಯಲ್ಲಿ ನಾಟಕ ಕಂಪನಿಗಳಲ್ಲದೆ ಟೂರಿಂಗ್ ಟಾಕೀಸುಗಳೂ, ಸರ್ಕಸ್ ಕಂಪನಿಗಳೂ ಉಂಟು. ಮಡಿಕೆ ಕುಡಿಕೆಗಳಿದ್ದ ಮಾರುಕಟ್ಟೆಯಲ್ಲಿ ಆಧುನಿಕ ಸ್ಟೀಲ್ ಮತ್ತು ಪ್ಲಾಸ್ಟಿಕ್ ಪಾತ್ರೆಗಳನ್ನು ಕಾಣುತ್ತೇವೆ. ಬೆಂಡು ಬತ್ತಾಸು ಮಾರುತ್ತಿದ್ದ ಜಾಗದಲ್ಲಿ ಆಧುನಿಕ ತಿಂಡಿ ತಿನಸುಗಳನ್ನು ಮಾರುವ ಹೋಟೆಲುಗಳು ಕಂಡುಬರುತ್ತವೆ. ಹೀಗೆ ಗ್ರಾಮದೇವತೆಯ ಜಾತ್ರೆಗಳು ವಾಣಿಜ್ಯ ಸ್ವರೂಪವನ್ನು ಪಡೆದು ಕೊಳ್ಳುತ್ತಿವೆ. ಜನಪದರು ತಮ್ಮ ಮತ್ತು ಮಕ್ಕಳ ಹಾಗೂ ದನಕರುಗಳ ಆರೋಗ್ಯವನ್ನು ಕಾಪಾಡಲು ಗ್ರಾಮದೇವತೆಗಳ ಮೊರೆಹೋಗುತ್ತಿದ್ದರು. ಆದರೆ ಈಗ ಅಸ್ಪತ್ರೆಗಳ ಸ್ಥಾಪನೆಯಿಂದಾಗಿ ಜನಗಳ ಮತ್ತು ದನಗಳ ಆರೋಗ್ಯವನ್ನು ನೋಡಿಕೊಳ್ಳುವುದರಿಂದ ಗ್ರಾಮದೇವತೆಗಳನ್ನು ಗ್ರಾಮೀಣರು ಕೇವಲ ಮಾನಸಿಕವಾಗಿ ಅವಲಂಬಿಸಿದ್ದಾರೆ. ಕಳ್ಳತನ ಆಸ್ತಿಯ ಜಗಳಗಳಿಗೆ ಗ್ರಾಮೀಣರು ಗ್ರಾಮದೇವತೆಗಳನ್ನು ಪರಿಹಾರಕ್ಕಾಗಿ ಅವಲಂಭಿಸುವುದರ ಬದಲು ಪೋಲಿಸ್ ಠಾಣೆಗಳು ಮತ್ತು ಕೋರ್ಟು ಕಛೇರಿಗಳನ್ನು ಆಶ್ರಯಿಸುತ್ತಾರೆ.

ಜನರ ಒಗ್ಗಟ್ಟಿನ ಸಂಕೇತವಾಗಿದ್ದ ದೇವತೆಯ ಜಾಗದಲ್ಲಿ ಗ್ರಾಮೀಣ ಮುಖಂಡರುಗಳು ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾಗಿ ಅಧಿಕಾರ ಚಲಾಯಿಸುತ್ತಾರೆ. ಗ್ರಾಮೀಣ ಜನತೆ ತಮ್ಮ ವಿವಿಧ ರೀತಿಯ ಸಮಸ್ಯೆಗಳಿಗೆ ರೋಗರುಜಿನ, ಜಗಳ ಸಂಕಟ ಇತ್ಯಾದಿ ಇದ್ದ ಪಾರಂಪಾರಿಕ ತಂತ್ರಜ್ಞಾನದ ಒಂದು ಅವಿಭಾಜ್ಯ ಅಂಗವಾಗಿ

ಗ್ರಾಮದೇವತೆಯನ್ನು ಪರಿಗಣಿಸುತ್ತಿದ್ದರು. ಹಿಂದೆ ಕಾಯಿಲೆಯಾದಾಗ ಮದ್ದು ಕೊಡಿಸುವುದು ಎಷ್ಟು ಅನಿವಾರ್ಯವೋ ಅಷ್ಟೇ ಅನಿವಾರ್ಯ ಗ್ರಾಮದೇವತೆಗೆ ಹರಕೆ ಹೊರುವುದಾಗಿತ್ತು. ಆದರೆ ಆಧುನಿಕರಣದ ಪರಿಣಾಮವಾಗಿ ಹೊಸ ಪರಿಹಾರ ವ್ಯವಸ್ಥೆಗಳು ಪ್ರವೇಶವಾಗುತ್ತಿದ್ದಂತೆ ಗ್ರಾಮದೇವತೆಯ ಕೃಪಾ ಶಕ್ತಿಗೆ ಈ ತಂತ್ರಜ್ಞಾನದಲ್ಲಿ ಬಹುಮಟ್ಟಿಗೆ ಕಡಿಮೆ ಸ್ಥಾನ ಸಿಗುತ್ತಿದೆ. ಶಿಷ್ಟದೈವಗಳು ಸಮಾಜದಲ್ಲಿ ತಮ್ಮನ್ನು ಪೂಜಿಸುವ ವರ್ಗದವರಂತೆಯೇ ಪ್ರಭಾವ ಶಾಲಿಗಳಾಗಿ ಗ್ರಾಮದೇವತೆಗಳನ್ನು ಹಿಂದೂಡುತ್ತಿವೆ. ಶಿಷ್ಟ ಮೌಲ್ಯಗಳ ದಾಳಿ ಜನಪದ ಮೌಲ್ಯಗಳು ತುತ್ತಾಗುತ್ತಿರುವುದರಿಂದ ಸಮಾಜದ ಜೊತೆಗೆ ದೈವಗಳ ಸಂಬಂಧ ಸಡಿಲವಾಗುತ್ತಿದೆ. ಆಧುನೀಕರಣದಲ್ಲಿ ನಂಬಿಕೆ ಇರುವ ಆಳುವ ವರ್ಗ ಕೆಲವು ಜನಪದ ಆಚರಣೆಗಳನ್ನು ನಿಲ್ಲಿಸುವ ಪಣತೊಟ್ಟಿರುವುದರಿಂದ ಅವು ಕಣ್ಮರೆ ಆಗುತ್ತಿವೆ.

ಇಷ್ಟಾದರೂ ಅಷ್ಟೊಂದು ಆಧುನಿಕತೆ ಬೆಳೆಯದ ಸಂಡೂರಿನ ಗ್ರಾಮೀಣರಲ್ಲಿ ಹಿಂದೆ ಇದ್ದ ಗ್ರಾಮದೈವಗಳ ಆಚರಣೆಗಳು ಕಾಣಸಿಗುತ್ತವೆ. ಅವರು ಮಾನಸಿಕವಾಗಿ ಮತ್ತು ದೈಹಿಕವಾಗಿ ದೈವಗಳನ್ನು ಅವಲಂಬಿಸಿದ್ದಾರೆ ಎಂದರೆ ತಪ್ಪಾಗದು.

ಗ್ರಾಮದೈವಗಳ ಅಧ್ಯಯನದ ಅಗತ್ಯ

ಗ್ರಾಮೀಣ ಜೀವನದಲ್ಲಿ ಅನಾದಿ ಕಾಲದಿಂದಲೂ ಹಾಸುಹೊಕ್ಕಾಗಿ ಬೆರೆತು ಬಂದಿರುವ ಗ್ರಾಮದೈವಗಳು ಜನಪದ ಬದುಕಿನ ಒಂದು ಭಾಗವಾಗಿವೆ. ಜನಪದ ಸಂಸ್ಕೃತಿ, ಅರ್ಥವ್ಯವಸ್ಥೆ, ಸಾಮಾಜಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವವರು ಗ್ರಾಮದೈವಗಳನ್ನು ಅಗತ್ಯವಾಗಿ ಗಮನಿಸಬೇಕಾಗುತ್ತದೆ. ಒಂದು ದೇವತೆಗೆ ಸಂಬಧಿಸಿದ ಹಾಡು ಕಥೆ, ಐತಿಹ್ಯ, ದಂತಕಥೆ, ಪುರಾಣದಲ್ಲಿ ಆಯಾ ಜನಾಂಗದ ಹಲವು ಸಮಸ್ಯೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು ಸಾಧ್ಯವಿದೆ. ದೈವಗಳ ಸಮಗ್ರ ಅಧ್ಯಯನದಿಂದ ಆ ದೈವವನ್ನು ಪೂಜಿಸುವ ಜನರ ಜೀವನ ರೀತಿ, ಚಿಂತನ ವಿಧಾನಗಳು ಅನಾವರಣಗೊಳ್ಳುತ್ತಾ ಹೋಗುತ್ತವೆ.

ಇಂದು ಸಮಾಜ ತೀವ್ರವಾದ ಬದಲಾವಣೆಗಳಿಗೆ ಒಳಗಾಗುತ್ತಿದೆ. ವೈಜ್ಞಾನಿಕ ಸಂಶೋಧನೆ, ಕೈಗಾರಿಕೀಕರಣ, ನಗರೀಕರಣ ಇವುಗಳ ಫಲವಾಗಿ ಮಾನವ ಆಲೋಚನೆಯ ರೀತಿ ಬದಲಾಗುತ್ತಿದೆ. ಹೊಸ ಬಗೆಯ ವಿಚಾರಗಳಿಗೆ, ಬದುಕಿಗೆ ಮನುಷ್ಯ ತನ್ನನ್ನು ಒಡ್ಡಿಕೊಂಡು ಜಗತ್ತಿನ ನಾನಾ ಭಾಗಗಳ ಕಡೆ ಕಣ್ಣಾಡಿಸುತ್ತಿದ್ದಾನೆ. ಚಂದ್ರಗ್ರಹವನ್ನು ಕಂಡು ಬಂದದ್ದು ಆಗಿದೆ. ಇಂಥ ಸ್ಥಿತಿಯಲ್ಲಿ ನಮ್ಮ ಜನಪದ ಸಂಸ್ಕೃತಿಯ ರೂಪವೂ ಬದಲಾವಣೆಗೆ ಒಳಗಾಗುತ್ತಿದೆ. ಹಿಂದಿನಿಂದ ಬಂದ ಹಾಡು, ಕಥೆ, ಗಾದೆ, ಒಗಟುಗಳು ಜೊತೆಗೆ ನಮ್ಮ ಗ್ರಾಮ ದೇವತೆಗಳೂ ಅವುಗಳಿಗೆ ಸಂಬಂಧಿಸಿದ ಪುರಾಣ ಆಚರಣೆಗಳೂ ದಿನದಿನಕ್ಕೂ ಕಡಿಮೆಯಾಗುತ್ತಾ ಕಣ್ಮರೆಯಾಗುತ್ತಿವೆ. ಇಲ್ಲವೆ ರೂಪಾಂತರಗೊಳ್ಳುತ್ತಿವೆ. ಒಂದು ಕಾಲಘಟ್ಟದಲ್ಲಿ ಇವುಗಳಿಗಿದ್ದ ಸ್ವರೂಪವನ್ನು ಸಂಗ್ರಹಿಸಿ ಅವುಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಗ್ರಾಮದೇವತೆಗಳು ಗ್ರಾಮೀಣರ ಮಾನಸಿಕ ಅಗತ್ಯವೆನ್ನಬಹುದು. ದೇವತೆಯಿಲ್ಲದೆ ಅವರು ಯಾವುದನ್ನೂ ಆರಂಭಿಸುವುದಿಲ್ಲ. ಬೆಳಗಿನಿಂದ ಸಂಜೆಯ ತನಕದ ದುಡಿಮೆಯಲ್ಲಿ, ಇನ್ನಿತರ ಸಮಯದಲ್ಲಿ ದೇವರ ಆಸರೆ ಅವರಿಗೆ ಬೇಕು. ಅವರ ಎಲ್ಲ ಚಿಂತನೆಗಳೂ ಕ್ರಿಯೆಗಳೂ ಆಣೆ ಪ್ರಮಾಣಗಳೂ ದೇವತೆಯ ಸಾಕ್ಷಿಯಲ್ಲಿ ಸಾಗುತ್ತವೆ.

ಗ್ರಾಮದೇವತೆಗೆ ಸಂಬಂಧಿಸಿದಂತೆ ಊರಿನ ಎಲ್ಲಾ ಜಾತಿಗಳ ಜನಕ್ಕೂ ಒಂದೊಂದು ಜವಾಬ್ದಾರಿ ವಿತರಣೆಯಾಗಿರುತ್ತದೆ. ಇಡೀ ಗ್ರಾಮದ ಐಕ್ಯತೆ, ಸಾಮರಸ್ಯದ ಜೀವಾಳ ಈ ಗ್ರಾಮದೇವತೆಯೇ ಆಗಿರುತ್ತದೆ. ಆದ್ದರಿಂದ ಪರೋಕ್ಷವಾಗಿ ವ್ಯಕ್ತಿಯ ಮತ್ತು ಗ್ರಾಮ ಸಮೂಹದ ಮಾನಸಿಕ ನಿಯಂತ್ರಣ ಈ ದೇವತೆಯಲ್ಲಿ ಆಗಿರುತ್ತದೆ.

ಗ್ರಾಮದೇವತೆ ಎಂದರೆ ಕೇವಲ, ಧಾರ್ಮಿಕ ಆಚರಣೆ ಎಂದು ಭಾವಿಸುವುದಕ್ಕಿಂತ ಗ್ರಾಮಜೀವನದ ಹಲವು ಹತ್ತು ಮುಖಗಳನ್ನು ತೆರೆದು ತೋರಿಸುವ ಸಾಧನ ಎಂದು ಹೇಳುವುದೇ ಸೂಕ್ತ. ಜನತೆಯ ಜೀವನವಿಧಾನ ಬದಲಾಗುತ್ತಿರುವ ವೇಗದಲ್ಲೇ ಗ್ರಾಮದೈವಗಳ ಸ್ವರೂಪ, ಪೂಜಾ ವಿಧಾನಗಳೂ ಸಂಸ್ಕೃತೀಕರಣಕ್ಕೆ ಒಳಗಾಗುತ್ತಿವೆ. ವಿವಿಧ ಕಾಲಘಟ್ಟಗಳಲ್ಲಿ ದೇವತೆಗಳು ಪಡೆದುಕೊಳ್ಳುತ್ತಿರುವ ಹೊಸ ಹೊಸ ಸ್ವರೂಪ ಕುತೂಹಲಕಾರಿಯೂ ಅಭ್ಯಾಸ ಯೋಗ್ಯವೂ ಆಗಿದೆ.

ಗ್ರಾಮದೇವತೆಯ ಅಭ್ಯಾಸದಿಂದ ಪ್ರಯೋಜನವಿದೆ. ಕರ್ನಾಟಕವು ಭಾರತದ ಪ್ರಾಚೀನ ಸಂಸ್ಕೃತಿ ದಾಖಲೆಗಳನ್ನು ಜೀವಂತವಾಗಿ ಉಳಿಸಿಕೊಂಡಿರುವ ರಾಜ್ಯಗಳಲ್ಲಿ ಒಂದು. ಇಲ್ಲಿ ಹಳ್ಳಿಯ ಬದುಕು ಇನ್ನೂ ಹಸಿರಾಗಿದೆ. ಕರ್ನಾಟಕ ಗ್ರಾಮದೇವತೆಯ ಅಭ್ಯಾಸದಿಂದ ಕರ್ನಾಟಕದ ಜನಜೀವನವನ್ನು ತಿಳಿದುಕೊಳ್ಳಬಹುದು. ಕರ್ನಾಟಕದ ಗ್ರಾಮದೇವತೆಗಳಿಗೂ ಜನಜೀವನಕ್ಕೂ ನಿಕಟವಾದ ಸಂಬಂಧವಿದೆ. ಜನರ ಮೇಲೆ ಗ್ರಾಮದೇವತೆಗಳ ಪ್ರಭಾವ ದಟ್ಟವಾಗಿದೆ. ಗ್ರಾಮದೇತೆಯ ಪ್ರಭಾವಕ್ಕೆ ಒಳಗಾಗದ ಹಳ್ಳಿಗಳು ಸಿಗುವುದು ಕಷ್ಟ. ಹುಟ್ಟಿದ ಕೂಡಲೇ ಹಳ್ಳಿಗ ಗ್ರಾಮದೇವತೆಯ ಪ್ರಭಾವಕ್ಕೆ ಒಳಗಾಗುತ್ತಾನೆ. ತಮ್ಮ ದೇವರ ಹೆಸರಿನಲ್ಲಿ ನಾಮಕರಣ ಮಾಡುವುದು, ಮುಡಿ ಕೊಡುವುದು, ಆಪತ್ತು ಬಂದಾಗ ಹರಕೆ ಕಟ್ಟಿಕೊಳ್ಳುವುದು, ಮದುವೆ ಮುಂಜಿ ಮಾಡುವುದು ಹೀಗೆ ನಾನಾ ರೂಪಗಳಲ್ಲಿ ಮನೆದೇವರ ಪೂಜೆ ನಡೆಯುತ್ತದೆ. ಗ್ರಾಮದೇವತೆ ಹಳ್ಳಿಗರ ಮನದೇವತೆಯೂ ಮನೆದೇವರೂ ಆಗಿರುತ್ತದೆ. ತಮ್ಮ ಮನೆದೇವರಿಗೆ ಪ್ರತಿಯೊಬ್ಬರೂ ಭಯಭಕ್ತಿಯಿಂದ ನಡೆದುಕೊಳ್ಳುತ್ತಾರೆ.

ಅಧ್ಯಾಯ ಎರಡು

ಸಂಡೂರಿನ ಭೌಗೋಳಿಕ ಹಿನ್ನೆಲೆ

ಅಧ್ಯಾಯ ಎರಡು

ಸಂಡೂರಿನ ಭೌಗೋಳಿಕ ಹಿನ್ನೆಲೆ

"ಮರಳು ಕಾಡಿನಲ್ಲಿನ ನೀರ್ದಾಣ" ಎಂದು ಗಾಂಧೀಜಿಯವರು ವರ್ಣಿಸಿದಂತೆ ಈ ಸಂಡೂರು ಪ್ರದೇಶವು ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರಿನ ಕೆಂಪು ಗುಡ್ಡಗಳು, ಹಚ್ಚ ಹಸಿರಿನಿಂದ ಕೂಡಿರುವುದರಿಂದ ಇದು ನಿಜವಾಗಿಯು ಸಮುದ್ರದಲ್ಲಿನ ಒಂದು ಸುಂದರವಾದ ದ್ವೀಪದಂತೆ ಕಂಗೊಳಿಸುತ್ತಿದೆ. ಸಂಡೂರು ಒಂದು ಪ್ರಸಿದ್ಧವಾದ ಗ್ರಾಮವು (ನಗರವು) **ಸ್ಕಂದಪುರಿ** ಎಂದು ಪುರಾಣಗಳಲ್ಲಿ ಪ್ರಸಿದ್ಧವಾಗಿದೆ. ಖನಿಜಗಳ ತವರುಮನೆಯಾದ ಇಲ್ಲಿ ಸುತ್ತಲೂ ಎತ್ತರವಾದ ಬೆಟ್ಟಗಳು ಗಗನ ಚುಂಬಿಸುವಂತಿದ್ದು ನಡುವೆ ತಾಯಿ ಮಡಿಲಲ್ಲಿರುವ ಮುಗ್ಧ (ಮುದ್ದು) ಮಗುವಿನಂತೆ ಸಂಡೂರು ವನದೇವಿಯರು ಕಟ್ಟಿಸಿರುವ ಹಸಿರು ತೊಟ್ಟಿಲಲ್ಲಿ ರಾರಾಜಿಸುತ್ತಿದೆ.

ಎತ್ತರವಾದ ಬೆಟ್ಟಗಳ ತಪ್ಪಲಿನಲ್ಲಿ ಶಾಂತವಾಗಿ ಬೆಳೆಯುತ್ತಿರುವ ಸುಂದರ ನಗರವೇ ಸಂಡೂರು. ಕರ್ನಾಟಕದ ವೈಭವಗಳನ್ನು ಇಡೀ ಜಗತ್ತಿಗೆ ಸಾರಿ, ಉತ್ತುಂಗ ಶಿಖರಕ್ಕೇರಿಸಿ ಅತೀ ಶ್ರೀಮಂತಿಕೆಯಿಂದ ಮೆರೆದ ವಿಜಯನಗರ ಸಾಮ್ರಾಜ್ಯದ ನೆರೆಯ ಗ್ರಾಮ (ನಗರ). ಇದು ನಿಸರ್ಗ ಸಂಪತ್ತಿನ ತವರೂರಾಗಿದೆ. ಇದು ಬಳ್ಳಾರಿ ಜಿಲ್ಲೆಯ ಎಂಟು ತಾಲೂಕುಗಳಲ್ಲಿ ಮೊದಲು ಸಂಡೂರು ಗ್ರಾಮವಾಗಿದ್ದು ನಂತರ ನಾಗರೀಕತೆಯ ಬೆಳವಣಿಗೆಯಿಂದ ಇದು ಒಂದು ತಾಲ್ಲೂಕಾಯಿತು. ಇದು ಬಳ್ಳಾರಿ ಜಿಲ್ಲೆಯ ಇತರ ತಾಲ್ಲೂಕುಗಳಿಗಿಂತ ಹೆಚ್ಚು ಎತ್ತರವಾದ ಸ್ಥಾನದಲ್ಲಿದೆ.

ಸಂಡೂರು ಪ್ರದೇಶದ ಉತ್ತರದಲ್ಲಿ ಹೊಸಪೇಟೆ ತಾಲ್ಲೂಕು, ದಕ್ಷಿಣಕ್ಕೆ ಕೂಡ್ಲಿಗಿ ತಾಲ್ಲೂಕು, ಪೂರ್ವಕ್ಕೆ ಬಳ್ಳಾರಿ ತಾಲ್ಲೂಕು ಹಾಗೂ ಆಂಧ್ರ ಪ್ರದೇಶ ಮತ್ತು ಪಶ್ಚಿಮಕ್ಕೆ ಹೊಸಪೇಟೆ ತಾಲ್ಲೂಕುಗಳು ಸುತ್ತುವರೆದಿವೆ. ಈ ಪ್ರದೇಶವು ದಕ್ಷಿಣದಿಂದ ಉತ್ತರಕ್ಕೆ ಇಳಿಜಾರಾಗಿದ್ದು ಬೆಟ್ಟದಿಂದಾವರಿಸಿದೆ.

ಈ ಪ್ರದೇಶದ ಬೆಟ್ಟ ಸಾಲುಗಳ ಪೂರ್ವಭಾಗದಲ್ಲಿ ಎತ್ತರವಾದ ಶಿಖರಗಳನ್ನು ವಾಯುವ್ಯದಿಂದ ಆಗ್ನೇಯಕ್ಕೆ (ದರೋಜಿ ಕೆರೆ) ಹಬ್ಬಿರುವ ಸುಗ್ಗಲ ದೇವಿ ಬೆಟ್ಟದಲ್ಲಿ ತಾಮ್ರದ ಅದಿರು ಇರುವುದರಿಂದ ತಾಮ್ರ ಪರ್ವತವೆಂದು ಕರೆಯುತ್ತಾರೆ.

ಪರ್ವತವೆಂದು ಕರೆಯಿಸಿಕೊಳ್ಳುವ ಈ ಪ್ರದೇಶಕ್ಕೆ ಪುರಾಣಗಳ ಹಿನ್ನೆಲೆಯ ಪ್ರಕಾರ ಕೃತಯುಗದಲ್ಲಿ ದೇವಗಿರಿ ಎಂದೂ, ತ್ರೇತಾಯುಗದಲ್ಲಿ ಸ್ವರ್ಣಗಿರಿಯೆಂದೂ, ದ್ವಾಪರ ಯುಗದಲ್ಲಿ ದಿವ್ಯಾಚಲವೆಂದೂ, ಕಲಿಯುಗದಲ್ಲಿ ಲೋಹಾಚಲವೆಂದು ಕರೆಯುಲಾಗುತ್ತಿತ್ತು. ಈಗ ಇಲ್ಲಿ ಕಬ್ಬಿಣದ ಕಲ್ಲುಗಳನ್ನು ಹೆಚ್ಚಾಗಿ ಅಗೆದು ತೆಗೆಯುವುದರಿಂದ ಇದು "ಕಬ್ಬಿಣ ಕಲ್ಲು ಪರ್ವತ" ಎಂದು ಕರೆಯಬಹುದಾಗಿದೆ. ಪುರಾಣ ಪ್ರಸಿದ್ಧವಾದ ಈ ಗಿರಿಯಲ್ಲಿ ದೇವ ದೇವೋತ್ತಮ ದೇವತಾ ಸಾರ್ವ ಸೌಭಮರು, ವೇದ-ವೇದಾಂತ ಪುರೋಹಿತರು ಇತಿಹಾಸದ ಚರಿತ್ರೆಯಲ್ಲಿ ಬರುವವರು. ಇಲ್ಲಿ ಅನೇಕ ದೈವಗಳ ಆಚರಣೆಗಳನ್ನು ಕಾಣಬಹುದಾಗಿದೆ.

ಸಂಡೂರು ಬಳ್ಳಾರಿಯಿಂದ ೪೮ ಕಿ.ಮೀ ಮತ್ತು ಬೆಂಗಳೂರಿನಿಂದ (ನಗರದಿಂದ) ವಾಯುವ್ಯದಲ್ಲಿ ೩೫೪ ಕಿ.ಮೀ ದೂರದಲ್ಲಿದೆ. ಈ ಪ್ರದೇಶವನ್ನು ಆಡಳಿತ ಅನುಕೂಲತೆಯ ದೃಷ್ಟಿಯಿಂದ ಮೂರು ಪ್ರಮುಖ ಹೋಬಳಿಗಳನ್ನಾಗಿ ವಿಂಗಡಿಸಲಾಗಿದೆ.

೧. ಸಂಡೂರು

೨. ತೋರಣಗಲ್

೩. ಚೋರನೂರು

ಇವು ಈ ಹೋಬಳಿಗಳಾಗಿವೆ. ಈ ತಾಲೂಕಿನಲ್ಲಿ ಬರುವ ಗ್ರಾಮಗಳಲ್ಲಿ ಸಂಡೂರು ಒಂದೇ ಪಟ್ಟಣದಂತಹ ಗ್ರಾಮವೆಂದೆನಿಸಿದೆ. ಸಂಡೂರಿನಲ್ಲಿ ದೊರೆಯುತ್ತಿರುವ ಖನಿಜಗಳಿಂದಾಗಿ ಇದು ಬಳ್ಳಾರಿ ಜಿಲ್ಲೆಯ ಪ್ರಮುಖ ಪ್ರದೇಶವಾಗಿವೆ.

ಸಂಡೂರು ಪ್ರದೇಶವೂ ಬಳ್ಳಾರಿ ಜಿಲ್ಲೆಯ ಮಧ್ಯ ಭಾಗದಲ್ಲಿದೆ. ಇದನ್ನು ಪೂರ್ವಭಾಗದ ತಾಲ್ಲೂಕು (ಪ್ರದೇಶ) ಎಂದು ಕರೆಯಲಾಗುತ್ತಿದೆ. ನೈಸರ್ಗಿಕವಾಗಿ ಸಮೃದ್ಧವಾಗಿದೆ. ಅನೇಕ ಸಂಪತ್ತುಗಳನ್ನು ತನ್ನ ಗರ್ಭದಲ್ಲಿರಿಸಿಕೊಂಡಿದೆ.

ಪಾರಂಪರಿಕ ಉಲ್ಲೇಖಗಳ ಪ್ರಕಾರ ಇದರ ಹಿಂದಿನ ಹೆಸರು ಸ್ಕಂದಪುರಿ. ಕನ್ನಡದಲ್ಲಿ ಸಂದು ಎಂದರೆ ಕಣಿವೆ ಅಥವಾ ಸಂಧಿ ಎಂಬುವುದರಿಂದ ಈ ಊರಿಗೆ ಸಂಡೂರು ಎನ್ನುವ ಹೆಸರು ಬಂದಿರಬೇಕು.

ಸಂದುಗಳಿಂದ, ಕಿರಿದಾದ ಗಣಿಗಳಿದ ಕೂಡಿದ ಊರಿಗೆ ಸಂದೂರು ಎಂಬ ಹೆಸರು ಬಂದಿದೆ ಎನ್ನುತ್ತಾರೆ. ಅಲ್ಲದೆ ಇದಕ್ಕೆ ಪ್ರಾಚೀನ ಕಾಲದಲ್ಲಿ ಸ್ಕಂದಪುರಿ ಎಂಬ ಹೆಸರು ಇದ್ದು, ಮುಂದೆ ಅದೇ ಸಂಡೂರು ಆಯಿತೆಂದು ಹೇಳಲಾಗುತ್ತಿದೆ. ಇನ್ನೊಂದು ಐತಿಹ್ಯದ ಪ್ರಕಾರ ಕಣಿವೆಗಳು ಮೂಲಕ ಪ್ರವೇಶ ಇರುವ ಸಂದೂರು - ಸಂಡೂರು ಆಗಿರಬೇಕು. ಇಲ್ಲಿ ಪಾರ್ವತಿ ದೇವಾಲಯ ಬಹು ಪ್ರಾಚೀನವಾದುದು. ಇದು ಚಂಡಿ ಎಂಬ ಹೆಸರಿನಿಂದಾಗಿ ಚಂಡಿ + ಊರು = ಚಂಡಿಯೂರು > ಸಂಡೂರ (ಚಂಡೂರು, ಸಂಡೂರು) ಆಗಿರಬೇಕೆಂದು ಊಹಿಸಿದ್ದಾರೆ. ತಮಿಳಿನ 'ಕಂದಪುರಾಣಂ' ಸಂಸ್ಕೃತದ ಸ್ಕಂದಪುರಾಣದ ಮೂಲವಾಗಿದೆ. ಈ ಪುರಾಣದ ಶಂಕರ ಸಂಹಿತೆಯಲ್ಲಿ ಸ್ಕಂದನ ಕಥೆ ಬರುತ್ತದೆ. ಸ್ಕಂದನು ಈ ಪ್ರದೇಶಕ್ಕೆ ಸೇರಿದವನಾಗಿದ್ದುದರಿಂದ ಇದಕ್ಕೆ ಸ್ಕಂದಪುರ ಬಂತೆಂದು ಹೇಳಲಾಗುತ್ತದೆ.

ಸುತ್ತಲೂ ದೊಡ್ಡ-ದೊಡ್ಡ ಬೆಟ್ಟ-ಗುಡ್ಡಗಳು, ಸಣ್ಣ-ಸಣ್ಣ ಝರಿಗಳು, ಈ ಝರಿಗಳಿಂದ ಕೂಡಿದ ನೀರಿನ ಸೆಲೆಗಳು, ಅದಿರಿನ ನಿಕ್ಷೇಪಗಳು, ಫಸಲು ಕೊಡುವ ಭೂ ಭಾಗಗಳು, ಇತಿಹಾಸದ ಕಾಲದಿಂದಲೂ ಜೀವಿಗಳಿಗೆ ಮಾನವನಿಗೆ ಸಹಕಾರಿಯಾದವುಗಳಾಗಿವೆ. ಇದು ನಿಸರ್ಗ ಸಂಪತ್ತಿನಲ್ಲಿಯೇ ವಿಶಿಷ್ಟವಾಗಿದೆ. ಮ್ಯಾಂಗನಿಸ್ ಮತ್ತು ಕಬ್ಬಿಣ ಅದಿರುಗಳು ಸಂಡೂರು ಪ್ರದೇಶದ ಬಹು ಮುಖ್ಯ ಸಂಪತ್ತುಗಳಾಗಿವೆ. ಕರ್ನಾಟಕದಲ್ಲಿ ಅತಿಹೆಚ್ಚು ಗಣಿಗಾರಿಕೆ ಸಂಡೂರು ಪ್ರದೇಶದಲ್ಲಿ ನಡೆಯುತ್ತಿದೆ. ಈ ಖನಿಜಗಳಿಂದಾಗಿಯೇ ವಿಶ್ವ ವಿಖ್ಯಾತಿಯನ್ನು ಗಳಿಸಿದೆ. ಪ್ರಸ್ತುತ ಅದಿರು ವಿದೇಶಗಳಿಗೆ ರಫ್ತಾಗುತ್ತದೆ. ಈ ಪ್ರದೇಶ ಆರ್ಥಿಕ ಬೆಳವಣಿಗೆಗೆ ಸಹಾಯಕವಾಗಿದೆ. ಒಟ್ಟಿನಲ್ಲಿ ಸಂಡೂರು ಪ್ರದೇಶವೂ ಬಳ್ಳಾರಿಯ "ಮಲೆನಾಡಿನ ಸೀಮೆಯ ನಾಡಾಗಿದೆ."

ಸಂಡೂರು ಪ್ರದೇಶದ ವಿಸ್ತೀರ್ಣ ೯೦೧, ೭೯ ಚ ಕಿ.ಮೀ ಗಳು. ಇದರಲ್ಲಿ ಭೌಗೋಳಿಕ ಪ್ರದೇಶದ ವಿಸ್ತೀರ್ಣ ೯೪.೩೫೯ ಹೆಕ್ಟೇರುಗಳು. ಇದರಲ್ಲಿ ಅರಣ್ಯ ಪ್ರದೇಶ ೨೪. ೧೧೮ ಹೆಕ್ಟೇರುಗಳು. ೨೪.೮೪೯ ಹೆಕ್ಟೇರುಗಳಷ್ಟು ಜೀಳು ಜಮೀನು ಇರುತ್ತದೆ. ಈ ಪ್ರದೇಶದಲ್ಲಿ ಮರಳು ಮಿಶ್ರಿತ ಕೆಂಪು ಮಣ್ಣು ಮತ್ತು

ಫಲವತ್ತಾದ ಜೇಡಿಮಣ್ಣು ಹರಡಿದೆ. ಗ್ರಾನಾಯಿಟ್, ಸ್ಯಾಂಡಸ್ಟೋನ್, ಜಾಸ್ಪರ ಮುಂತಾದ ಶಿಲೆಗಳು ಹಾಗೂ ಬೆಟ್ಟಗಳಲ್ಲಿ ಕಬ್ಬಿಣ, ಬಂಗಾರ, ಮತ್ತು ತಾಮ್ರದ ಅದುರಿನಿಂದ ಕೂಡಿದ ಶಿಲೆಗಳಿವೆ. ಸಂಡೂರು ಪ್ರದೇಶದಲ್ಲಿ ಅರಣ್ಯ ಹೆಚ್ಚಾಗಿದ್ದು ಇದರ ಒಟ್ಟು ವಿಸ್ತೀರ್ಣ ೬೦೭.೪೪ ಚ.ಕಿ.ಮೀ ಇದೆ.

೧.೧ ಭೂ ಪರಿಚಯ

ಯಾವುದೇ ಪ್ರದೇಶದ ಪರಿಚಯಕ್ಕೆ ಆ ಭಾಗದ ಭೂ ಪರಿಚಯ ಅವಶ್ಯಕ. ಈ ಪರಿಚಯದಿಂದ ಅಲ್ಲಿಯ ಜನರ ಜೀವನ ವಿಧಾನವನ್ನು ಅರಿಯಬಹುದಾಗಿದೆ. ಈ ಸೌಂದರ್ಯವನ್ನೇ ಹೆಚ್ಚಿಸುವುದರಲ್ಲಿ ಮರಗಿಡಗಳು, ಉದ್ಯಾನಗಳು ಪಾತ್ರ ವಹಿಸುತ್ತವೆ. ಈ ಭಾಗದ ಗುಡ್ಡಗಳು ಹಳ್ಳ ಕೊಳ್ಳ ಕೆರೆಗಳು ಪ್ರಧಾನ ಪಾತ್ರ ವಹಿಸುತ್ತವೆ. ಈ ಭಾಗದ ಗುಡ್ಡಗಳು ಬಹುದೊಡ್ಡವು ಆಗಿದ್ದು ಇವು ಸಮುದ್ರದಿಂದ ೩೦೦೦ ದಿಂದ ೪೦೦೦ ಅಡಿಗಳಷ್ಟು ಎತ್ತರವಿವೆ. ಈ ಭಾಗದಲ್ಲಿ ಮರುಳು ಮಿಶ್ರಿತ ಕೆಂಪುಮಣ್ಣು ಹೆಚ್ಚಾಗಿರುವುದರಿಂದ ಮಳೆ ಬಂದಾಗ ಹರಿದು ಬರುವ ನೀರು 'ಕೆಂಪು ಓಕುಳಿ' ಯೋಪಾದಿಯಲ್ಲಿ ಕಂಡು ಬರುತ್ತದೆ.

ಪ್ರಾಕೃತಿಕವಾಗಿ ಇಲ್ಲಿಯ ನೆಲ ಕೆಂಪು ಬಣ್ಣದ ಮರುಳ ಮಿಶ್ರಿತ ಫಲವತ್ತಾದ ಭೂ ಪ್ರದೇಶ. ಜೋಳ, ಸಜ್ಜೆ, ನವಣೆ, ರಾಗಿ, ಮೆಕ್ಕೆ ಜೋಳ, ಮುಂತಾದವುಗಳನ್ನು ಹೆಚ್ಚಾಗಿ ಬೆಳೆಯುವ ಮುಖ್ಯ ಆಹಾರ ಬೆಳೆಗಳು, ಕೆಂಪು ಮತ್ತು ಎರೆ ಮಣ್ಣಿನಲ್ಲಿ ಈರುಳ್ಳಿ, ಶೇಂಗಾ, ಸೂರ್ಯ ಕಾಂತಿ ಮತ್ತಿತ್ತರ ವಾಣಿಜ್ಯ ಬೆಳೆಗಳು ಹಾಗೂ ತರಕಾರಿಗಳನ್ನು ಬೆಳೆಯಾಗುತ್ತದೆ.

ಈ ಭೂ ಭಾಗದಲ್ಲಿ ಕುರುಚಲು ಕಾಡಿಗಿಂತ ಭಿನ್ನವಾದ ಅರಣ್ಯಪ್ರದೇಶವಿದೆ. ಇಲ್ಲಿ ಉಪಯುಕ್ತ ಗಿಡ ಮರಗಳು, ಹುಣಸೆ, ಬೇವು, ಕಕ್ಕೆ, ತಂಗಡಿ, ಹೊನ್ನೆ, ಸೀತಾಫಲ, ದಿಂಡಿಗ, ಹರಗಲು ಮುಂತಾದ ಮರಗಳುಳ್ಳ ಎಲೆ ಉದುರುವ ಮರಗಳ ಕಾಡನ್ನು, ಜೋತೆಗೆ ಶ್ರೀಗಂಧ ಮತ್ತು ಬೀಟೆಯಂತಹ ಮರಗಳುಳ್ಳ ಕಾಡನ್ನು ಕಾಣಬಹುದು.

೧.೨ ಖನಿಜ ಸಂಪತ್ತು

ಕಬ್ಬಿಣ ತಯಾರಿಕೆಯ ಕಾರ್ಯ ಸಂಡೂರು ಪ್ರದೇಶದಲ್ಲಿ ವ್ಯಾಪಕವಾಗಿ ಹರಡಲು ಮುಖ್ಯಕಾರಣವೆಂದರೆ ಉತ್ತಮ ದರ್ಜೆಯ ಕಬ್ಬಿಣದ ಅದಿರು ಯಥೇಚ್ಛವಾಗಿ ದೊರೆಯುವುದು. ಅದಿರು ಇರುವ ಪ್ರದೇಶ ದಟ್ಟವಾದ ಅರಣ್ಯದಿಂದ ಕೂಡಿರುವುದರಿಂದ ಉರುವಲಿನ ಸಮಸ್ಯೆಯೂ ಇರಲಿಲ್ಲ. ಇಲ್ಲಿನ ಸುತ್ತಮುತ್ತಲೂ ರೈತರ ಅಗತ್ಯತೆಗೆ ಬೇಕಾದ ಕಬ್ಬಿಣ ತಯಾರಿಸಲು ಕುಲಕಸುಬುದಾರರಾದ ಮುದ್ದೆಕಮ್ಮಾರರು ಕಬ್ಬಿಣ ತಯಾರಿಸಲು ಆರಂಭಿಸಿದರು. ಇದಕ್ಕೆ ಸಾಕ್ಷಿಯೆಂಬಂತೆ ಯಶವಂತನಗರದ ಬಳಿ ದೊರೆಯುವ ಕಿಟ್ಟದ ರಾಶಿಯ ಗುಡ್ಡಗಳು ಹಾಗೂ ಕುಲುಮೆಯಲ್ಲಿ ಬಳಸುತ್ತಿದ್ದ ಜೇಡಿ ಮಣ್ಣಿನ ಕೊಳವೆಗಳು ಬೂದಿಯರಾಶಿಯನ್ನು ಇಂದಿಗೂ ಇಲ್ಲಿ ಕಾಣಬಹುದಾಗಿದೆ.

ನಮ್ಮ ನಾಗರೀಕತೆ ಶಿಲಾಯುಗ, ಕಂಚಿನಯುಗ ನಂತರ ಕಬ್ಬಿಣ ಯುಗವನ್ನು ಪ್ರವೇಶಿಸಿತು. ಮಾನವನು ಭೂಮಿಯ ಮೇಲೆ ಉದಯವಾಗುವುದಕ್ಕಿಂತ ಮುಂಚೆಯೇ ವಿವಿಧ ಖನಿಜ ನಿಕ್ಷೇಪಗಳು ರೂಪಗೊಂಡಿದ್ದವು. ಮೊದಲು ಹಲವು ಖನಿಜ ಹಾಗೂ ಶಿಲೆಗಳನ್ನು ಬಳಸಲು ಪ್ರಾರಂಭಿಸಿದ ಮಾನವನು ನಂತರ ತಾಮ್ರ ಚಿನ್ನ ಹಾಗೂ ಕಂಚಿನ ಮಿಶ್ರಲೋಹಗಳ ಕಡೆಗೆ ಒಲವು ತೋರಿದನು. ತದನಂತರ ಕಬ್ಬಿಣ ಲೋಹದ ಬಳಕೆಯನ್ನು ಆರಂಭಿಸಿದನು ಎಂಬುದನ್ನು ಪುರಾತತ್ವಶೋಧನೆಗಳಿಂದ ತಿಳಿಯಬಹುದಾಗಿದೆ. ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಲ್ಲಿಯೂ ಈ ಲೋಹದ ವರ್ಣನೆಯಿದೆ.

ಸಂಡೂರು ಪ್ರದೇಶದ ಕಬ್ಬಿಣದ ಅದಿರು ಮತ್ತು ಮ್ಯಾಂಗನೀಸ್ ಅತ್ಯುತ್ತಮ ದರ್ಜೆಯದು. ಈಗಲೂ ಕರ್ನಾಟಕದಲ್ಲಿ ದೊಡ್ಡ ಮತ್ತು ವ್ಯಾಪಕ ಪ್ರಮಾಣದಲ್ಲಿ ಅದಿರಿನ ಸಂಗ್ರಹ ಕಾರ್ಯ ನಡೆಯುತ್ತಿದೆ. ಇವೆಲ್ಲವನ್ನು ಗಣನೆಗೆ ತೆಗೆದುಕೊಂಡಾಗ ಈ ಕಾರ್ತಿಕೇಯ ವನ ಪ್ರದೇಶದಲ್ಲಿ ಲೋಹಾಸ್ತ್ರಗಳು ಸಿದ್ಧವಾಗುತ್ತಿದ್ದು ಇಲ್ಲಿಯ ಶಸ್ತ್ರಗಳು ಗುಣಮಟ್ಟದಿಂದ ಅತ್ಯುತ್ತಮವಾಗಿದ್ದು ಇಲ್ಲಿಯ ಶಸ್ತ್ರಕಾರ್ಯ ಪ್ರಸಿದ್ಧವಾಗಿದ್ದು ಹೊರಪ್ರದೇಶಗಳಿಗೆ ರಫ್ತಾಗುತ್ತಿತ್ತು. ಇಲ್ಲಿ ಕಬ್ಬಿಣದ ಕಾರ್ಯಾಗಾರವು ಸುಮಾರು ಕ್ರಿ.ಶ.ಪೂ. ೮೦೦ - ಕ್ರಿ.ಶ. ೫೦೦ ರಹೊತ್ತಿಗೆ ಪ್ರಾರಂಭವಾಗಿರಬಹುದು.

ರಾಜ್ಯದಲ್ಲಿ ಖನಿಜ ಸಂಪತ್ತು ಎಲ್ಲಾಕಡೆಗೂ ಸಮಾನವಾಗಿ ಕಂಡುಬರುವುದಿಲ್ಲ. ಅದರಲ್ಲೂ ಮ್ಯಾಂಗನೀಸ್ ಮತ್ತು ಕಬ್ಬಿಣದ ಅದಿರುಗಳು ಸಂಡೂರು ಪ್ರದೇಶದಲ್ಲಿ ಪುಷ್ಕಳವಾಗಿ ದೊರೆಯುವ ಬಹುಮುಖ್ಯ ಖನಿಜ ಸಂಪತ್ತುಗಳಾಗಿವೆ. ಇಲ್ಲಿ ಕಬ್ಬಿಣದ ಅದಿರು ಮತ್ತು ಮ್ಯಾಂಗನಿಸನ್ನು ಗಣಿಗಳಿಂದ ಹೊರ ತೆಗೆಯುವ ಕೆಲಸ ನಿರಂತರವಾಗಿ ಸಾಗುತ್ತಿದೆ. ಕರ್ನಾಟಕದಲ್ಲಿಯೇ ಅತೀ ಹೆಚ್ಚು ಗಣಿಗಾರಿಕೆ ಸಂಡೂರು ಪ್ರದೇಶದಲ್ಲಿದೆ. ಇಲ್ಲಿ ಲೋಹ ಮತ್ತು ಲೋಹೇತರ ಖನಿಜಗಳು ದೊರೆಯುತ್ತವೆ.

ಸಂಡೂರು ಮ್ಯಾಂಗನೀಸ್ ಮತ್ತು ಐರನ್ ಓರ್ ಕಂಪನಿ ಮತ್ತು ಸ್ಕಂದ್ ಪ್ರೈವೇಟ್ ಕಂಪನಿ ಎಂಬ ಗಣಿ ಉದ್ಯಮಗಳು ಖನಿಜ ಸಂಪತ್ತನ್ನು ಹೊರತೆಗೆಯುವ ಕಂಪನಿಗಳಾಗಿವೆ. ಇವೆಲ್ಲವೂ ಹೊರ ರಾಷ್ಟ್ರಗಳೊಂದಿಗೆ ಉತ್ತಮ ವಾಣಿಜ್ಯ ಸಂಪರ್ಕವನ್ನಿಟ್ಟುಕೊಂಡಿವೆ. ಇಲ್ಲಿಯ ಖನಿಜ ಸಂಪತ್ತಿಗೆ ಹೊರ ರಾಷ್ಟ್ರಗಳಲ್ಲಿ ಅತಿ ಹೆಚ್ಚು ಬೇಡಿಕೆಯಿದೆ.

೧.೩ ಜಲಸಂಪತ್ತು

''ನೀರು ಸಕಲ ಜೀವಿಗಳಿಗೂ ಬೇಕು'' ಎನ್ನುವಂತೆ ಈ ಪ್ರದೇಶದಲ್ಲಿ ಸಣ್ಣ- ಸಣ್ಣ ಗುಡ್ಡಗಳ ಮದ್ಯದಲ್ಲಿಯೂ ನೀರಿನ ಝರಿಯ ಸೆಲೆಗಳನ್ನು ಕಾಣಬಹುದಾಗಿದೆ. ಸಂಡೂರು ಪ್ರದೇಶದಲ್ಲಿ ಹುಟ್ಟಿ ಹರಿಯುವ ಯಾವುದೇ ನದಿಗಳು ಇಲ್ಲ. ಸಂಡೂರು ಮಳೆಯಾಶ್ರಿತ ಪ್ರದೇಶವಾಗಿದೆ. ಮಳೆಯಿಂದಾಗಿ ಪ್ರದೇಶದ ವಿವಿಧ ಕಡೆಗಳಲ್ಲಿ ಸಣ್ಣ-ಪುಟ್ಟ ಕರೆಗಳು ತುಂಬುತ್ತವೆ. ಈ ಭಾಗದ ಕೆರೆಗಳಲ್ಲಿ ಅತ್ಯಂತ ಪ್ರಸಿದ್ಧವಾದ ಕೆರೆ ದರೋಜಿ ಕೆರೆ. ಅಲ್ಲದೆ ಪ್ರಮುಖವಾದ ಕೆರೆಯಾಗಿದೆ.

ನಾರೀಹಳ್ಳಿಕ್ಕೆ ಕಟ್ಟಲಾಗಿರುವ ನಾರೀಹಳ್ಳ ಜಲಾಶಯವು ಸಂಡೂರು ಪ್ರಾಂತ್ಯದ ಕುಡಿಯುವ ನೀರಿಗೆ, ಜಮೀನಿನ ನೀರಾವರಿ ಮತ್ತು ಪ್ರಾಣಿ ಪಕ್ಷಿ, ದನಕರುಗಳಿಗೆ, ಕೃಷಿಗೆ ಒಟ್ಟಿನಲ್ಲಿ ನಮ್ಮ ದೈನಂದಿನ ಚಟುವಟಿಕೆಗೆ ಸಹಕಾರಿಯಾಗಿದೆ. ಸಂಡೂರಿನವರ ಪಾಲಿಗೆ ಇದೊಂದು ವರ ಪ್ರಧಾನ ನದಿಯಾಗಿ ಮಾರ್ಪಟ್ಟಿದೆ. ಸಂಡೂರಿನ ಸುತ್ತಲೂ ಝರಿಯಂತೆ ಸೆಲೆಗಳು ಹೆಚ್ಚಾಗಿ ಕಾಣುವುದರಿಂದ ಅವುಗಳಲ್ಲಿನ ನೀರು ಒಂದು ಕಡೆ ಕೂಡಿ ನಾರೀ ಹಳ್ಳದಲ್ಲಿ ವಿಲೀನವಾಗುತ್ತವೆ. ಇದು ಸಂಡೂರಿನ ಇನ್ನೊಂದು ಪ್ರಸಿದ್ಧವಾದ ಹಳ್ಳವಾಗಿದೆ, ಇದು ಓಬಳಗಂಡಿ ಮತ್ತು ಬೀಮಗಂಡಿ ಕಮರಿಗಳಲ್ಲಿ ಸಂಡೂರಿನ ಮುಖಾಂತರ ಹರಿಯುತ್ತಿದೆ. ೧೫೪೧ ಒಂದು ಶಾಸನದಲ್ಲಿ ಈ ತೊರೆಯನ್ನು **ನಾರಾಯಣ್** ನದಿ ಎಂದು ಕರೆಯಲಾಗಿದೆ. ಇದು ರಸ್ತೆಯ ಪಕ್ಕಕ್ಕೆ ಇದ್ದು, ಇದಕ್ಕೊಂದು ಸುಂದರ ಆಣೆಕಟ್ಟನ್ನು ಕಟ್ಟಲಾಗಿದೆ. ಇದು ತಾರಾನಗರದ ಬಳಿಯಲ್ಲಿದೆ. ಇದು ಪ್ರವಾಸಿಗಳ ಮನಸೆಳೆಯುವ ತಾಣವೂ ಆಗಿದೆ. ಏಕೆಂದರೆ ಎರಡೂ ಕಡೆಯಲ್ಲೂ ಎತ್ತರವಾದ ಗುಡ್ಡಗಳಿದ್ದು, ಅವಕ್ಕೆ ಅಕ್ಕ ತಂಗಿಯರ ಗುಡ್ಡಗಳು ಎಂದು ಹೇಳಲಾಗುತ್ತಿದೆ. ಈ ೨ ಗುಡ್ಡಗಳ ನಡುವೆ ನೀರು ಹರಿಯುತ್ತದೆ.

ಇತ್ತೀಚೆಗೆ ಸಂಡೂರಿನ ಜನತೆಗೂ ಇದೇ ನೀರನ್ನು ಶುದ್ಧ ಮಾಡಿ ಕುಡಿಯುವುದಕ್ಕೆ ಒದಗಿಸಲಾಗುತ್ತಿದೆ. ಅಲ್ಲದೆ ಈ ನೀರನ್ನು ೮೦೦ ಹೆ.ಗಳಷ್ಟು ಕಾಲುವೆಗಳ ಮೂಲಕ ಕೃಷಿಗೆ ಕೂಡ ಬಳಸಿಕೊಳ್ಳಲಾಗುತ್ತಿದೆ.

ಕೃಷಿ ಇಲಾಖೆಯವರು ಮಳೆ ಮಾಪನ ಕೇಂದ್ರದ ಮಾಹಿತಿಯ ಪ್ರಕಾರ ವರ್ಷದಿಂದ ವರ್ಷಕ್ಕೆ ಮಳೆ ಪ್ರಮಾಣ ಇಲ್ಲಿ ಕಡಿಮೆಯಾಗುತ್ತ ಬಂದಿರುವುದನ್ನು ಕಾಣಬಹುದು. ಇದಕ್ಕೆ ಇಲ್ಲಿನ ಪರಿಸರ ನಾಶವೇ ಕಾರಣ ಎನ್ನುವ ಮಾತುಗಳು ಕೇಳಿಬರುತ್ತಿವೆ. ''ಎಲ್ಲಾ ಜೀವಿಗಳಿಗೂ ನೀರು ಅತಿ ಮುಖ್ಯ'' ಎನ್ನುವುದನ್ನು ನೆನಪಿನಲ್ಲಿಟ್ಟುಕೊಂಡು ಸಂಡೂರಿನ ಜಲ ಸಂಪತ್ತನ್ನು ಸಂರಕ್ಷಿಸಬೇಕಾಗಿದೆ. ಮಿತವಿಲ್ಲದಂತೆ ಬಳಕೆ ಮಾಡಿದರೆ ಮುಂದೆ ಈ ಭೂಮಿಯ ಮೇಲೆ ಬಹುಶಃ ಯಾವ ಜೀವಿಯೂ ಬದುಕುಳಿಯಲಾರದು.

೧.೪ ಅರಣ್ಯ ಸಂಪತ್ತು

ಅತಿ ಹೆಚ್ಚು ಅರಣ್ಯವಿರುವ ಪ್ರದೇಶ ಇದಾಗಿದೆ. ಇಲ್ಲಿ ಹುಣಸೆ, ಬೇವು, ಮಾವು, ಕಕ್ಕೆ, ತಂಗಡಿ, ಹೊನ್ನೆ, ಸೀತಾ ಫಲ, ಕಮರ, ಹರಗಲು ಮುಂತಾದ ಮರಗಳುಳ್ಳ ಎಲೆ ಉದುರುವ ಮರಗಳ ಕಾಡುಗಳನ್ನು ಜೊತೆಗೆ ಶ್ರೀಗಂಧ ಮತ್ತು ಬೀಟೆಯಂತಹ ಮರಗಳುಳ್ಳ ಕಾಡನ್ನು ಕಾಣಬಹುದು. ಮಾದಗಿತ್ತ ಕೊಳ್ಳ, ತಾಯಮ್ಮನ ಕೊಳ್ಳ, ನವಿಲು ಸ್ವಾಮಿ ಕೊಳ್ಳ, ಬತ್ತೀರಾಯನ ಕೊಳ್ಳ, ಹೀಗೆ ಮುಂತಾದ ಕೊಳ್ಳಗಳ ಕಾಡುಗಳು ಅತ್ಯಂತ ಪ್ರಮುಖ ಕಾಡುಗಳಾಗಿವೆ.

ಇಲ್ಲಿ ದೊರೆಯಬಹುದಾದ ಬೀಟೆ ತೇಗದಂತಹ ಮರಗಳನ್ನು ವಿಜಯನಗರೋತ್ತರ ಕಾಲದ ಅರಸರು ನಮ್ಮ ಜನಪದರು ಗೃಹ ಮತ್ತು ದೇವಾಲಯಗಳ ನಿರ್ಮಾಣಕ್ಕೆ ಬಳಸಿಕೊಂಡ ಉದಾಹರಣೆಗಳಿವೆ. ಬ್ರಿಟೀಷರು ಈ ಭಾಗದ ಗುಂತಕಲ್ಲು ಹುಬ್ಬಳ್ಳಿ ರೈಲು ಮಾರ್ಗವನ್ನು ನಿರ್ಮಿಸುವಾಗ ಸಂಡೂರು ಪ್ರದೇಶದ ಅರಣ್ಯದಲ್ಲಿ ದೊರಕುವ ತೇಗ, ಮತ್ತಿ, ಹೊನ್ನೆ ಈ ಮರಗಳನ್ನು ಬಳಸಿದರು.

ಇದು ಜೀವ ಸಂಕುಲಕ್ಕೆ ಅಪೂರ್ವ ತಾಣವಾಗಿದೆ. ಇಲ್ಲಿ ಹುಲಿ, ಚಿರತೆ, ಕರಡಿ, ನರಿ, ಮೊಲ, ಕಾಡು ಮಿಕ, ಮಂಗ, ಮುಂತಾದ (ಜಿಂಕೆ, ಸಾರಂಗಗಳು, ಕಾಡು ಹಂದಿ) ಕಾಡು ಪ್ರಾಣಿಗಳು, ಎತ್ತು, ಎಮ್ಮೆ, ಹಸು, ಕುರಿ, ಕೋಳಿ ಮುಂತಾದ ಸಾಕು ಪ್ರಾಣಿಗಳು, ಕೋಗಿಲೆ, ಕೌಜುಗ, ಗೂಬೆ, ಗುಬ್ಬಿ, ಬಾವಲಿ, ರತ್ನ ಪಕ್ಷಿ, ಪಾರಿವಾಳ, ನವಿಲು ಮುಂತಾದ ನೂರಾರು ಜಾತಿಯ ಹಕ್ಕಿಗಳು ಈ ಕಾಡಿನಲ್ಲಿ ಇವೆ. ಅಲ್ಲದೆ ಈ ಅರಣ್ಯದಲ್ಲಿ ನಮ್ಮ ರಾಷ್ಟ್ರ ಪಕ್ಷಿಯಾದ ನವಿಲು ಅತಿ ಹೆಚ್ಚಾಗಿ ಕಂಡುಬರುವುದರಿಂದ ಇಲ್ಲಿನ ಜೀವ ವೈವಿಧ್ಯದ ವಿಶಿಷ್ಟವಾಗಿದೆ.

ಹೀಗೆ ಇಲ್ಲಿನ ಭೌಗೋಳಿಕತೆ ಸಮೃದ್ಧವಾಗಿದ್ದು ಇತ್ತೀಚೆಗೆ ಇಲ್ಲಿ ಗಣಿಗಾರಿಕೆಯಿಂದ ಕಾಡು ಹಾಳಾಗುತ್ತಿದೆ. ಅವೈಜ್ಞಾನಿಕ ಗಣಿಗಾರಿಕೆಯಿಂದ, ಮರಗಳ ಕಡಿತದಿಂದ ಮತ್ತು ಮಳೆಯ ಪ್ರಮಾಣದ ಕಡಿಮೆಯಿಂದ ಅಳಿವಿನಂಚಿನಲ್ಲಿದೆ. ಅಭಿವೃದ್ಧಿ ನೆಪದಲ್ಲಿ ರಸ್ತೆ ಮಾಡುವ ನೆಪದಲ್ಲಿ ರಸ್ತೆಗಳನ್ನು ಅಗಲವಾಗಿ ಮಾಡುವುದಕ್ಕಾಗಿ, ಹಣದ ದುರಾಸೆಗಾಗಿ ಅನೇಕ ಮರಗಳನ್ನು ಕಡಿದುರುಳಿಸಲಾಗಿದೆ. ಇನ್ನಾದರೂ ಇಲ್ಲಿನ ಜನರು ಎಚ್ಚೆತ್ತುಕೊಳ್ಳದಿದ್ದರೆ ಉಳಿಯುವುದಿಷ್ಟೇ. ಹೆಮ್ಮರಗಳನ್ನು ಕಡಿದ ಮೋಟು ಕುರುಹುಗಳು, ಬೋಳು ಗುಡ್ಡಗಳು, ಗಾಳಿ ಹರಡುವ ಧೂಳು. ಈಗ ಉಳಿದಿರುವುಷ್ಟಾದರೂ ಕಾಡನ್ನು ನಾವು ರಕ್ಷಿಸಬೇಕಾಗಿದೆ. ಅದಕ್ಕಾಗಿ ಖನಿಜ ಸಂಪತ್ತಿಗಾಗಿ ಬೆಟ್ಟ- ಗುಡ್ಡಗಳನ್ನು ಕಡಿಯುವುದನ್ನು ನಿಲ್ಲಿಸಬೇಕಾಗಿದೆ. ಇದಾಗಬೇಕಾದರೆ ಎಲ್ಲವುದರಕ್ಕಿಂತ ಹೆಚ್ಚಾಗಿ ಈ ಪ್ರದೇಶದ ರಾಜಕೀಯ ವ್ಯಕ್ತಿಗಳು, ಅಧಿಕಾರಿವರ್ಗ, ಬಂಡವಾಳಶಾಹಿ ಹಾಗೂ ಸಾರ್ವಜನಿಕರಲ್ಲಿ,

ಗಣಿಉದ್ಯಮಕ್ಕೆ ಸಂಬಂಧಿಸಿದವರಲ್ಲಿ ಪರಿಸರ ಸಂರಕ್ಷಣೆಯ ಕುರಿತು ಜಾಗೃತಿ ಮೂಡಿಸಿ ಗಿಡಮರಗಳನ್ನು ಉಳಿಸುವುದಕ್ಕಾಗಿ ಅವುಗಳ ಮಹತ್ವವನ್ನು ವೈವಿಧ್ಯವನ್ನು ಕುರಿತು ವಿವೇಕ ಕಲ್ಪಿಸಬೇಕಾಗಿದೆ. ಪ್ರತಿಯೊಬ್ಬರನ್ನೂ ಕ್ರಿಯಾಶಾಲಿಗಳನ್ನಾಗಿ ಮಾಡಬೇಕಾಗಿದೆ.

ಇಂದು ಪರಿಸರದ ನಾಶದಿಂದಾಗಿ, ಗಣಿಗಳ ಅರ್ಭಟದಿಂದ, ಸಿಡಿದೆದ್ದ ಮದ್ದುಗಳಿಂದಾಗಿ ತಲ್ಲಣಗೊಂಡು ಜೀವಿಗಳು ಕಣ್ಮರೆಯಾಗುತ್ತಲಿವೆ. ಕಾಡುಗಳಿಲ್ಲದ, ಕಾಡು ಪ್ರಾಣಿಗಳಿಲ್ಲದ ಹಚ್ಚ-ಹರಿಸಿನ ಪರಿಸರ ವಿಲ್ಲದ ಸಂಡೂರಿನ ಪರಿಸರ ನೋಡುವುದು ಸ್ಮಶಾನಕ್ಕಿಂತ ಬೀಕರ ವೆನಿಸುತ್ತದೆ.

ಅಭಿವೃದ್ಧಿಯ ನೆಪದಲ್ಲಿ ನೈಸರ್ಗಿಕ ಸಂಪನ್ಮೂಲಗಳ ತಮಿಳುನಾಡಿನ **ಊಟಿ** ಯಂತಿದ್ದ ಸಂಡೂರಿನ ಭೌತಿಕ ಪರಿಸರ ಕಲುಷಿತಗೊಳ್ಳುತ್ತದೆ. ಇಲ್ಲಿ ವಾಯುಮಾಲಿನ್ಯ, ಜಲಮಾಲಿನ್ಯ, ಗುಡ್ಡಗಳನ್ನು ಕಡಿದಿದುದರಿಂದ ತಾಪಮಾನದ ಏರಿಕೆ, ಇಂಗಾಲದ ಡೈ ಆಕ್ಸೈಡ್‌ಗಳ ಪ್ರಮಾಣ ಅಧಿಕವಾಗುತ್ತಿದೆ. ಆಧುನಿಕ ಜೀವನ ಶೈಲಿಯಿಂದಾಗಿ ಮನುಷ್ಯ ಐಹಿಕ ಸಂಪತ್ತುಗಳ ಕಡೆಗೆ ಹೆಚ್ಚು ಶ್ರದ್ಧೆ ವಹಿಸುತ್ತಿದ್ದಾನೆ. ಹಾಗಾಗಿ ಅವನು ಹಣದ ದುರಾಸೆಯಿಂದ ಭೋಗಿಸುವ ದೊರೆಯಾಗಿದ್ದಾನೆ. ಮಾಲಿಕನಾಗಿದ್ದೆನೆ.

ತನ್ನ ಸುಖದ ಲಾಲಸೆಗಾಗಿ ಪ್ರಕೃತಿಯ ಸಮತೋಲನವನ್ನೆ ಕದಡಿ, ತನ್ಮೂಲಕ ಅಪಾರ ಜೀವನ ಸಂಕುಲಕ್ಕೆ ಅವನ ಅವಸಾನಕ್ಕೆ ಅವನೇ ಮುಂದಾಗಿರುವಂತಹದು ಈ ಇಪತ್ತೊಂದನೇ ಶತಮಾನದ ಬಹುದೊಡ್ಡ ದುರಂತವಾಗಿದೆ. ಈ ದುರಂತವನ್ನು ತಪ್ಪಿಸಬೇಕಾದಲ್ಲಿ ಪ್ರಜ್ಞಾವಂತರು, ವಿಚಾರವಾದಿಗಳು ಯೋಚಿಸಬೇಕಾಗಿದೆ.

೧.೫ ಇತಿಹಾಸ

ಬಳ್ಳಾರಿ ಜಿಲ್ಲೆಯಲ್ಲಿರುವ ಈ ಪ್ರದೇಶವೂ ಮೌರ್ಯ, ಶಾತವಾಹನ, ಕದಂಬ, ಬಾದಾಮಿ, ಚಾಳುಕ್ಯ, ರಾಷ್ಟ್ರಕೂಟ, ಕಲ್ಯಾಣಿ ಚಾಲುಕ್ಯ ದೇವಗಿರಿಯ ಸೇವುಣ, ವಿಜಯನಗರ ಹಾಗೂ ವಿಜಾಪುರದ ಆಡಳಿತಕ್ಕೆ ಒಳಪಟ್ಟಿತ್ತು. ಮುಂದೆ ಮೊಘಲ್ ಮರಾಠರ ಯುದ್ಧಗಳ ದ್ವಂದ್ವದ ನಂತರ ಸಂಡೂರು ಸಂಸ್ಥಾನ ಉಗಮಿಸಿತು. ಶಿವಾಜಿ ಸೇನಾನಿಯಾಗಿದ್ದ ಸಂತಾಜಿ ಘೋರ್ಪಡೆಯ ವಂಶಸ್ಥರೇ ಸಂಡೂರು ಅರಸರು. ಮೊದಲು ಆಂಧ್ರದ ಗುತ್ತಿಯಿಂದ ಅವರು ಇಲ್ಲಿಗೆ ಬಂದವರಾಗಿದ್ದಾರೆ.

ಸಂಡೂರು ಸ್ವಾತಂತ್ರ್ಯ ಪೂರ್ವದಲ್ಲಿ ಒಂದು ಪುಟ್ಟ ರಾಜ್ಯವಾಗಿತ್ತು. ಈ ಊರಿಗೆ ಮೂರು ಕಣಿವೆಗಳ ಮೂಲಕ ಪ್ರವೇಶವಿದೆ. ಸಂದು, ಊರು, ಸಂದೂರು, ಎಂದರೆ ಕಣಿವೆಗಳ ಊರು ಎಂಬ ಅರ್ಥವಿದ್ದು, ಕಾಲಕ್ರಮೇಣ ಈ ಸಂದೂರು ಜನರ ಆಡುನುಡಿಯಲ್ಲಿ ಮಾರ್ಪಾಟಾಗಿ 'ಸಂದೂರು' ಹೋಗಿ 'ಸಂಡೂರು' ಆಯಿತು. ಈ ಊರಿಗೆ ಹಿಂದೆ ಇಲ್ಲಿನ ಕುಮಾರಸ್ವಾಮಿ ದೇವಾಸ್ಥಾನದಿಂದಾಗಿ "ಸ್ಕಂದಪುರಿ" ಎಂಬ ಹೆಸರಿತ್ತೆಂದೂ, ಇದೇ ಮುಂದೆ ಸಂಡೂರಾಯಿತೆಂದೂ ಹೇಳುವುದುಂಟು. ಕುಮಾರಸ್ವಾಮಿ ಅಥವಾ ಕಾರ್ತಿಕೆಯ ದೇವಾಲಯವೂ ಸಂಡೂರಿನ ಪ್ರಮುಖ ದೇವಾಲಯವಾದ್ದರಿಂದ ಇದನ್ನು "ಕಾರ್ತಿಕೇಶ್ವರ ಪುಣ್ಯ ಭೂಮಿ" ಎಂದು ಕರೆಯುತ್ತಾರೆ.

ಶ್ರೀ ಸ್ಕಂಧಪುರಾಣದಲ್ಲಿ ಉಕ್ತವಾದಂತೆ ಪೂರ್ವಕಾಲದಲ್ಲಿ ಸಂಡೂರು **ಸ್ಕಂದಪುರ** ಎಂಬ ಕ್ಷೇತ್ರವಾಗಿತ್ತು. ಈ ಸ್ಕಂದಪುರಕ್ಕೆ ಸುತ್ತಲೂ ಲೋಹಪರ್ವತಗಳ ಕೋಟೆ ಇದ್ದಿತು. ಈಗಲೂ ಈ ಪರ್ವತಗಳಿವೆ. ಇಲ್ಲಿ ದೇವಾಸುದೇವತೆಗಳು ಕಿನ್ನರು, ಕಿಂಪುರುಷರು, ಗಂಧರ್ವರು ನೆಲೆಸಿದ್ದರು. ಇದರಿಂದ ಇದನ್ನು ಸುವರ್ಣಗಿರಿಯೆಂದು ಸಹ ಕರೆಯಲಾಗುತ್ತಿತ್ತು.

ತ್ರೇತ್ರಾಯುಗದಲ್ಲಿ ಶ್ರೀರಾಮಚಂದ್ರಲಕ್ಷ್ಮಣರು ಕಪಿವೀರರನ್ನು ಕೂಡಿಕೊಂಡು ಲಂಕೆಗೆ ಹೋಗುವಾಗ ಮಾರ್ಗದಲ್ಲಿ ಹಿಂದೆ ಪ್ರಸಿದ್ಧವಾಗಿದ್ದ ಸಂಡೂರು ಪ್ರದೇಶದ ಲೋಹಾಚಲಕ್ಕೆ ಬಂದು ಶ್ರೀ ಕುಮಾರಸ್ವಾಮಿ ದರ್ಶನ ಪಡೆದರು. ಇದಕ್ಕೆ ಸಾಕ್ಷಿಯಾಗಿ ಕುಮಾರಸ್ವಾಮಿ ಮೂರ್ತಿ ಶಿಲ್ಪದ ಕೆಳಭಾಗದಲ್ಲಿ ರಾಮ ಲಕ್ಷ್ಮಣರ ಉಬ್ಬು ಶಿಲ್ಪಗಳಿವೆ. ಸ್ವಾಮಿ ಆಜ್ಞೆಯ ಪ್ರಕಾರ ಶ್ರೀರಾಮ ಇಲ್ಲಿನ ಬೆಟ್ಟದ ಉತ್ಕೃಷ್ಟವಾದ ಕಬ್ಬಿಣದಿಂದ ಶಸ್ತ್ರಾಸ್ತ್ರಗಳನ್ನು ತಯಾರಿಸಿಕೊಂಡು ಲಂಕೆಗೆ ಸಾಗಿದನೆಂದು ರಘುವಂಶದಲ್ಲಿ ವರ್ಣನೆಯಿದೆ.

ದ್ವಾಪರಯುಗದಲ್ಲಿ ಪಾಂಡವರು ವನವಾಸದಲ್ಲಿದ್ದಾಗ ಲೋಹಾಚಲಕ್ಕೆ ಬಂದು ಸ್ವಾಮಿಯ ದರ್ಶನ ಮಾಡಿಕೊಂಡು ಆತನ ಆರ್ಶೀವಾದವನ್ನು ಪಡೆದು ಕೆಲ ಕಾಲ ವಾಸವಾಗಿದ್ದು ಪಂಚಲಿಂಗಗಳನ್ನು ನಿರ್ಮಿಸಿ ಪೂಜೆ ಮಾಡಿ ಧನ್ಯರಾದರು. ಇದೇ ಈಗಿನ ಪಂಚಲಿಂಗ ಕ್ಷೇತ್ರವಾಯಿತು. ಪುರಾಣಗಳ ಕಾಲದಲ್ಲಿ ಈ ಪಟ್ಟಣವನ್ನು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗಿದೆ. ಸ್ಕಂಥ ಪುರಾಣದಲ್ಲಿ ಉಕ್ತವಾಗಿರುವಂತೆ ಸ್ಕಂದನಿರುವ ಪುರವಾಗಿರುವುದರಿಂದ ಸ್ಕಂದಪುರ ವೆನಿಸಿಕೊಂಡಿದೆ. ಇದರ ಜೊತೆಗೆ ಸುಂದರಪುರ ಎಂಬ ಹೆಸರು ಇದರ ಪ್ರಾಚೀನ ಸರಣಿಯಲ್ಲಿ ಬರುತ್ತದೆ. ಆದರೆ ಸಂಡೂರು ಶಬ್ದದ ಮೂಲರೂಪ ಸಂದೂರು ಆಗಿದ್ದು ಬೆಟ್ಟಗುಡ್ಡಗಳ ಸಂದುಗಳಲ್ಲಿರುವ ಊರು ಎಂಬ ಕಾರಣದಿಂದಲೇ ಈ ಹೆಸರು ಬಂದಿದೆ. ಸಂದ + ಊರು = ಸಂದೂರು ಸಂಡೂರು ಆಗಿ ಪರಿಣಮಿಸಿದೆ. ಭೂಗೋಳ ಶಾಸ್ತ್ರಜ್ಞ ಮೆಕಾಲೆ ಹೇಳುವಂತೆ ಸಂಡೂರು ಸಂದು (ಕಿಂಡಿ ಗಂಡಿ ಕಣಿವೆ) ಊರು ಎಂಬುದಾಗಿತ್ತು ಎಂದು ತಿಳಿದು ಬರುತ್ತದೆ. ಈ ಸಂದೂರು >ಸಂಡೂರು> ಸ್ವಂಡೂರು >ಸೊಂಡೂರು ಎಂದು ಗ್ರಾಮೀಣ ಜನರ ಉಚ್ಛಾರಣೆಯ ಮೂಲಕ ಗ್ರಾಮಭಾಷೆಯಾಗಿ ಈಗ ಸಂಡೂರು ಮತ್ತು ಸೊಂಡೂರು ಆಗಿ ಮಾತ್ರ ಬಳಕೆಯಾಗುತ್ತಿದೆ.

ಸಂಡೂರು ರಾಜಕೀಯವಾಗಿ ಅನೇಕ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿದ್ದು, ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ. ಕನ್ನಡನಾಡಿನ ಪ್ರಸಿದ್ಧ ರಾಜಮನೆತನಗಳಾದ ಬಾದಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ವಿಜಯನಗರ ಸಾಮ್ರಾಜ್ಯದವರೆಗೆ ಇತ್ತು. ಈ ಎಲ್ಲಾ ರಾಜಮನೆತನಗಳು ಒಂದಿಲ್ಲೊಂದು ರೀತಿಯ ಪ್ರಭಾವಕ್ಕೆ ಒಳಗಾಗಿದ್ದ ಸಂಡೂರು ತನ್ನ ಸೌಂದರ್ಯದಿಂದ ಮಹತ್ವದ ಸ್ಥಾನವನ್ನು ಕಂಡುಕೊಂಡಿತು. ಈ ಪ್ರದೇಶವು ಚಾಲುಕ್ಯ ಪೂರ್ವಯುಗದಿಂದ ಹಿಡಿದು ವಿಜಯನಗರದ ಅರಸುರುಗಳ ಕಾಲದವರೆಗೂ ಆಳಲ್ಪಟ್ಟಿತ್ತು ಎಂಬ ಬಗ್ಗೆ ವಿವರಣೆ ಈ ಕೆಳಗಿನಂತೆ ಇದೆ.

ಶಾತವಾಹನರ ಕಾಲದಿಂದಲೇ ಈಗಿರುವ ಕುಮಾರ ಸ್ವಾಮಿ ಬೆಟ್ಟದ ಪಾರ್ವತಿ ದೇವಾಲಯ ಅಭಿವೃದ್ಧಿ ಹೊಂದಿದೆ. ಇವರ ಕಾಲಕ್ಕೆ ಸಂಡೂರಿನ ಹತ್ತಿರ ಇರುವ ದೇವಗಿರಿ, ಚೋರನೂರು ಅಗ್ರಹಾರ ಮುಂತಾದ ಗ್ರಾಮಗಳಲ್ಲಿ ಶಾತವಾಹನರ ಕಾಲದ ಅವಶೇಷಗಳು ದೊರೆಯುತ್ತವೆ. ಆದ್ದರಿಂದ ಸಂಡೂರು ಶಾತವಾಹನರ ಕಾಲದ ಪ್ರಮುಖ ಪಟ್ಟಣವಾಗಿತ್ತು ಎನ್ನಬಹುದು.

ಬನವಾಸಿ ಕದಂಬರ ಕಾಲದಲ್ಲಿ ಸಂಡೂರು ಪ್ರದೇಶವೂ ಕದಂಬರ ಸಾಮಂತರ ಆಡಳಿತಕ್ಕೊಳಪಟ್ಟ ಒಂದು ಪ್ರಮುಖ ಕೇಂದ್ರವಾಗಿತ್ತು ಇವರ ಕಾಲದಲ್ಲಿ ನಿರ್ಮಿತವಾದ ಕೆಲವು ದೇವಾಲಗಳ ಅವಶೇಷಗಳಿವೆ. ಕದಂಬರು ಸಪ್ತಮಾತೃಕೆಯರ ಮತ್ತು ಕುಮಾರಸ್ವಾಮಿಯ ಆರಾಧಕರಾಗಿಕದ್ದರು. ಚಾಲುಕ್ಯಯುಗ ಮತ್ತು ರಾಷ್ಟ್ರಕೂಟರ ಯುಗಗಳಲ್ಲಿ ಕುಮಾರ ಸ್ವಾಮಿ ದೈವವು ಆರಾಧನೆಗೊಳ್ಳುತ್ತಿದ್ದು ಇವರ ಕಾಲದಲ್ಲಿ ಈ ಕ್ಷೇತ್ರವು

ಅಭಿವೃದ್ಧಿ ಹೊಂದಿತ್ತು. ಇವರ ನಂತರ ಅಧಿಕಾರಕ್ಕೆ ಬಂದ ಕಲ್ಯಾಣಿ ಚಾಲುಕ್ಯರ ಆಡಳಿತಕ್ಕೆ ಈ ಪ್ರದೇಶ ಸಂಪೂರ್ಣವಾಗಿ ಒಳಪಟ್ಟಿತ್ತು. ಇವರ ಸಾಮಂತರಾದ ಪಾಂಡ್ಯರು ನೊಳಂಬವಾಡಿಯನ್ನು ಆಳಿದರು. ಸಂಡೂರು ನೊಳಂಬವಾಡಿಯಲ್ಲಿನ ಒಂದು ಭಾಗವಾಗಿತ್ತು. ಇವರ ಕಾಲದಲ್ಲೇ ಸಂಡೂರಿನ ಕುಮಾರಸ್ವಾಮಿ ಕ್ಷೇತ್ರ ಪ್ರಮುಖ ಯಾತ್ರಾ ಸ್ಥಳವಾಯಿತು. ಇವರ ಕಾಲದಲ್ಲಿ ಈ ದೇವಾಲಯವನ್ನು ವೇಸರ ಶೈಲಿಯಲ್ಲಿ ಕಟ್ಟಲಾಗಿದೆ.

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಸಂಡೂರು ವಿಶೇಷ ಪಾತ್ರ ವಹಿಸಿತ್ತು. ಇವರ ಕಾಲದಲ್ಲಿ ಸಂಡೂರು ಒಂದು ಪ್ರಮುಖ ಪಟ್ಟಣವಾಗಿತ್ತು. ಸಂಡೂರು ಪಟ್ಟಣದ ಮಧ್ಯದಲ್ಲಿ ತಾರಕೇಶ್ವರ ದೇವಸ್ಥಾನದ ಸಮೀಪದಲ್ಲಿ ಕೃಷ್ಣದೇವರಾಯನ ಕ್ರಿ.ಶ ೧೫೨೪ ರ ಶಿಲಾಶಾಸನವಿದೆ. ಇವರ ಕಾಲದಲ್ಲಿ ಸಂಡೂರು ಒಂದು ಪ್ರಮುಖ ವ್ಯಾಪಾರ ಕೇಂದ್ರವೆಂದು ವರ್ಣಿಸಲಾಗಿದೆ. ಬಹುಶಃ ಯುದ್ಧ ಸಾಮಗ್ರಿಗಳಾದ ಆಯುಧಗಳ ತಯಾರಿಕೆ ಮತ್ತು ಮಾರಾಟವಿರಬಹುದು. ಈ ಪ್ರದೇಶವು ಅವರ ಕಾಲದಲ್ಲಿ ಕಬ್ಬಿಣ ತಯಾರಿಸುವ ಕೇಂದ್ರಗಳಾಗಿರಬಹುದು. ಈ ಪ್ರದೇಶ ವಿಜಯನಗರದ ರಾಜಧಾನಿಗೆ ಸಮೀಪದಲ್ಲಿದ್ದು ಭಯಾನಕ ಬೆಟ್ಟ ಗುಡ್ಡ, ಕಣಿವೆಗಳು ರಾಜಧಾನಿಗೆ ರಕ್ಷಣೆ ಒದಗಿಸಿತ್ತು. ಯುದ್ಧ ಸಾಮಾಗ್ರಿಗಳನ್ನು ತಯಾರಿಸುವ ರಹಸ್ಯ ಕೇಂದ್ರವಾಗಿತ್ತು. ಇಲ್ಲಿ ಹೆಚ್ಚು ಹುಲ್ಲುಗಾವಲಿದ್ದುದರಿಂದ ಕುದುರೆ, ಆನೆಗಳ ಸೈನ್ಯದ ವಿಶ್ರಾಂತಿ ತಾಣವಾಗಿರಬಹುದು. ಅರಣ್ಯದಿಂದ ಕಟ್ಟಿಗೆ ಗಣಿಗಳಲ್ಲಿ ಕಬ್ಬಿಣ ಸಿಗುತ್ತಿದ್ದರಿಂದ ಆಯುಧ ತಯಾರಿಕೆ ಕೇಂದ್ರಗಳು ಸೇನೆ ವಿಶ್ರಾಂತಿಗೆ ಯೋಗ್ಯ ಸ್ಥಳಗಳಾದವು.

ಒಟ್ಟಿನಲ್ಲಿ ಸಂಡೂರು ವಿಜಯನಗರ ಸಾಮ್ರಾಜ್ಯದ ಒಂದು ಪ್ರಮುಖ ಪಟ್ಟಣವಾಗಿ ವ್ಯಾಪಾರ ಕೇಂದ್ರವಾಗಿತ್ತು. ೧೩೩೬ ರಿಂದ ೧೫೬೫ ರ ವರೆಗೆ ಈ ಪ್ರದೇಶ ವಿಜಯನಗರ ಅರಸರ ಆಡಳಿತಕ್ಕೊಳಪಟ್ಟಿತ್ತು. ಕ್ರಿ.ಶ ೧೫೬೫ ತಾಳಿಕೋಟೆ ಯುದ್ಧದ ನಂತರ ಈ ಸಾಮ್ರಾಜ್ಯಪತನ ಹೊಂದಿತು. ನಂತರ ಸೇನಾನಿಗಳು ಸಾಮಂತರು ಬೇರೆ ಬೇರೆ ಭಾಗಳನ್ನು ಸ್ವತಂತ್ರವಾಗಿ ಆಳಲು ಪ್ರಾರಂಭಿಸಿದರು. ನಂತರ ಕೂಡ್ಲಿಗಿ, ಉಜ್ಜನಿ ಮತ್ತು ಸಂಡೂರು ಜರಿಮಲೆ ಪಾಳೆಗಾರರ ಆಳ್ವಿಕೆಗೆ ಒಳಪಟ್ಟವು. ಕ್ರಿ.ಶ. ೧೬೭೮ ರಲ್ಲಿ ಬಳ್ಳಾರಿ ಸುತ್ತ-ಮುತ್ತಲಿನ ಪ್ರದೇಶ ವಿಜಾಪುರ ಸುಲ್ತಾನನಿಂದ ಶಿವಾಜಿ ವಶಪಡಿಸಿಕೊಂಡನು. ಮರಾಠ ಮನೆತನದ ದಾಯಾದಿಗಳಾದ ಘೋರ್ಪಡೆಯವರು ೧೭೨೪ ರಲ್ಲಿ ಸಂಡೂರನ್ನು ಜರಿಮಲೆ ಪಾಳೆಗಾರರರಿಂದ ವಶಪಡಿಸಿಕೊಂಡು ರಾಜ ಪ್ರಭುತ್ವ ಸ್ಥಾಪಿಸಿದರು. ಬಳ್ಳಾರಿ ಜಿಲ್ಲೆಯಲ್ಲಿರುವ ಈ ಪ್ರದೇಶವೂ ಮೌರ್ಯ, ಶಾತವಾಹನ, ಕದಂಬ, ಬಾದಾಮಿ, ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣಿಚಾಲುಕ್ಯ ದೇವಗಿರಿಯ ಸೇವುಣ, ವಿಜಯನಗರ ಹಾಗೂ ವಿಜಾಪುರದ ಆಡಿತಕ್ಕೆ ಒಳಪಟ್ಟಿತ್ತು. ಮುಂದೆ ಮುಘಲ ಮರಾಠರ ದ್ವಂದ್ವದ ನಂತರ ಸಂಡೂರು ಸಂಸ್ಥಾನ ಉಗಮಿಸಿತು. ಶಿವಾಜಿ ಸೇನಾನಿಯಾಗಿದ್ದ ಸಂತಾಜಿ ಘೋರ್ಪಡೆಯ ವಂಶಸ್ಥರೇ ಸಂಡೂರು ಅರಸರು. ಮೊದಲು ಆಂಧ್ರದಲ್ಲಿದ್ದು ಗುತ್ತಿಯಿಂದ ಅವರು ಇಲ್ಲಿಗೆ ಬಂದರು.

ಸಂಡೂರು ಸ್ವಾಂತ್ರ್ಯ ಪೂರ್ವದಲ್ಲಿ ಒಂದು ಪುಟ್ಟ ರಾಜ್ಯವಾಗಿತ್ತು. ಈ ಊರಿಗೆ ಮೂರು ಕಣಿವೆಗಳ ಮೂಲಕ ಪ್ರವೇಶವಿದೆ. ಸಂದು ಊರು ಸಂದೂರು, ಎಂದರೆ ಕಣಿವೆಗಳ ಊರು ಎಂಬ ಅರ್ಥವಿದ್ದು, ಕಾಲಕ್ರಮೇಣ ಈ ಸಂದೂರು ಜನರ ಆಡುನುಡಿಯಲ್ಲಿ ಮಾರ್ಪಾಟಾಗಿ 'ಸಂದೂರು ' ಹೋಗಿ 'ಸಂಡೂರು' ಆಯಿತು. ಈ ಊರಿಗೆ ಹಿಂದೆ ಇಲ್ಲಿನ ಕುಮಾರಸ್ವಾಮಿ ದೇವಾಸ್ಥಾನ ದಿಂದಾಗಿ "ಸ್ಕಂದಪುರಿ" ಎಂಬ ಹೆಸರಿತ್ತೆಂದೂ, ಇದೇ ಮುಂದೆ ಸಂಡೂರಾಯಿತೆಂದೂ ಹೇಳುವುದುಂಟು. ಕುಮಾರಸ್ವಾಮಿ ಅಥವಾ ಕಾರ್ತಿಕೆಯ ದೇವಾಲಯವೂ ಸಂಡೂರಿನ ಪ್ರಮುಖ ದೇವಾಲಯವಾದ್ದರಿಂದ ಇದನ್ನು "ಕಾರ್ತಿಕೇಶ್ವರ ಪುಣ್ಯ ಭೂಮಿ" ಎಂದು ಕರೆಯುತ್ತಾರೆ.

೧.೬ ಸಾಮಾಜಿಕ ಸ್ಥಿತಿ

ಸಂಡೂರಿನ ಜನತೆ ಹಲವಾರು ಸಂಘಸಂಸ್ಥೆಗಳನ್ನು ಸ್ಥಾಪಿಸಿ ಅವುಗಳ ಮೂಲಕ ಸಾರ್ವಜನಿಕರ ಸೇವೆಗೆ ಅನುವೂ ಮಾಡಿಕೊಟ್ಟಿದ್ದಾರೆ. ವ್ಯವಹಾರಿಕ ದೃಷ್ಟಿಯಿಂದ ಸಂಘ-ಸಂಸ್ಥೆಗಳು, ಸಾಂಸ್ಕೃತಿಕ ದೃಷ್ಟಿಕೋನದ ಸಂಘಸಂಸ್ಥೆಗಳು ಇವುಗಳಷ್ಟೇ ಮಾತ್ರವಲ್ಲದೆ ರೋಟರಿ ಕ್ಲಬ್‌ಗಳು ಈ ಪ್ರದೇಶದಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿವೆ.

ವ್ಯವಹಾರಿಕ ದೃಷ್ಟಿಯನ್ನಿಟ್ಟುಕೊಂಡು ಸ್ಥಾಪಿತವಾದ ಸಂಘ ಸಂಸ್ಥೆಗಳು ಗ್ರಾಮಾಂತರ ಪ್ರದೇಶದ ಅಭಿವೃದ್ಧಿಗಾಗಿ ಶ್ರಮಿಸುತ್ತಿವೆ. ಅಂತಹ ಸು-೪೩ ಸಂಘಗಳು ಈ ತಾಲ್ಲೂಕಿನಲ್ಲಿವೆ. ಇಲ್ಲಿ ಕೃಷಿ ಸಾಲ ನೀಡಿಕೆ ಸಹಕಾರ ಸಂಘಗಳು, ಪ್ರಾಥಮಿಕ ಜಮೀನು ಅಭಿವೃದ್ಧಿ ಬ್ಯಾಂಕು, ಬಳಕೆದಾರರ ಸಹಕಾರ ಸಂಘ ಮುಂತಾದವು ರೈತರಿಗೆ ಎಲ್ಲಾ ರೀತಿಯ ಸಾಲಗಳನ್ನು ದೊರಕಿಸಿಕೊಡುತ್ತಿವೆ.

ಗೊಬ್ಬರ, ಔಷದಿಕೊಳ್ಳಲು, ಪವರ್ ಟಿಲ್ಲರ್ ಹಾಗೂ ಟ್ರ್ಯಾಕ್ಟರ್ ಕೊಳ್ಳಲು ಸಾಲ, ನೀರೆತ್ತುವ ಪಂಪು ಮತ್ತಿತರ ಹಲವಾರು ಬಗೆಯ ಯಂತ್ರೋಪಕರಣಗಳನ್ನು ವ್ಯವಸಾಯಕ್ಕೆ ಸಂಬಂಧಿಸಿದಂತೆ ಕೊಂಡುಕೊಳ್ಳಲು ಇವು ನೆರವಾಗುತರ್ತವೆ. ಈ ತಾಲ್ಲೂಕಿನಲ್ಲಿ ೩೩ ಕೃಷಿ ಸಾಲ ನೀಡಿಕೆ ಸಹಕಾರ ಸಂಘಗಳು ಇವೆ.

ಹಲವಾರು ಯುವಕ ಸಂಘಗಳು ರೈತ ಸಂಘಗಳು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘ, ಗ್ರಾಕರ ಸಹಕಾರ ಸಂಘ, ಗಣಿಕಾರ್ಮಿಕರ ಸಹಕಾರ ಸಂಘ, ಕೂಲಿಕಾರರ ಸಹಕಾರ ಸಂಘ, ಮುಂತಾದ ಸಹಕಾರ ಸಂಘಗಳು ಇಲ್ಲಿವೆ. ಇದರಂತೆ ಸಂಡೂರು ತಾಲ್ಲೂಕಿನಲ್ಲಿ ಸು-೩೦ಯುವಕ ಮಂಡಳಿಗಳೂ, ೮೯ ಮಹಿಳಾ ಮಂಡಳಿಗಳೂ ಇವೆಯಲ್ಲದೆ, ಅವು ಆಗಾಗ್ಗ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಿರುತ್ತವೆ. ಕ್ರೀಡೆಗಳು, ನಾಟಕ, ಮತ್ತಿತರ ಮನರಂಜನಾ ಕಾರ್ಯಕ್ರಮಗಳನ್ನು ನಡೆಸುತ್ತಿರುತ್ತವೆ. ಈ ಮಹಿಳಾ ಮಂಡಳಿಗಳು ಸ್ತ್ರೀಯರಿಗೆ ಹಲವು ಲಾಭದಾಯಕ ಹವ್ಯಾಸಗಳನ್ನು ಕಲಿಸುವುದರಲ್ಲಿ ಸಾಕಷ್ಟು ಶ್ರಮಿಸುತ್ತಿವೆ.

ಈ ತಾಲ್ಲೂಕಿನಲ್ಲಿ ಒಂದು ಮಹಿಳಾ ಫೆಡರೇಷನ್ ಕೂಡ ಇದೆ. ಇಲ್ಲಿ ಟೈಲರುಗಳ ಸಂಘ, ಜೇನು ಸಾಕಾಣಿಕೆ, ಕಾರ್ಮಿಕ ಮತ್ತು ತೋಟಗಾರಿಕೆ ಇಲಾಖಾ ನೌಕರರ ಸಂಘಗಳೂ ಇವೆ.

ಈ ಪ್ರದೇಶದಲ್ಲಿ ಅನೇಕ ಸ್ವಯಂ ಸೇವಾ ಸಂಘಗಳಿವೆ. ಸಂಡೂರ್ ಎಜುಕೇಶನ್ ಸೊಸೈಟಿ, ಕರ್ನಾಟಕ ಸಂಘ, ರೋಟರಿ ಮುಂತಾದ ಸಂಘಗಳು ಕಣ್ಣಿನ ಚಿಕಿತ್ಸೆ ಮಾಡಿಸುವುದು, ಹಳ್ಳಿಗಳಲ್ಲಿ ನಿರ್ಗತಿಕರ ಮತ್ತು ಬಡವರ ಉಚಿತ ವೈದ್ಯಕೀಯ ತಪಾಸಣೆ ನಡೆಸುವುದು, ಆದರ್ಶ ಮತ್ತು ಪ್ರಾಮಾಣಿಕ ಶಿಕ್ಷಕರನ್ನು ಗುರ್ತಿಸಿ ಸನ್ಮಾನ ಮಾಡಿ, ಶಿಕ್ಷಕರ ದಕ್ಷತೆ ಹೆಚ್ಚುವಂತೆ ಮಾರ್ಪಡಿಸುವುದು ಮುಂತಾದ ಸಾರ್ವಜನಿಕರಿಗೆ ಹಿತವಾದ ಕೆಲಸಗಳನ್ನು ಮಾಡುತ್ತವೆ. ಇತ್ತೀಚೆಗೆ ಇವು ಒಂದೊಂದು ವರ್ಷ ಆಯ್ದು ಗ್ರಾಮವನ್ನು ಗಣನಗೆ ತೆಗೆದುಕೊಂಡು ಅಲ್ಲಿ ಕುಡಿಯುವ ನೀರಿನ, ಸಾಮಾಜಿಕ ನೈರ್ಮಲ್ಯ ಬಸ್ ಸ್ಟೇಷನ್ ಕಟ್ಟಿಸಿಕೊಡುವುದು, ಆರೋಗ್ಯ ತಪಾಸಣೆ ನಡೆಸುವುದು ಮುಂತಾದ ಉತ್ತಮ ಕಾರ್ಯ ನಿರ್ವಹಿಸುತ್ತಿವೆ.

ಸಂಡೂರಿನ ಸರ್ಕಾರಿ ಸಾರ್ವಜನಿಕರ ಆಸ್ಪತ್ರೆ ಅತ್ಯಂತ ಸುವ್ಯವಸ್ಥಿತ ಆಸ್ಪತ್ರೆಯಾಗಿದೆ. ಇದು ನಗರದ ಅತ್ಯುತ್ತಮ ಆಯಕಟ್ಟಿನ ಪ್ರದೇಶದಲ್ಲಿದ್ದು, ಹೊಸದಾದ ಸ್ವಂತ ಕಟ್ಟಡವನ್ನು ಹೊಂದಿದೆ. ಇದು ಮೊದಲಿನಿಂದಲೂ ಸಂಡೂರು ಮಹಾರಾಜರ ಆಳ್ವಿಕೆಗೆ ಒಳಪಟ್ಟಿದ್ದರಿಂದ, ಸಾರ್ವಜನಿಕರ ಆರೋಗ್ಯವನ್ನೆಂದೂ ಕಡೆಗಣಿಸಿಲ್ಲ. ಮಾತ್ರವಲ್ಲದೆ ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಕೊಡಲಾಗಿದೆ. ಮೊದಲು ಸಂಡೂರಿನಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ

ಕ್ಷ-ಕಿರಣ ಯಂತ್ರದ ಸೌಲಭ್ಯವನ್ನು ಇರಲಿಲ್ಲ. ಆದರೆ ಇತ್ತೀಚಿಗೆ ಈ ಸೌಲಭ್ಯ ಒದಗಿಸಲಾಗಿದೆ.

ಇಲ್ಲಿ ಸರ್ಕಾರಿ ಆಸ್ಪತ್ರೆಯಿದ್ದರೂ ಅವು ಗ್ರಾಮಾಂತರ ಪ್ರದೇಶದ ಜನತೆಗೆ ಇನ್ನೂ ಸರಿಯಾಗಿ ಸಿಗುತ್ತಿಲ್ಲ, ಇದನ್ನು ಉತ್ತಮ ಪಡೆಸಬೇಕಾಗಿದೆ. ಖಾಸಗಿ ಆಸ್ಪತ್ರೆಗಳೂ ಕಡಿಮೆ ಪ್ರಮಾಣದಲ್ಲಿದ್ದು, ಅವೂ ಕೂಡ ಜನತೆಯ ಆರೋಗ್ಯ ಸುಧಾರಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಹೆಚ್ಚಿನ ವೈದ್ಯಕೀಯ ನೆರವು ಪಡೆಯಲು ಇಲ್ಲಿಯ ಸಾರ್ವಜನಿಕರು, ಹೊಸಪೇಟೆ ಬಳ್ಳಾರಿ ಮತ್ತು ಬೆಂಗಳೂರಿಗೆ ಹೊಗಬೇಕಾಗಿದೆ.

ಸಂಡೂರು ಕಬ್ಬಿಣದ ಅದಿರು, ಮ್ಯಾಂಗನೀಸ್ ಮತ್ತು ಕೆಂಪು ಆಕ್ಸೈಡ್‌ಗಳನ್ನು ಹೊರ ರಾಷ್ಟ್ರಗಳಿಗೆ ರಫ್ತು ಮಾಡಿ ಆ ರಾಷ್ಟ್ರಗಳೊಡನೆ ಉತ್ತಮ ವಾಣಿಜ್ಯ ಸಂಪರ್ಕವನ್ನು ಇಟ್ಟುಕೊಂಡಿದೆ. ಜಪಾನ್, ಚೈನಾ, ಪಾಕಿಸ್ತಾನ ಮುಂತಾದ ರಾಷ್ಟ್ರಗಳೊಡನೆ ವ್ಯಾಪಾರ ವಹಿವಾಟನ್ನು ಹೊಂದಿದೆ. ಅದುರಿನ ರಫ್ತಿನಿಂದಾಗಿ ಜಪಾನ್‌ನೊಡನೆ ೧೦ ವರ್ಷಗಳ ಅತಿ ದೀರ್ಘಾವಧಿಯ ವ್ಯಾಪಾರ ಒಪ್ಪಂದವೊಂದಕ್ಕೆ ಸಹಿಹಾಕಿದೆ.

ಇಲ್ಲಿ ಜೋಳ ಪ್ರಮುಖ ಬೆಳೆಯಾಗಿದ್ದು ಜೊತೆಗೆ ಮೆಣಸಿನಕಾಯಿ, ಶೆಂಗಾ, ಮೆಕ್ಕೆಜೋಳ, ಮುಂತಾದ ವಾಣಿಜ್ಯ ಬೆಳೆಗಳನ್ನೂ ಬೆಳೆಯಲಾಗುತ್ತಿದೆ.

ಇಲ್ಲಿಯ ತುಂಗಭದ್ರಾ ಗ್ರಾಮೀಣ ಬ್ಯಾಂಕು ಅಭಿವೃದ್ಧಿ ಕಾರ್ಯಗಳಿಗೆ ಸಹಾಯ ನೀಡಿದೆ. ಸಂಡೂರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸ್ಟೇಟ್ ಬ್ಯಾಂಕ್ ಆಫ್ ಅಗ್ರಿಕಲ್ಚರ್, ಸಿಂಡಿಕೇಟ್ ಬ್ಯಾಂಕ್, ಬಿ.ಡಿ.ಸಿ.ಸಿ. ಬ್ಯಾಂಕ್, ತುಂಗಭದ್ರಾ ಗ್ರಾಮೀಣ ಬ್ಯಾಂಕ್ ಮಾತ್ರವಲ್ಲದೆ, ಹಲವಾರು ಫೈನಾನ್ಸ್ ಕಾರ್ಪೋರೇಷನ್‌ಗಳು ಇಲ್ಲಿವೆ. ಮತ್ತು ಅತ್ಯುತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಸಂಡೂರಿನಲ್ಲಿ ಬ್ಯಾಂಕಿಗ್ ವ್ಯವಹಾರಗಳು ಅಷ್ಟೊಂದು ಸಮರ್ಪಕವಾಗಿ ಇರುವಂತೆ ಕಂಡುಬರುವುದಿಲ್ಲ (ಬರುತ್ತಿಲ್ಲ) ಆದರೆ ಈ ಬ್ಯಾಂಕುಗಳು ರೈತರ ಮತ್ತು ವ್ಯಾಪಾರಿಗಳ, ಕೈಗಾರಿಕೊದ್ಯಮಿಗಳ ಮತ್ತಿತರ ಕರಕುಶಲ ವಸ್ತುಗಳ ತಯಾರಿಕೆಗೆ ಆರ್ಥಿಕವಾಗಿ ಸಾಕಷ್ಟು ನೆರವೂ ನೀಡುತ್ತಿವೆ. ವಾಣಿಜ್ಯ ಮತ್ತು ವ್ಯಾಪಾರ ಇಲ್ಲಿ ಅತ್ಯುತ್ತಮ ಎನ್ನಬಹುದು.

ಇಲ್ಲಿಯ ಸಾರಿಗೆ ಸಂಪರ್ಕ ವ್ಯವಸ್ಥೆಗಳು ಅಷ್ಟೊಂದು ಸಮರ್ಪಕವಾಗಿಲ್ಲ ಎನ್ನಬಹುದು. ಇಲ್ಲಿಯ ರಸ್ತೆಗಳು ಸಾಮಾನ್ಯವಾಗಿ ಮಣ್ಣಿನ ರಸ್ತೆಗಳು. ಇದರಿಂದಾಗಿ ಇಲ್ಲಿ ದೊಡ್ಡ-ದೊಡ್ಡ ಲಾರಿಗಳು ಹೆಚ್ಚಾಗಿ ಓಡಾಡುವುದರಿಂದ ರಸ್ತೆಗಳು ಹದಗೆಡುತ್ತಿವೆ. ಇದಕ್ಕಾಗಿ ಸರ್ಕಾರ ಲಾರಿಗಳಿಗೆ ಮತ್ತು ಬಸ್‌ಗಳಿಗೆ ಬೇರೆ ಬೇರೆ ದಾರಿ ಮಾಡಿದರೆ ಯೋಗ್ಯವಾಗಿ ವಾಯು ಮಾಲಿನ್ಯವನ್ನು ಸಾಧ್ಯವಾದಷ್ಟು ತಡೆಗಟ್ಟಬಹುದು.

ಹಸಿರಿನ ಗಿರಿವನ ರಾಜಿಯನ್ನು ಹೊಂದಿರುವ ಅಪರೂಪದ ಪ್ರಕೃತಿ ಸಂಪತ್ತಿನ ಪ್ರದೇಶ ಸಂಡೂರಾಗಿದೆ. ಇಲ್ಲಿನ ಬೆಟ್ಟಗುಡ್ಡಗಳು ಸಾಲುಗಳು ಸಂಡೂರಿಗೆ ರಕ್ಷಣೆ ಕೋಟೆಯಂತಿದ್ದು ಅವು ವಿಶಾಲವಾಗಿ ಹಬ್ಬಿರುವುದರಿಂದ ಒಂದು ಮಲೆನಾಡಿನ ಪರಿಸರವನ್ನು ನಿರ್ಮಿಸಿದೆ.

ಈ ಪ್ರದೇಶದ ಬೆಳೆ ಮೊದಲಿಗೆ ಸಜ್ಜೆ, ನವಣೆ, ಜೋಳ, ಮೆಕ್ಕೆಜೋಳ, ಇದ್ದವು. ಆದರೆ ಇತ್ತಿಚೀಗೆ ಜಿಂದಾಲ್ ಕಾರ್ಖಾನೆಯಿಂದಾಗಿ ಕೃಷಿ ಬಡವಾಗಿದೆ. ರೈತರಿಗೆ ಕೂಲಿ ಕೆಲಸಗಾರರು ಸಿಗುವುದೇ ದುಸ್ತರವಾಗಿ ಒಕ್ಕಲುತನ ಕಾರ್ಯಗಳು ತುಂಬಾ ಕಷ್ಟದಾಯಕವಾಗಿವೆ. ಸಂಡೂರಿಗೂ ಪ್ರಾಥಮಿಕ ಅಂಗನವಾಡಿ ಕೇಂದ್ರಗಳಿವೆ. ಈ ಭಾಗದಲ್ಲಿ ಗೊಲ್ಲರು, ನಾಯಕರು, ಕುರುಬರು, ಹರಿಜನರು, ಚಲುವಾದಿ, ವೈಶ್ಯರು, ವೀರಶೈವರು, ಬ್ರಾಹ್ಮಣರು ಹೆಚ್ಚಾಗಿದ್ದು, ಕುಲಕಸುಬಿನ ಆಧಾರಿತ ವಿಶ್ವಕರ್ಮ ಜನಾಂಗ ಕಂಡುಬರುತ್ತಾರೆ. ಇಲ್ಲಿಯ ಜನಾಂಗದವರು ಕನ್ನಡ, ತೆಲುಗು, ಹಿಂದಿ, ಮರಾಠಿ, ಮುಂತಾದ ಭಾಷೆಯನ್ನು ಆಡುತ್ತಾರೆ. ಪ್ರತಿಗ್ರಾಮದಲ್ಲೂ ದೈವಾರಾಧನೆ ಇರುವಂತೆ

ಈ ಗ್ರಾಮದಲ್ಲೂ ಉಡಚಲಮ್ಮ, ಊರಮ್ಮ, ಲಿಂಗದ್ಯೆವಗಳು, ಗಂಡಿ ಮಾರಮ್ಮ ಮುಂತಾದ ದೈವಗಳ ಆರಾಧನೆ ಇದೆ. ಇಲ್ಲಿ ಸಾಕ್ಷರತಾ ಕಾರ್ಯಕ್ರಮ ಅಂಗನವಾಡಿ ಕೇಂದ್ರ ಮತ್ತು ಪ್ರಾಥಮಿಕ ಶಾಲೆ ಮುಂತಾದ ಮೂಲಭೂತ ಸೌಕರ್ಯಹೊಂದಿ ಸುಧಾರಣೆಯತ್ತ ಸಾಗುತ್ತಿದೆ.

ಸಂಡೂರಿನಲ್ಲಿ ಬಳ್ಳಾರಿ ರಸ್ತೆಯಿಂದ ದೋಣಿಮಲೆಯವರೆಗೆ, ವಿಭಾಗಿಸುವ ರಸ್ತೆಯನ್ನೊಳಗೊಂಡು ಯಶವಂತನಗರ ದಾಟಿ ಸೋಮಲಾಪುರದವರೆಗೂ ರಸ್ತೆ ಬದಿ ಇದ್ದ ಸಾವಿರಾರು ದೊಡ್ಡ ದೊಡ್ಡ ಮರರಗಳು ರಸ್ತೆಯ ಅಗಲೀಕರಣಕ್ಕೆ ಬಲಿಯಾದ ವಿದ್ರಾವಕ ಘಟನೆಗಳು ಮನಸ್ಸಿಗೆ ನೋವನ್ನುಂಟು ಮಾಡುತ್ತಿದೆ. ಅದಿರು ಸಾಗಾಣಿಕೆ, ರಸ್ತೆಯ ಅಗಲೀಕರಣ ಸೇರಿ ಪ್ರಸ್ತುತ ಸಂಡೂರಿನ ವಾತಾವರಣದಲ್ಲಿ ಧೂಳಿನ ಕಾಲುಷ್ಯ ಅಧಿಕವಾಗಿದೆ. ಇಷ್ಟು ಧೂಳು ಸೇವನೆಯಲ್ಲೂ ನಿರಾತಂಕವಾಗಿ ಯಾವುದೇ ರೀತಿಯ ಪ್ರತಿಭಟನೆಯೇ ಇಲ್ಲದೆ ಬದಕುವ ಜನರ ತಾಳ್ಮೆ ಮತ್ತು ಸಹಿಷ್ಣತೆ ಅಚ್ಚರಿ ಮೂಡಿಸದೇ ಇರಲಾರದು.

೧.೭ ರಾಜಕೀಯ

ಸಂಡೂರು ಅರಸರ ಮನೆತನದ ಮೂಲ ಮಹಾರಾಷ್ಟ್ರ ಅರಸು ಮನೆತನದವರು ಘೋರ್ಪಡೆ ವಂಶದವರು. ಘೋರ್ಪಡೆ ಎಂದರೆ ಮರಾಠಿ ಭಾಷೆಯಲ್ಲಿ 'ಉಡ' ಎಂದೆ ಅರ್ಥ. ಸಂಡೂರನ್ನು ಮೊದಲಿಗೆ ಸಿದ್ದೋಜಿರಾವ್ ಎಂಬ ಮರಾಠ ಸೇನಾಧಿಪತಿ ೧೭೨೮ ರಲ್ಲಿ ಸ್ಥಳೀಯ ಕೂಡ್ಲಿಗಿಯ ಜರಿಮಲೆ ನಾಯಕನನ್ನು ಓಡಿಸಿ ವಶಪಡಿಸಿಕೊಂಡಿದ್ದನಂತೆ. ಇವರಿಗೆ ಘೋರ್ಪಡೆ ಎಂಬ ಅಡ್ಡ ಹೆಸರಿತ್ತೆಂದೂ ತಿಳಿದು ಬರುತ್ತದೆ. ಇದರಿಂದ ಮುಂದೆ ಈತನ ವಂಶಕ್ಕೆ ''ಘೋರ್ಪಡೆ ವಂಶ'' ವೆಂದೂ ಹೆಸರು ಬಂತು. ಮುಂದೆ ಈತನ ಮಗ ಮುರಾರಿರಾಯನಿಗೆ ಪೇಶ್ವೆಯವರು ಸೇನಾಧಿಪತಿ ಎಂಬ ಬಿರುದನ್ನು ದಯಪಾಲಿಸಿದರು.

೧೭೭೫ - ೭೬ ರಲ್ಲಿ ಹೈದರಾಲಿಯು ಗುತ್ತಿ ಮತ್ತು ಸಂಡೂರುಗಳನ್ನು ವಶಪಡಿಸಿಕೊಂಡನು. ೧೭೮೫ ರಲ್ಲಿ ಮುರಾರಿರಾಯನ ದತ್ತು ಪುತ್ರ ಶಿವರಾಯನು ಟಿಪ್ಪುವಿನ ಸೈನಿಕರನ್ನು ಹೊರದೂಡಲು ಯತ್ನಿಸಿ ಹತನಾದನು. ಆದರೆ ೧೭೯೦ ರಲ್ಲಿ ವೆಂಕಟರಾವ್ ಎಂಬುವವನು ಟಿಪ್ಪುವನ್ನು ಸೋಲಿಸಿ ಸಂಡೂರನ್ನು ಗೆದ್ದುಕೊಂಡ. ೧೭೯೨ ರಲ್ಲಿ ಟಿಪ್ಪುವಿಗೂ, ಈಸ್ಟ ಇಂಡಿಯಾ ಕಂಪನಿಗೂ ನಡೆದ ಒಪ್ಪಂದದಂತೆ ಘೋರ್ಪಡೆ ವಂಶದವರಿಗೆ ಸಂಡೂರಿನ ಅಧಿಕಾರವನ್ನು ನೀಡಲಾಯಿತು.

ಪೇಶ್ವಯವರಿಗೂ ಇಂಗ್ಲಿಷರಿಗೂ ಆದ ಬೆಸ್ಸಿನ್ ಒಪ್ಪಂದದಂತೆ ಸಂಡೂರು ಇಂಗ್ಲಿಷರು ೧೮೧೭ ರಲ್ಲಿ ವಶಪಡಿಸಿಕೊಂಡರು. ಆದರೆ ಪೇಶ್ವೆಯವರ ಪತನದನಂತರ ೧೮೧೮ ರಲ್ಲಿ ಸಂಡೂರನ್ನು ಮತ್ತೆ ಘೋರ್ಪಡೆ ಮನೆತನಕ್ಕೆ ವಹಿಸಿಕೊಡಲಾಯಿತು. ಅಲ್ಲದೆ ೧೮೨೬ ರಲ್ಲಿ ಬ್ರೀಟಿಷ ಸರ್ಕಾರ ಒಂದು ಸನ್ನದನ್ನು ಜಾರಿಗೆ ತಂದು ೧೮೭೬ ರಲ್ಲಿ ''ರಾಜಾ'' ಎನ್ನುವ ಅಭಿದಾನವನ್ನು ನೀಡಿತು.

ಘೋರ್ಪಡೆ ವಂಶದವರೇ ಆದ ಯಶವಂತರಾವ್ ಹಿಂದೂರಾವ್ ಘೋರ್ಪಡೆ ಯವರು ೧೯೨೮ ರಲ್ಲಿ ಪಟ್ಟಕ್ಕೆ ಬಂದು ರಾಜರಾದರು. ಈ ರಾಜ್ಯದಲ್ಲಿ ಪ್ರಜಾಮಂಡಳಿ ಎಂಬ ಹೆಸರಿನ ಶಾಸಕಾಂಗವಿದ್ದು ಅತ್ಯುತ್ತಮ ಶಾಸನಗಳನ್ನು ಜಾರಿಗೆ ತಂದಿತ್ತೆಂದೂ ತಿಳಿದುಬರುತ್ತದೆ.

ಪ್ರಾರಂಭದಲ್ಲಿ ಸಂಡೂರಿನಲ್ಲಿ ಶಾಸನಬದ್ಧವಾದ ಆಡಳಿತವಿರಲಿಲ್ಲವೆಂದೂ, ರಾಜರು ಹೊರಡಿಸಿದ 'ಫರ್ಮಾನು' ಗಳೇ ಶಾಸನಗಳಾಗುತ್ತಿದ್ದವೆಂದೂ ತಿಳಿದುಬರುತ್ತದೆ. ಅಲ್ಲದೆ ಅವಶ್ಯಕತೆ ಒದಗಿದಾಗ ನೆರೆಯ

ರಾಜ್ಯವಾದ ಮದರಾಸ್ ಪ್ರಾಂತ್ಯ ರೂಪಿಸಿದ ಕಾನೂನುಗಳನನ್ನೇ ಈ ಸಂಡೂರು ರಾಜ್ಯಕ್ಕೆ ಅನ್ವಯಿಸಲಾಗುತ್ತಿತ್ತು. ಆದರೆ ೧೯೩೦ ನೆಯ ಫೆಬ್ರವರಿ ಐದರಂದು ಸಂಡೂರಿನ ವಿಶಿಷ್ಟ ಆಡಳಿತ ಸೂತ್ರಗಳನ್ನು ಕೈಗೆ ತೆಗೆದುಕೊಂಡಾಗ ಯಶವಂತರಾವ್ ಹಿಂದೂರಾವ್ ಘೋರ್ಪಡೆಯವರು ಸಂಡೂರಿನ ಪ್ರಜೆಗಳ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುವುದಾಗಿ ವಾಗ್ದಾನ ಮಾಡಿದರಲ್ಲದೆ ಪ್ರಜಾ ಕಲ್ಯಾಣಕ್ಕಾಗಿ ಸಾಕಷ್ಟು ಶ್ರಮಿಸಿದರು.

ಈ ಸಂಸ್ಥಾನದ ಶಾಸನಸಭೆಯಾದ ಪ್ರಜಾಮಂಡಳಿ ಎಂಬುದು ೧೯೩೧ ರಲ್ಲಿ ಮೊಟ್ಟಮೊದಲ ಬಾರಿಗೆ ರೂಪತಾಳಿತು. ಈ ಆಡಳಿತ ವಿಧಾನವೂ ಈ ಪುಟ್ಟ ಸಂಸ್ಥಾನದ ಪ್ರಜಾಪ್ರಭುತ್ವವು ಭಾರತದ ವಿಶಾಲ ಪ್ರಜಾ ಸತ್ತೆಯೊಡನೆ ವಿಲೀನವಾದಾಗ ಕೊನೆಗೊಂಡಿತು.

೧೯೪೭ ರಲ್ಲಿ ಸ್ವತಂತ್ರವಾದಾಗ ಬ್ರಿಟಿಷ್ ಸರ್ಕಾರ ಸಾರ್ವಭೌಮತ್ವವನ್ನು ದೇಶಿಯ ರಾಜರಿಗೇ ಬಿಟ್ಟುಕೊಟ್ಟಿತು. ಅನಂತರ ಸಂಡೂರು ಸಂಸ್ಥಾನವೂ ಮೈಸೂರಿನಲ್ಲಿ ವಿಲೀನಗೊಂಡಿತಲ್ಲದೆ ಬಳ್ಳಾರಿ ಜಿಲ್ಲೆಗೆ ಸಂಡೂರನ್ನು ೧೯೪೯ ರಲ್ಲಿ ಸೇರಿಸಲಾಯಿತು. ಇದರ ಪರಿಣಾಮವಾಗಿ ಸಂಡೂರು, ಚೊರನೂರು ಮತ್ತು ತೋರಣಗಲ್ಲು 'ಫಿರ್ಕಾ' ಗಳನ್ನೊಳಗೊಂಡ ಸಂಡೂರು ತಾಲ್ಲೂಕು ರೂಪುಗೊಂಡಿತು. ರಾಜಮನೆತನದವರು ಸಂಡೂರಿನಲ್ಲಿ ಗೌರವ ಪ್ರತಿಷ್ಠೆಗಳನ್ನು ಕಾಪಾಡಿಕೊಂಡು ಇಂದಿಗೂ ಆದರಣೀಯರಾಗಿದ್ದಾರೆ.

ರಾಯಘಡದಲ್ಲಿ ಮತ್ತು ಕುಮಾರಸ್ವಾಮಿ ಬೆಟ್ಟದಲ್ಲಿ ದೊರೆತಿರುವ ಕುಮಾರ ಸ್ವಾಮಿ ಶಾಸನಗಳು ಈ ಎರಡು ಶಾಸನಗಳು ಸಂಡೂರಿನ ಬಗ್ಗೆ ತಿಳಿಸುವ ಪ್ರಮುಖ ಶಿಲಾಶಾಸನಗಳಾಗಿವೆ. ಅವುಗಳಲ್ಲಿ ಇಲ್ಲಿಯ ಜನ ಕನ್ನಡ ಜನರೆಂದೂ, ಈ ಸಂಸ್ಥಾನ ವಿಜಯನಗರ ಸಾಮ್ರಾಜ್ಯಕ್ಕಿಂತ ಮೊದಲೆ ಅಸ್ತಿತ್ವದಲ್ಲಿತ್ತೆಂದು ನಂತರ ವಿಜಯನರ ಆಡಳಿತದಲ್ಲಿ ಸೇರಿಹೋಯಿತೆಂದೂ, ಮಹಾರಾಷ್ಟ್ರವೂ ಈ ದೊರೆಗಳ ಮೂಲ ಸ್ಥಾನವೆಂದೂ ಉಲ್ಲೇಖಿಸಿದೆ.

ಹೀಗೆ ಸಂಡೂರಿನಲ್ಲಿ ನಾಗರಿಕತೆ ಬೆಳೆದಂತೆ ರಾಜಕೀಯವೂ ಸಂಡೂರಿನಲ್ಲಿ ತಲೆದೂರಿತು. ಮೊದಲು ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೆ ಜಿಲ್ಲಾ ಪಂಚಾಯಿತಿಗಳವರೆಗೂ ಬೆಳೆದು ಈಗ ಮತ ಚಾಲಾಯಿಸಿ ಅಧಿಕಾರಿಗಳನ್ನು ಆಯ್ಕೆ ಮಾಡುವ ಹಂತಕ್ಕೆ ಬಂದಿದೆ. ಮೊದಲಿನಿಂದಲೂ ರಾಜಕೀಯದಲ್ಲಿ ತಿಕ್ಕಾಟವಿರುವಂತೆ ಈಗಲೂ ಇದು ಕಂಡುಬರುತ್ತದೆ.

೧.೮ ಧಾರ್ಮಿಕತೆ

ಧರ್ಮ ಎನ್ನುವುದು ಆದಿಮಾನವನಿಂದಿಡಿದು ಆಧುನಿಕ ಮಾನವನವರೆಗೆ ಒಂದು ಮಾನಸಿಕ ಆಧಾರವಾಗಿದೆ. ಬದುಕಲು ಅಗತ್ಯವಾದ ಒಂದು ಶ್ರದ್ಧೆ, ಅತಿಮಾನುಷ ಶಕ್ತಿಯ ಆಶ್ರಯ ಮತ್ತು ಅದರ ಜೊತೆಗೆ ಮಾನವನ ಒಂದು ಸ್ವೀಕೃತ ಸ್ಥಿರ ಸಂಬಂಧವೇ ಧರ್ಮಎಂದು ಹೇಳಬಹುದು. ನಮ್ಮ ಸುತ್ತ ಮುತ್ತಣ ಪ್ರಪಂಚ, ನಿಸರ್ಗದ ಅಧ್ಭುತ ಕಾರ್ಯಗಳ ಆಚೆ ಇರುವ ಅತೀತ ಅಥವಾ ಅತಿಮಾನುಷ ಶಕ್ತಿ ಧರ್ಮದ ಒಂದು ಮುಖ್ಯವಾದ ಅಂಶವಾಗಿದೆ. ಮಾನವ ಆಂತರಿಕ ಅನಿಸಿಕೆಗಳು ಅವನ ಸಾಮಾಜಿಕ ಜೀವನದ ಧರ್ಮದ ಆಯಾಮವನ್ನು ಸೂಚಿಸುತ್ತದೆ. ಕೇವಲ ಕಣ್ಣಿಗೆ ಕಾಣುವ ಭೌತಿಕ ಜೀವನ ಜಗತ್ತಿನ ಸಂಕೀರ್ಣತೆಗಳಷ್ಟೇ ಧಾರ್ಮಿಕ ಸ್ಪಂದನಗಳಾಗುವುದಿಲ್ಲ. ಅವು ಅದರ ತಳಹದಿಗಳಾವುದಿಲ್ಲ.

ಧರ್ಮ ಎನ್ನುವುದು ಮಾನವ ನಂಬುಗೆಗಳಲ್ಲಿ ಒಂದಾಗಿದ್ದು ಅವನು ಸೃಷ್ಟಿಯ ಅನಂತತೆಯೊಂದಿಗೆ ತನ್ನ ಸಂಬಂಧವನ್ನು ಸ್ಥಾಪಿಸಿಕೊಳ್ಳುವ ನಿಟ್ಟಿನಲ್ಲಿ ಬೆಳೆಸಿಕೊಂಡ ಒಂದು ಆಧ್ಯಾತ್ಮ ಶಕ್ತಿಯಾಗಿರುತ್ತದೆ. ಮನುಷ್ಯನ

ನಂಬಿಕೆಯ ಆಳದಲ್ಲಿ ದೈವವು ಸರ್ವಶಕ್ತವಾಗಿರುತ್ತದೆ. ಅದು ಕೆಟ್ಟವರನ್ನು ಶಿಕ್ಷಿಸುತ್ತದೆ. ಒಳ್ಳೆಯವರನ್ನು ರಕ್ಷಿಸುತ್ತದೆ. ನೈತಿಕ ಮಟ್ಟವನ್ನು ಉಳಿಸುತ್ತದೆ. ನೀತಿನ್ಯಾಯಗಳನ್ನು ಎತ್ತಿಹಿಡಿದು ಕಾಪಾಡುತ್ತದೆ. ಹೀಗೆ ನೀತಿ ನಿಯಮಗಳನ್ನು ಪಾಲಿಸುವ ಧರ್ಮಾಚರಣೆಗಳಲ್ಲಿ ತೊಡಗಿ ಅವನನ್ನು ಕಲ್ಯಾಣದತ್ತ ಸಾಗಿಸಲು ಅದು ನೆರವಾಗುತ್ತದೆ. ಅದ್ದರಿಂದ ಧರ್ಮಎನ್ನುವುದು ನಮ್ಮ ನೈತಿಕ ಜೀವನದ ಮುಖ್ಯವಾದ ಅಂಶಗಳಲ್ಲಿ ಒಂದಾಗಿದೆ. ಎಂಬುದು ಜನಪದರ ನಂಬಿಕೆಯಾಗಿದೆ. ಹೀಗೆ ಧರ್ಮ ಎನ್ನುವುದು ಆದಿಮಾನವ ಕಾಲದಿಂದ ಮೂಡಿ ಬಂದ ಬದುಕಿನ ಒಂದು ಕೇಂದ್ರ ದೃಷ್ಟಿ ನೈತಿಕ ಜೀವನದ ಅರ್ಥಪೂರ್ಣತೆಯನ್ನು ಆಂತರಿಕ ಅನಿಸಿಕೆಗಳನ್ನು ನಂಬುಗೆಗಳನ್ನು ಸಂಯೋಜಿಸುವ ಮಾನವ ಬದುಕಿನ ಒಂದು ಅಪೂರ್ವ ಶಕ್ತಿಯಾಗಿದೆ.

ಒಂದು ಜನಾಂಗದ ಒಂದು ಸಮೂಹದ ಸಮಗ್ರ ಜೀವನ ಕ್ರಮ ಮತ್ತು ಸಮೃದ್ಧಿ ಜೀವನ ವಿಧಾನಗಳಲ್ಲಿ ಧರ್ಮವನ್ನು - ಧಾರ್ಮಿಕ ಸ್ವರೂಪವನ್ನು ಕಾಣುತ್ತೇವೆ. ಹುಟ್ಟಿನಿಂದ-ಮಸಣದವರೆಗೆ ಬೆಳಗಿನಿಂದ ರಾತ್ರಿ ನಿದ್ದೆಗಳವರೆಗೆ ಇರುವ ದೈನಂದಿನ ಬದುಕಿನುದ್ದಕ್ಕೂ ಜನಪದರು ದೈವವನ್ನು ಸ್ಮರಿಸುತ್ತಲೇ ಇರುತ್ತಾರೆ. ಆಯಾ ಜನಾಂಗದ ಧರ್ಮ ಆದಿಕಾಲದಿಂದ ಹಿಡಿದು ಇಂದಿನ ಮಾನವರ ತನಕವೂ ಧಾರ್ಮಿಕ ಪ್ರಜ್ಞೆಯನ್ನು ಉಳಿಸಿಕೊಂಡೇ ಬಂದಿದೆ. ಉಳಿಸಿಕೊಂಡು ಉಸಿರಾಡುತ್ತಿದೆ. ಧರ್ಮದ ಅರ್ಥಪೂರ್ಣತೆಯನ್ನು ಹೊಂದಿದಾಗ ಮಾತ್ರ ಧರ್ಮದ ತರ-ತರವುಗಳು, ಜನಪದರಲ್ಲಿ ಚಲನೆ ಹೊಂದಿದ ಸಂಘರ್ಷಗಳು ನಿವಾರಣೆಗೊಳ್ಳುವ ಸಾಧ್ಯತೆ ಹೆಚ್ಚುತ್ತದೆ.

'ಏಕದೇವತಾವಾದ' ಆದಿಮಾನವನ ಮೂಲ ಧರ್ಮ ಸಿದ್ಧಾಂತವಾಗಿದೆ. ಜನಪದರ ಮೂಲ ಭೂತ ಶ್ರದ್ಧೆ ಅರ್ಚನಾವಿಧಾನ, ಸ್ವರೂಪದ ಅವಸ್ಥಾಂತರಗಳು ಎನ್ನುವುದನ್ನು ನೆನಪಿನಲ್ಲಿ ಉಳಿಸಿಕೊಳ್ಳಬೇಕು. ಮರೆಯಕೂಡದು. ಆದಿಮಾನವನಿಂದ ಆಧುನಿಕ ಮಾನವನ ವರೆಗಿನ ಬೆಳವಣಿಗೆಯ ವಿವಿಧ ಹಂತಗಳು ಧರ್ಮದ (ಧಾರ್ಮಿಕ) ವಿಕಾಸದ ವಿವಿಧ ಮೆಟ್ಟಿಲುಗಳಾಗಿವೆ. ಈ ದೃಷ್ಟಿಯಿಂದ ಜನಪದ ಧರ್ಮವನ್ನು ಕುರಿತು ನಿಖರವಾಗಿ ಹೇಳುವುದು ಧಾಷ್ಟ್ಯದ ದರ್ಪದ ಮಾತು. ಏಕೆಂದರೆ ಧರ್ಮ ಎನ್ನುವುದು ವ್ಯವಸ್ಥಿತವಾದ ಸಮಾಜದ ಪರಿಕಲ್ಪನೆ, ಮೂಲಭೂತ ನಡವಳಿಕೆಗಳಲ್ಲಿ ತೊಡಗಿ ಪ್ರವಹಿಸುತ್ತ ಬಂದ ನಂಬಿಕೆ ಆಚರಣೆಗಳ ರೂಪದಲ್ಲಿ ಧರ್ಮದ ಸ್ವರೂಪಗಳನ್ನು ಗುರ್ತಿಸಬಹುದಾಗಿವೆ.

ಯಾವುದೇ ಒಂದು ಜನಪದ ಸಮೂಹಕ್ಕೆ ತನ್ನದೇ ಆದ ಧಾರ್ಮಿಕತೆ ಇರುತ್ತದೆ. ಆದರೆ ಧಾರ್ಮಿಕತೆ ಇರದೆ ಧರ್ಮವನ್ನು ಅಳವಡಿಸದೆ ಯಾವ ಜನಪದ ವೃಂದ ಜನಾಂಗಗಳ ವಿಕಾಸ ಹೊಂದುವುದು ಮಾತ್ರ ಸಂದೇಹದ ಮಾತು. ಏಕೆಂದರೆ ಧರ್ಮ ಒಂದು ಜನಸಮೂಹದ ವಿಕಾಸ ಕ್ರಮದಲ್ಲಿ ಹುಟ್ಟಿದಂತಹುದು. ಅದು ಕ್ರಮೇಣ ಪಂಥದ ಅಥವಾ ನಿರ್ಧಿಷ್ಟ ಪ್ರಾದೇಶಿಕ, ಜನಾಂಗೀಯ ಮಿತಿಗಳಿಗೊಳಪಟ್ಟು ಮೂಲಭೂತವಾಗುತ್ತಾ ಹೋಯಿತು. ಇಂದು ಧರ್ಮದ ಹೆಸರಿನಲ್ಲಿ ಜಗತ್ತಿನಲ್ಲಿ ನಡೆಯದೇ ಇರುವ ಅನಾಚಾರಗಳಿಲ್ಲ. ಹಿಂಸೆ ಮತ್ತು ರಕ್ತಪಾತ ಬಹುಶ ಯುದ್ಧಗಳಿಗಿಂತಲೂ ಧಾರ್ಮಿಕ ಸಂಘರ್ಷಗಳಲ್ಲಿ ಪ್ರವಾಹೋಪಾದಿಯಲ್ಲಿ ಹರಿದಿದೆ. ಹರಿಯುತ್ತಲೇ ಇದೆ.

ಸಂಡೂರು ಸರ್ವಧರ್ಮ ಸಾಮರಸ್ಯಕ್ಕೆ ಪ್ರತೀಕವಾಗಿದೆ. ಇಲ್ಲಿ ಎಲ್ಲ ಧರ್ಮಗಳ ಜನರು ವಾಸವಾಗಿದ್ದಾರೆ. ಯಾವುದೇ ಧರ್ಮದಲ್ಲಿ ಧಾರ್ಮಿಕ ವೈಮನಸ್ಸು ಇಲ್ಲದೆ ಇರುವುದನ್ನು ನಾವು ಕಾಣಬಹುದು. ಒಂದು ಧರ್ಮದವರು ಇನ್ನೊಂದು ಧರ್ಮದ ದೇವಾಲಯಗಳಿಗೆ ದಾನ ದತ್ತಿಗಳನ್ನು ಬಿಟ್ಟಿದ್ದಾರೆ. ಈಗಾಗಿ ಸರ್ವಧರ್ಮ ಸಮನ್ವಯವನ್ನು ಇಲ್ಲಿ ಕಾಣುತ್ತೇವೆ. ಅಲ್ಲದೆ ವಿಜಯನಗರದ ಆಸ್ಥಾನದಲ್ಲಿ ಎಲ್ಲ ಧರ್ಮದವರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿಕೊಟ್ಟಿತ್ತು ಎಂದು ತಿಳಿದು ಬರುತ್ತದೆ. ಅಲ್ಲಿ ಜೈನ, ಶೈವ, ವೈಷ್ಣವ, ಮುಸ್ಲಿಮರಿಗೆ ಸಂಬಂಧಿಸಿದ ಗುಡಿ

ಗುಂಡಾರಗಳನ್ನು ಕಟ್ಟಿಸಿದರು. ಸಂಡೂರಿನ ರಾಜರು ಧರ್ಮಕ್ಕೆ ವಿಶೇಷ ಪ್ರೋತ್ಸಾಹ ಉತ್ತೇಜನ ಕಲ್ಪಿಸಿರುವುದು ಕಂಡುಬರುತ್ತದೆ. ಸಂಡೂರಿನಲ್ಲಿ ಜೈನ ಧರ್ಮ ಮತ್ತು ಬೌದ್ಧ ಧರ್ಮವನ್ನೂ ಕಾಣುತ್ತೇವೆ. ಇಲ್ಲಿ ಜೈನ ಧರ್ಮದ ಗುಡಿಯೂ ಇದೆ. ಜೈನ ಮತ್ತು ಬುದ್ಧ ಜಯಂತಿಯಂದು ಇಲ್ಲಿನ ಜೈನರು ಮತ್ತು ಇತರ ಜನರು ಎಲ್ಲರೂ ಸೇರಿ ಸಮನ್ವಯದಿಂದ ಅದರ ಉತ್ಸವದಲ್ಲಿ ಪಾಲ್ಗೊಳ್ಳುತ್ತಾರೆ.

ಹಾಗೆಯೇ ಸಂಡೂರು ಪ್ರದೇಶವು ಹಿಂದು ಮುಸ್ಲಿಮರ ಬಾಂಧ್ಯವಕ್ಕೆ ಹೆಸರಾಗಿದೆ. ಇಲ್ಲಿನ ಎಲ್ಲ ಹಿಂದುಗಳೂ ಮೊಹರಂ ಅನ್ನು ಆಚರಿಸುತ್ತಾರೆ. ಸೂಫಿಸಂತರ ಪುಣ್ಯತಿಥಿಗಳಾದ ಉರುಸುಗಳನ್ನು ಭಯ, ಭಕ್ತಿ, ಗೌರವಗಳಿಂದ ಆಚರಿಸುತ್ತಾರೆ. ಯಾವುದೇ ಕೋಮುಭಾವನೆಗಳು ನುಸುಳಲು ಇಲ್ಲಿ ಸಾಧ್ಯವಿಲ್ಲ.

ಅಧ್ಯಾಯ ಮೂರು

ದೈವಗಳ ಪರಂಪರೆ

ಅಧ್ಯಾಯ ಮೂರು

ದೈವಗಳ ಪರಂಪರೆ

ದೈವಗಳ ಪರಂಪರೆ ಇವತ್ತಿನದು ನೆನ್ನೆಯದು ಮೊನ್ನೆಯದು ಅಲ್ಲ. ಶತಮಾನಗಳಿಂದಲೂ ಕೂಡ ಜನಪದರು ದೈವಗಳ ಮೊರೆಹೋಗಿರುವುದನ್ನು ನಮ್ಮ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ, ವೇದಗಳು-ಉಪನಿಷತ್ತುಗಳು, ಭಗವದ್ಗೀತೆ, ಮೊದಲಾದ ಗ್ರಂಥಗಳಲ್ಲಿ, ವಾಸ್ತುಶಿಲ್ಪಗಳನ್ನು, ತಾಳೆಗರಿಗಳನ್ನು, ಚಿತ್ರಕಲೆಗಳನ್ನು ಅವಲೋಕಿಸುವಾಗ ತಿಳಿದುಬರುತ್ತದೆ. ದೈವಗಳ ವಿಕಾಸ ಕುರಿತು ಅನೇಕ ವಿದ್ವಾಂಸರು ಪಂಡಿತ ಪಾಮರರು ಪಾಶ್ಚಿಮಾತ್ಯ ವಿದ್ವಾಂಸರು ದೈವಗಳ ಮೂಲದ ಬಗ್ಗೆ ತಮ್ಮದೇ ವಾದವಿವಾದಗಳನ್ನು ಮಂಡಿಸಿದ್ದಾರೆ. ಆದ್ದರಿಂದ ನನ್ನ ಅಧ್ಯಯನದಲ್ಲಿ ಪ್ರಾಚೀನಕಾಲದಿಂದ ಹಿಡಿದು ಇಂದಿನ ಆಧುನಿಕತೆಯವರೆಗೆ ದೈವಗಳ ಒಟ್ಟು ಪರಂಪರೆಯನ್ನು ಸೂಕ್ಷ್ಮ ದೃಷ್ಟಿಯಿಂದ ವಿವೇಚಿಸಿ, ವಿಶ್ಲೇಷಿಸಿ, ವಿವರಣಾತ್ಮಕವಾದ ಅಂಶಗಳನ್ನು ಈ ಅಧ್ಯಯನಕ್ಕೆ ಅಡಕಗೊಳಿಸಿಕೊಳ್ಳಲಾಗಿದೆ. ಅದರಲ್ಲೂ ಪ್ರಸ್ತುತ ಅಧ್ಯಯನದಲ್ಲಿ ಸಂಡೂರು ಗ್ರಾಮಪರಿಸರದೊಳಗೆ ಜನಪದರ ದೈವಗಳನ್ನು ಪ್ರಧಾನವಾಗಿ ಅಧ್ಯನಕ್ಕೆ ಒಳಪಡಿಸಿಲಾಗಿದೆ.

೧.೧ ದೈವದ ಕಲ್ಪನೆ

"ದೈವದ ಹುಟ್ಟಿಗೆ ಮೂಲಕಾರಣ ಮನುಷ್ಯನ ಭಾವನೆ"

ಪ್ರಾಚೀನದಿಂದ ಅರ್ವಾಚೀನದವರೆಗಿನ ಮಾನವ ಸಂಸ್ಕೃತಿಯ ಇತಿಹಾಸದಲ್ಲಿ ದೈವಗಳ ಕಲ್ಪನೆ ರೋಚಕವಾದುದು. ಭಾಷೆ ಇನ್ನು ರೂಪಗೊಳ್ಳುವ ಪೂರ್ವದಲ್ಲಿ ಕೇವಲ ಕೂಗು, ಸನ್ನೆಗಳಿಂದಲೇ ಭಾವನೆಗಳನ್ನು ಅಭಿವ್ಯಕ್ತಗೊಳಿಸುವಂಥ ಕಾಲದಲ್ಲಿ ಸ್ವರ್ಗ- ನರಕ, ಪಾಪ-ಪುಣ್ಯ ಇತ್ಯಾದಿ ಯಾವುದರ ಬಗ್ಗೆಯೂ ಪರಿಕಲ್ಪನೆ ಇಲ್ಲದ ಮುಗ್ಧ ಮನಸ್ಸಿನ ಆದಿಮಾನವನಿಗೆ ಪ್ರಕೃತಿಯು ಒಂದು ವರವಾಗಿತ್ತು. ಸೂರ್ಯೋದಯ ಸೂರ್ಯಾಸ್ತ, ಚಂದ್ರ, ನಕ್ಷತ್ರ, ಗುಡುಗು ಸಿಡಿಲು-ಮೋಡ, ಇತ್ಯಾದಿ ನಿಸರ್ಗದ ಆಟಾಟೋಪ ರಹಸ್ಯಗಳಿಗೆ ನಿಬ್ಬೆರಗಾದ ಅವನ ಅಂತಕ್ಷುವಿಗೆ ನಿಲುಕದ ಅದೆಷ್ಟೋ ಅದ್ಭುತಗಳು ಭಯದೊಂದಿಗೆ ಯೋಚನೆಗೆ ಹಚ್ಚಿದವು. ಮೂಲಭೂತವಾದ ಅವನ ತರ್ಕ ವಿತರ್ಕಗಳಿಗೆ ಹೊಳಪು ದೊರೆಯಿತು. ಅವನ ಜಿಜ್ಞಾಸೆಯ ಫಲವಾಗಿ ಅಜ್ಞಾತವಾದುದರ ಜೊತೆಗೆ ಯಾವುದೋ ದೈವದ ಕಲ್ಪನೆ ಮತ್ತು ಯಾವುದೋ ವಿಶಿಷ್ಟ ಶಕ್ತಿಯ ಅರಿವು ಮೂಡಿತು. ಆದಿ ಮಾನವನ ನಿತ್ಯ ಬದುಕಿನ ಸುಖ-ದುಃಖಕ್ಕೆ ಕಾರಣವಾಗುವ ಸೃಷ್ಟಿಯ ಪ್ರತಿಯೊಂದರ ಬಗೆಗೂ ಆತನಲ್ಲಿ ಭಯ ಶ್ರದ್ಧೆ, ಭಕ್ತಿ ಬೆಳೆದು ನಿಂತವು. ಆಗ ಸೃಷ್ಟಿಯ ಗೋಚರ ಅಗೋಚರ ವಸ್ತುಗಳೆಲ್ಲವೂ ಅವರಿಗೆ ದೈವಗಳೆನಿಸಿದವು. ಹೀಗಾಗಿ ದೈವಗಳ ಸಂಖ್ಯೆ ಬೆಳೆಯುತ್ತ ಹಿಂದೂ ಸಂಸ್ಕೃತಿಯಲ್ಲಿ ಸು ೩೩ (೩೩) ಕೋಟಿಗೂ ಮಿಕ್ಕಿ ದೈವಗಳು ಸೃಷ್ಟಿಯಾದವು.

"It was fear that first made gods in the world" ಎಂದು ಸಾಕ್ರೇಟೀಸ್‌ನು ಹೇಳುವಂತೆ ದೈವದ ಹುಟ್ಟು ಭಯಭೀತಿಯಿಂದಾಗಿದೆ. ಕಾಡಿನಲ್ಲಿರುವ ಮೂಲ-ಮಾನವನಿಗೆ ಭಯವನ್ನುಂಟುಮಾಡಿದ ಹೊಳೆ-ಹಳ್ಳನದಿಯಿಂದ ನೀರು ಹರಿಯುವುದನ್ನು ನೋಡಿ, ಬೃಹದಾಕಾರದ ಗುಡ್ಡ ನೋಡಿ ಕತ್ತಲೆಯಿಂದ ತುಂಬಿದ ಗುಹೆಯನ್ನು ನೋಡಿ ಆದಿಮಾನವ ಭಯಗೊಂಡನು. ಮುಗಿಲೆತ್ತರಕ್ಕೆ ಬೆಳೆದು ನಿಂತ ಮರ, ಕಾಡನ್ನು ಸುಡುವ ಕಾಡಾಗ್ನಿ ತನ್ನನ್ನೆ ತಿನ್ನಲು ಬರುವ ಕಾಡಿನ ಅತಿಕ್ರೂರ ಪ್ರಾಣಿಗಳನ್ನು ನೋಡಿ ಭಯಗೊಂಡನು. ಮನುಷ್ಯ ಅವುಗಳಿಂದುಳಿಯಲು ಅವುಗಳ ಆರಾಧನೆ ಆರಂಭಿಸಿದನು. ಕತ್ತಲು ರಾಕ್ಷಸನನ್ನೆ ನುಂಗುವ ಸೂರ್ಯ, ರಾತ್ರಿ ಹೊಂಬೆಳಕನ್ನುಂಟುಮಾಡುವ ಚಂದ್ರ, ಮೋಡ, ನಕ್ಷತ್ರ, ಮಳೆ ಆದಿಮಾನವನಲ್ಲಿ ದೈವದ ಗೌರವ ಭಾವನೆಯನ್ನುಂಟುಮಾಡಿದವು. ಹೀಗಾಗಿ ಇಂದಿಗೂ ಎಲ್ಲಾ ದೈವಗಳ ಗುಡಿಯ ಮುಂದೆ ಗರುಡ ಗಂಭಕ್ಕೆ ಸೂರ್ಯ ಚಂದ್ರರ ಚಿತ್ರ ಇರುವುದನ್ನು ಕಾಣುತ್ತೇವೆ. ಸೂರ್ಯ ಪುರಾತನ ಜನರ ದೈವವಾಗಿದೆ.

ಭೂಮಿ ಸೃಷ್ಟಿಯಾದ ಎಷ್ಟೋ ವರ್ಷಗಳ ಮೇಲೆ ಭೂಮಿಯಲ್ಲಿ ಮನುಷ್ಯನ ಸೃಷ್ಟಿಯಾಗಿದೆ. ಸೃಷ್ಟಿಯ ಪ್ರಾರಂಭದಲ್ಲಿ ಮನುಷ್ಯ ಅಲೆಮಾರಿಯಾಗಿದ್ದ. ಆಹಾರದ ಅನ್ವೇಷಣೆಗಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆಹೋಗುತ್ತಿದ್ದ. ಆ ಘಟ್ಟದಲ್ಲಿ ಅವನ ಬದುಕಿಗೆ ನಿರ್ದಿಷ್ಟವಾದ ನೆಲೆ ಬೆಲೆಗಳಿರಲಿಲ್ಲ. ಪ್ರಕೃತಿಯ ಪ್ರತಿಯೊಂದು ಘಟನೆ, ವಸ್ತು ವಿಶೇಷಗಳು ಪ್ರಾಣಿ ಸಮುದಾಯ, ಸಸ್ಯಕೋಟಿಗಳೆಲ್ಲ ಕುತೂಹಲದ ವಿಷಯಗಳಾಗಿದ್ದವು. ಪ್ರತಿ ಒಂದರ ಬಗೆಗೂ ವಿಸ್ಮಯ, ಭಯ ಉಂಟಾಗುತ್ತಿತ್ತು. ಬಿಸಿಲು ಚಳಿ, ಬಿರುಗಾಳಿ, ಗುಡುಗು, ಮಿಂಚು, ಮಳೆ ಪ್ರವಾಹ, ಭೂಕಂಪ ಕಾಳ್ಗಿಚ್ಚು ಮೊದಲಾದವುಗಳಿಂದ ಮನುಷ್ಯನ ಬದುಕಿಗೆ ಗಂಡಾಂತರ ಇರುವುದರ ಅನುಭವವಾಯಿತು. ತನಗಿಂತ ಬಲಿಷ್ಠವಾದ ಯಾವುದೋ ಅಂಶ ಇದೆ. ಎಂಬ ಸುಳಹು ದೊರೆಯಿತು. ಭಯ ಆವರಿಸಿತು. ದುಷ್ಟ ಪ್ರಾಣಿಗಳೊಡನೆ ಹೊರಾಡುವುದರ ಜೊತೆಗೆ ಪ್ರಕೃತಿಯ ಘಟನೆಗಳೊಡನೆಯೂ ಹೋರಾಡುವುದರ ಅನಿವಾರ್ಯ ಕಂಡುಬಂತು. ದೊಡ್ಡ ಪ್ರಾಣಿಗೆ ಚಿಕ್ಕ ಪ್ರಾಣಿ, ಬಲಿಷ್ಟ ವ್ಯಕ್ತಿಗೆ ದುರ್ಬಲ ವ್ಯಕ್ತಿ ಹೆದರುವ ಅಥವಾ ವಿನಯದಿಂದ ಒಲಿಸಿಕೊಳ್ಳುವ ವಾಸ್ತವ ಸತ್ಯ ಬೆಳಕಿಗೆ ಬಂತು. ಮನುಷ್ಯನಿಗೆ ಅಪತ್ತು ತರುವ ಪ್ರಕೃತಿಯ ವಿಶೇಷಗಳಿಗೆ ಹೆದರುವ ಅಥವಾ ಅವುಗಳನ್ನು ಒಲಿಸಿಕೊಳ್ಳುವ ಪ್ರಯತ್ನ ನಡೆಯಿತು. ಸೂರ್ಯ ಚಂದ್ರ, ಗಾಳಿ ಮಳೆ, ಬೆಂಕಿ ಮೊದಲಾದವುಗಳನ್ನು ಭಯದಿಂದ ಮೊದಲು ಪೂಜಿಸಲು ಪ್ರಾರಂಭಿಸಿದ. ಅವು ತನಗೆ ರಕ್ಷಣೆ ನೀಡಬೇಕೆಂದು ಪ್ರಾರ್ಥಿಸಿಕೊಂಡ. ಕೇವಲ ಪ್ರಕೃತಿಯ ವಾಸ್ತವ ಘಟನೆಗಳಾಗಿದ್ದವು ಮನುಷ್ಯನಿಂದ ಪೂಜೆಯ ವಸ್ತುಗಳಾದವು. ಆ ವಸ್ತುಗಳಿಗೆ ಆಕಾರ, ರೂಪ, ನೆಲೆ, ಮೊದಲಾದವನ್ನು ಕಲ್ಪಿಸಿದ. ಕತೆಗಳೂ ಹುಟ್ಟಿಕೊಂಡವು. ಆಚಾರ ವಿಚಾರಗಳು ಪ್ರಾರಂಭವಾದವು. ಹೀಗೆ ಮನುಷ್ಯನಲ್ಲಿರುವ ಭಯ ದೇವರ ಕಲ್ಪನೆಗೆ ಕಾರಣವಾಯಿತು.

ನಿಸರ್ಗದಲ್ಲಿ ಅಪರಿಮಿತವಾಗಿ ಹರಡಿರುವ ವಸ್ತುಗಳಲ್ಲಿ ಯಾವುದೋ ಒಂದು ಕಲ್ಲು ಬಂಡೆ ಬಹುದೊಡ್ಡ ಮರ ಅಥವಾ ಒಂದು ಪ್ರಾಣಿ ಆದಿಮಾನವ ಗುಂಪಿಗೆ ಆಸರೆ ರಕ್ಷೆಗಳನ್ನು ಒದಗಿಸಿರಬಹುದಾದ ಕಾಲದಿಂದ ಇಂಥ ಒಂದೊಂದು ವಸ್ತು ಆಯಾ ಜನಪದ ವೃಂದದ ದೃಷ್ಟಿಗೆ ಅತೀವ ಶಕ್ತಿಯ ಪ್ರತೀಕವಾಗಿ ಕಂಡಿರಬಹುದು. ಈ ಹಂತದಲ್ಲಿ ಒಂದು ಪ್ರಾಣಿ, ಒಂದು ಮರ ಅಥವಾ ಒಂದು ಗುಡ್ಡ ಆಯಾ ಗುಂಪಿನ ಕುಲಸಂಕೇತವಾಗಿ ಸ್ವೀಕರಿಸಿ ಪಡೆದ ಅರ್ಚನೆಯ ರೂಪಧಾರಣೆ ಮಾಡಿತು. ಭೌಗೋಳಿಕ ಪಾತಳಿಯ ವಿಭಿನ್ನ ಪ್ರದೇಶಗಳಲ್ಲಿ ವಾಸಿಸುವ

ಜನಪದ ಗುಂಪುಗಳಿಗೆ ಒಂದೊಂದು ಪಂಗಡಕ್ಕೆ ಒಂದೊಂದು ಕುಲ ಸಂಕೇತ ರೂಪಗೊಂಡಿರಬೇಕು. ಆಲದ ಮರವನ್ನು ದೈವವೆಂದು ಪೂಜಿಸುವುದು, ಆಕಳನ್ನು ಗೋಮಾತೆ ಎಂದು ಅರ್ಚಿಸುವ ಪರಂಪರೆಯನ್ನು ನಾವು ಜಾನಪದರಲ್ಲೂ ಮತ್ತು ಇಂದಿನ ಜನಗಳಲ್ಲೂ ಕಾಣಬಹುದು. ಹೀಗೆ ಜನಪದರಲ್ಲಿ ದೈವವನ್ನು ಕಂಡುಕೊಂಡಿರಬೇಕು.

ಭೂಕಂಪ - ಜ್ವಾಲಾಮುಖಿ, ದಾವಾನಲ, ಲಾವಾರಸ ಉಂಟಾಗಿ ಸಿಡಿಲು-ಮಿಂಚು-ಗುಡುಗಾಗಿ ಮಳೆ ಬಂದುಪ್ರವಾಹದಿಂದ ಜನ ಹರಿದುಕೊಂಡು ಹೋಗುವುದನ್ನು ನೋಡಿ ಮನುಷ್ಯ ಭಯಪಟ್ಟು ಇದನ್ನೆಲ್ಲ ಮಾಡಿಸುವೊಂದು ಶಕ್ತಿ ಇದೆ ಎಂದು ಆಲೋಚಿಸಿದಂತೆ ಭೂಮಿಯಲ್ಲಿ ಭತ್ತ-ಗೋದಿ ಮೊಳಕೆಯೊಡೆದು ಬೆಳೆಯುವುದು ಕಂಡು ಯಾವುದೋ ಶಕ್ತಿ ಇದೆಲ್ಲ ಮಾಡಿಸುತ್ತದೆ ಎಂದು ಬಗೆದನು. ಮಳೆ ಬಂದಾಗ ಬರಡು ಭೂಮಿ ಹಸಿರೊಡೆದು ಕಂಗೊಳಿಸುತ್ತದೆ. ಯೌವ್ವನಕ್ಕೆ ಬಂದ ಹೆಣ್ಣು ಗಂಡಿನ ಸಂಪರ್ಕ ಹೊಂದಿ ಗರ್ಭವತಿಯಾಗಿ ಹಡೆಯುತ್ತಾಳೆ. ಇದನ್ನೆಲ್ಲ ನೋಡಿ ಇದಕ್ಕೆ ಕಾರಣವಾದ ಒಂದು ಶಕ್ತಿ ಇದ್ದೆ ಇರಬೇಕೆಂದು ಆಲೋಚಿಸತೊಡಗಿದನು. ಹಾಗೆಯೇ ತನ್ನ ಶರೀರದ ಹೊರಗೆ ಮೈತುಂಬಾ ಕೂದಲು ಬರುವುದು, ಬೆರಳಿಗೆ ಉಗುರು ಚಿಗಿಯುವುದು ನೋಡಿ, ಒಳಗಡೆ ಮನಸ್ಸಿನಲ್ಲಿ ನಾನಾರೀತಿಯ ಭಾವನೆಗಳು ಏಳುವುದು ನೋಡಿ ಹೀಗೆಲ್ಲಾ ಆಗಲು ಯಾವುದೋ ಒಂದು ಶಕ್ತಿ ಇದೆ ಎಂದು ಜನಪದರು ನಾಗರೀಕತೆ ಬೆಳೆದಂತೆ ತಿಳಿಯುತ್ತಾ ಬಂದರು ಮುಂದೆ ಆ ಶಕ್ತಿಯನ್ನು ದೈವವಾಗಿ ತಿಳಿದು ಅದಕ್ಕೆ ಮೊರೆಹೋದರು.

ದೈವ ಎಂಬ ಶಬ್ದವು ಬಹು ಅರ್ಥ ಸಂಕೇತಗಳನ್ನು ಒಳಗೊಂಡಿರುವುದು. ಜನಪದ ಸಮುದಾಯಗಳ ಬಹು ಸೃಷ್ಟಿ ಶಕ್ತಿಯನ್ನು ಬಿಂಬಿಸುತ್ತದೆ. ನಿಸರ್ಗದ ಜೊತೆಗಿನ ಹೋರಾಟದಿಂದ ದೈವ ಪ್ರಜ್ಞೆ ವಿಕಸನಗೊಂಡಿದೆ. ತನ್ನೊಳಗಿನ ಆಲೋಚನೆಯ ನೆರಳಿಗೆ ಅರ್ಥಕೊಡಲು ಮನುಷ್ಯ ದೈವದ ಸಂಕೇತಗಳನ್ನು ರೂಪಿಸಿಕೊಂಡಿದ್ದಾನೆ. ದೈವ ಪ್ರಜ್ಞೆಯು ಜ್ಞಾನ ಸಂಕೇತವಾಗುವುದರ ಜೊತೆಗೆ ನೈತಿಕತೆಯು ವಿಮರ್ಶಾ ಮಾನದಂಡ ಆಗುತ್ತದೆ. ಸಮುದಾಯದ ದೈವ ಪ್ರಜ್ಞೆ ಜಾಗೃತವಾಗಿರಲೆಂದೇ ಆಚರಣೆಗಳು ಒಂದರೊಳಗೊಂದು ಸೇರ್ಪಡೆಯಾಗುತ್ತವೆ. ತನ್ನ ವಿಧಿಯನ್ನು ನಿರ್ಣಯಿಸುವ ಆಗೋಚರ ಶಕ್ತಿಯನ್ನಾಗಿಯೂ ದೈವ ಒಳಗೊಂಡಿರುತ್ತದೆ ಎಂದು ಜನಪದ ಸಮಾಜ ನಂಬುವುದರಿಂದ ಅದರ ಆಚರಣೆಯ ಸೂತ್ರಗಳನ್ನು ನೀತಿ ನಿಯಮವೇ ಎಂಬಂತೆ ಪಾಲಿಸಬೇಕಾಗುತ್ತದೆ. ಈ ದೈವ ಎಂಬುದು ಮನುಷ್ಯನ ಗ್ರಹಿಕೆಯ ಔನ್ನತ್ಯಕ್ಕೆ ಸಂಬಂಧ ಪಟ್ಟದ್ದಾಗಿದ್ದು ಅದಕ್ಕಾಗಿ ಪ್ರಜ್ಞೆಯು ನಿರಂತರ ವಿಕಾಸವಾಗುತ್ತಿರುತ್ತದೆ. ಹೀಗಾಗಿ ದೈವದ ಹೊರ ರೂಪ ಸ್ಥಗಿತವಾದಂತೆ ಕಂಡರೂ ಅದರ ಗರ್ಭಸ್ಥಿತಿಯಲ್ಲಿ ನಿರಂತರವಾಗಿ ಚಲನೆ ಇರುತ್ತದೆ. ಇದರಿಂದಲೇ ಪ್ರತಿಯೊಂದು ಕಾಲವು ದೇಶವು ಸಮುದಾಯವು ಭಾಷೆಯೂ ಒಂದೊಂದು ವಿಧವಾಗಿ ದೈವದ ಬಗ್ಗೆ ಸಂವಾದಗೊಳ್ಳುವುದು

ಜನಪದ ಪರಂಪರೆಯ ಸಂದರ್ಭದಲ್ಲಿ ದೈವಗಳ ಹಿನ್ನೆಲೆಯಲ್ಲಿ ದೈವ ಎಂಬುದು ಮಾನವ ನಿರ್ಮಿತ ಪರಿಸರದ ಸಂಕೇತದ ವ್ಯವಸ್ಥೆ ಎಂದು ತಿಳಿಯಬೇಕಾಗುತ್ತದೆ. ಹೀಗಾಗಿ ಗ್ರಾಮ ದೈವಗಳ ಪರಿಕಲ್ಪನೆಯು ಜನಪದ ಸಮುದಾಯಗಳ ಮನಸ್ಸಿನ ರಚನೆಯೂ ಆಗಿರುತ್ತದೆ. ಮನಸ್ಸಿನ ಸೂಕ್ಷ್ಮ ಸಂವೇದನೆಯ ತಂತುಗಳಾಗಿ ದೈವವು ಮನುಷ್ಯನ ಕ್ರಿಯೆಗಳಲ್ಲಿ ಲೀನವಾಗಿರುತ್ತದೆ. ಕನ್ನಡದ ದೈವ ಪರಂಪರೆಯು ಪ್ರಾದೇಶಿಕವಾಗಿ ವೈವಿಧ್ಯತೆಯನ್ನು ಪಡೆದಿದ್ದರೂ ಇಡೀಯಾಗಿ ಅವುಗಳ ಕೇಂದ್ರ ಬಿಂದು ಸ್ತ್ರೀ ರೂಪಕದಿಂದಲೇ ನಿರ್ಣಯಿಸಲ್ಪಡುತ್ತದೆ. ಮುಖ್ಯವಾಗಿ

ಸ್ತ್ರೀ ಮತ್ತು ಮಾತೃ ಎರಡು ಫಲವಂತಿಕೆಯ ಆಚರಣೆಗಳೆಲ್ಲವೂ ಸಮುದಾಯಗಳ ಜೈವಿಕ ಹಾಗೂ ನೈಸರ್ಗಿಕ ಸಾಮರಸ್ಯತೆಯನ್ನು, ಅನ್ಯೋನ್ಯತೆಯ ಹೊಂದಾಣಿಕೆಯನ್ನು ಪ್ರತಿನಿಧಿಸುತ್ತದೆ. ಶಕ್ತ ಪಂಥವಾಗಲೀ ಸಿದ್ಧ ಪರಂಪರೆಯಾಗಲೀ ಪುರುಷಾಕೃತಿಯ ದೈವ ವ್ಯವಸ್ಥೆಯನ್ನು ಪ್ರತಿಪಾದಿಸಿದರೂ ಅವು ಸ್ತ್ರೀ ಶಕ್ತಿಯನ್ನೆ ನಂಬಿಕೊಳ್ಳುತ್ತವೆ. ಇದರಲ್ಲಿ ದೈವವನ್ನು ಆದ್ಯಾತ್ಮವನ್ನು ಮೀರಿದ ಮಾನವ ಪ್ರಯತ್ನಕ್ಕೆ ಅವಕಾಶವನ್ನು ಮಾಂತ್ರಿಕಾಚರಣೆ ವಿದ್ಯೆಯ ಮೂಲಕ ಮನುಷ್ಯನಿಗೆ ಸವಾಲಾಗಿರುವ ನಿಸರ್ಗ ಶಕ್ತಿಯನ್ನು ಗೆದ್ದುಕೊಳ್ಳುವ ಸಾಹಸವಿದೆ. ಪ್ರಕೃತಿಯಲ್ಲಿ ಮನುಷ್ಯನಿಗೆ ದೈವದ ಶಕ್ತಿಕಂಡಿದ್ದರಿಂದ ಮನುಷ್ಯ ಇಷ್ಟೆಲ್ಲಾ ಸಾಹಸ ಮಾಡಬೇಕಾಗಿತ್ತು. ಹೀಗಾಗಿಯೇ ದೈವದ ಅರ್ಥವು ಕಾಲಬದ್ಧವಲ್ಲ ಹಾಗಾಗಿಯೇ ಅದು ಏಕ ರೂಢಿಯಲ್ಲ. ಸಂಕೀರ್ಣ ವ್ಯವಸ್ಥೆಯಿಂದ ಸರಳತೆಯನ್ನು ಅದು ಹುಡುಕುತ್ತದೆ. ಆದ್ದರಿಂದಲೇ ದೈವವು ಏಕಕಾಲಕ್ಕೆ ಸಂಕೀರ್ಣವೂ, ಅತ್ಯಂತ ಸರಳವೂ, ನಿಗೂಢವೂ ಅತಾರ್ಕಿಕವೂ ಅಮೂರ್ತವೂ, ಮೂರ್ತವೂ ಹಾಗೂ ನಯವೂ ಆಗಿರುತ್ತದೆ.

ಜನಪದರಲ್ಲಿ ದೈವದ ಬಗ್ಗೆ ಕಲ್ಪನೆ ಬೆಳೆದು ಬಂದದ್ದು ಕೇವಲ ಭಯದಿಂದೊಂದೇ ಅಲ್ಲ. ವೈವಿದ್ಯ ಮಯವಾದ ಚೈತನ್ಯದ ಜೊತೆಗೆ ಸಂಪರ್ಕವೇರ್ಪಡಿಸಿಕೊಳ್ಳಲು ಹೆಣ್ಣಿನ ಮೂಲಕ ಸಾದ್ಯ ಎಂದು ಭಾವಿಸಿದ್ದರಿಂದ ಆಕೆಯು ಕೌಟಂಬಿಕವಾದ ನಿಯಮಾವಳಿಯನ್ನು ರೂರಪಿಸಿದ ರೀತಿರಯಲ್ಲೆ ಆಕಾಲದ ಸಮುದಾಯಗಳು ನಡೆದು ಕೊಂಡಿವೆ. ಹೀಗೆ ನಡೆದುಕೊಂಡು ಬಂದ ಹಾದಿಯಲ್ಲೆ ದೈವಗಳು ಬೆಳೆದಿವೆ. ಒಂದೊಂದು ಕಾಲ ಚಿನ್ಹೆಯೂ, ಕುಲ ಪದ್ಧತಿಯೂ ಅದಕ್ಕನುಗುಣವಾದ ಕುಟುಂಬ ಬಂಧುತ್ವವು ಆಚರಣೆಯೂ ಬೆಳೆದಿವೆ. ಈ ಕುಲಪದ್ಧತಿಯು ಸ್ತ್ರೀ ಸ್ಥಾನವನ್ನು ಸೂಚಿಸುವುದೇ ಅಲ್ಲದೇ ಆದಿಮಹಂತದಲ್ಲಿ ಮಾತೃ ಮೂಲ ಶಕ್ತಿರಯಿಂದಲೇ ಕುಟುಂಬಗಳು ಬೆಳೆದು ಅದಕ್ಕನುಗುಣವಾದ ದೈವ ಪರಂಪರೆಯು ಆಚರಣೆಗೆ ಬಂದಿದೆ.

ದೈವದ ಅರ್ಥ ಜಗತ್ತು ರೂಪಕ ಭಾಷೆಯಿಂದ ಅನಾವರಣಗೊಳ್ಳುವಂತಹದ್ದು. ಆದರೆ ಸ್ವಭಾತಃ ಭಾಷೆಯ ಯಾವ ರೂಪಸಂಕೇತಕ್ಕೂ ನಿರ್ದಿಷ್ಟ ಅರ್ಥವಿರುವುದಿಲ್ಲ. ಆದು ಪುರಾಣ ಪ್ರಜ್ಞೆಯ ಗುಣದಿಂದಾಗಿರುವ ಪರಿಣಾಮ. ಅರ್ಥಗಳನ್ನು ಬಚ್ಚಿಡುವ ಕ್ರಮವು ಇದಾಗಿದ್ದರೂ, ಮುಖ್ಯವಾಗಿ ಯಾವ ಅರ್ಥವು ಸತ್ಯ ಅಂತಿಮವೆಂದು ಭಾವಿಸದೆ ಇರುವುದರಿಂದ ಪರಿಕಲ್ಪನೆಯಲ್ಲಿ ಎದುರಾಗುತ್ತದೆ. ಅಂದರೆ ದೈವದ ಅರ್ಥವನ್ನು ಖಚಿತವಾಗಿ ಒಂದು ದರ್ಶನದಲ್ಲಿ ಸ್ವೀಕರಿಸಿದರೆ ಒಂದು ಸಂಕೇತದಲ್ಲಿ ಬಂಧಿಸಿದರೆ ದೈವದ ಹುಡುಕಾಟವೇ ಸ್ಥಗಿತವಾಗಿ ಬಿಡುತ್ತದೆ. ಜನಪದರು ತಮ್ಮ ದೈವದ ಅರ್ಥಗಳನ್ನು ಆಯಾ ಕಾಲದ ಪರಂಪರೆಯ ತಲೆಮಾರಿನ ಸಂದರ್ಭಗಳಿಗೇ ಬಿಟ್ಟುಬಿಡುವುದಿರಂದ ಅವು ಮಾನವನ ಸುಪ್ತಪ್ರಜ್ಞೆಯಲ್ಲಿ ದೈವದ ಸಂದರ್ಭವನ್ನು ಕಟ್ಟಿಕೊಳ್ಳುತ್ತವೆ.

ದೈವವೆಂದರೆ ದೇವತೆಗಳ ಸಮೂಹವೆಂದರ್ಥ, ಶಿಷ್ಟ ದೈವಗಳನ್ನು ಪೂಜಿಸುತ್ತಿರುವ ಜನಪದರು ಇಂದು ಜನಪದ ದೈವಗಳನ್ನು ತೊರೆಯಲಾರದ ಸ್ಥಿತಿಗೆ ತಲುಪಿಸಿರುವರೇನೋ ಎಂಬ ಅಂಶವು ಆಯಾ ಊರಲ್ಲಿ ಆಚರಿಸುವ "ಊರ ಜಾತ್ರೆ" ಕಾರಣೀಭೂತವಾಗುತ್ತದೆ. ಈರೀತಿ ಆಚರಣೆ ಕೈಗೊಳ್ಳದಿದ್ದರೆ ದೈವವು ಕೋಪಿಸಿಕೊಂಡು ತಮ್ಮ ಊರಿಗೆ ಕ್ಷಾಮ ಬರಗಾಲ ಬಂದು ದನ-ಕರುಗಳಿಗೆ, ಜನರಿಗೆ ರೋಗ ಬರಸಿ ಸಾವು ತರಿಸುತ್ತೆದೆ ಎಂಬ ನಂಬಿಕೆಯಿಂದ ಸಾಲ ಮಾಡಿಯಾದರೂ ಆಚರಣೆ ಆಚರಿಸುತ್ತಿರುವುದು. ವೈಜ್ಞಾನಿಕ ಯುಗದಲ್ಲೂ ಯಥೆಚ್ಛವಾಗಿ ಕಾಣುತ್ತೇವೆ. ಇದಕ್ಕೆ ಸಾಕ್ಷಿ ಎಂಬಂತೆ ಅಪ್ಪ ಒಂದು ಪೂಜಿಸಿದರೆ ಮಗ ಇನ್ನೊಂದು ಮೊಮ್ಮಗ ಮತ್ತೊಂದು ದೈವ ಪೂಜಿಸುವ ಸಂದಿಗ್ಧ ಪರಿಸ್ಥಿತಿ ಒದಗಿ ಬಂದಿರುವುದರಿಂದ ದೈವಗಳ ಬೆಳೆಯುವಿಕೆ ಅಧಿಕವಾಗಲು ಕಾರಣವಾಗಿದೆ

ಎನ್ನಬಹುದಾಗಿದೆ. ಆದ್ದರಿಂದ ಶಿಷ್ಟ ದೈವಗಳು ಎಷ್ಟೋ ಮಾನ್ಯರಾಗಿದ್ದರೂ ಜನರ ಕಷ್ಟಕಾಲದಲ್ಲಿ ನೆರವಿಗೆ ಬಂದು ಆತ್ಮೀಯವಾಗುವುದು 'ಗ್ರಾಮದೈವ' ಎಂದು ತಿಳಿಸಿದ್ದಾರೆ(Henry whirehead). ಜನಪದರಿಗೆ ಸರಿಯೆನಿಸಿದ ದೈವವು ವರ ಹಾಗೂ ಬೇಡಿಕೆ ಈಡೇರಿಸದಿದ್ದರೆ ಆ ದೈವವನ್ನು ತೊರೆದು ಬೇರೊಂದು ದೈವಕ್ಕೆ ಮೊರೆಹೋದ ಪ್ರಸಂಗಗಳು ಕಂಡುಬರುತ್ತದೆ. ಇದಕ್ಕೆ ಪ್ರತೀಕವಾಗಿ ಎಂಬಂತೆ ಸುಗ್ಗೇನಹಳ್ಳಿ ಗ್ರಾಮದ ದ್ಯಾವಮ್ಮ ಎಂಬ ಊರದೈವದ ಆಚರಣೆ ಬಿಟ್ಟು ದುರುಗಮ್ಮ ದೈವದ ಪೂಜೆಗೆ ಜನಪದರು ವಾಲಿರುವುದು ಕಾಣಸಿಗುತ್ತಿದೆ. ಈ ರೀತಿಯ ದೈವಗಳಂತೆ ಸಂಡೂರಿನ ಗ್ರಾಮದಲ್ಲಿ ಒಂದೇ ಗ್ರಾಮದೇವತೆ ಇರುತ್ತದೆ. ಸಂಡೂರಿನಲ್ಲಿ ಸ್ತ್ರೀ ಪುರುಷ ದೈವಗಳ ಆರಾಧನೆ ಸರ್ವೇಸಾಮಾನ್ಯವಾಗಿದೆ. ಅಲ್ಲದೆ ಸ್ತ್ರೀ ದೈವ ಪುರುಷ ದೈವಕ್ಕಿಂತ ಹೆಚ್ಚಿನ ಆರಾಧನೆಗೆ ಒಳಗಾಗಿರುವುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ. ಈ ದೈವಗಳ ಸಮೂಹವೇ "ಜನಪದ ದೈವ" ವಾಗಿ ಪರಿಣಮಿಸಿ ಆರಾಧನೆಗೆ ಒಳಾಗಾಗುವುದನ್ನು ನೋಡಬಹುದಾಗಿದೆ.

ತಮ್ಮನ್ನು ಹೆತ್ತು ಸಾಕಿ ರಕ್ಷಿಸಿ ಬೆಳೆಸಿದ್ದರಿಂದ ಮಾತೆಯೇ ಕುಲಮಾತೆಯಾಗಿ ಕಾಲಾನುಕ್ರಮದಲ್ಲಿ ದೈವವಾಗಿ ವಿಕಾಸಗೊಂಡಿತು. ದೈವದ ವಿಕಾಸವನ್ನು ಹಲವು ಜ್ಞಾನ ಶಾಖೆಗಳ ಸಹಾಯದಿಂದ ನಿರ್ವಹಿಸಬಹುದು. ಆಹಾರದ ಅಗತ್ಯದಿಂದಲೂ ದೈವಗಳು ವಿಕಾಸಗೊಂಡಿವೆ. ಯಾವತ್ತೂ ಕೂಡ ಇಂತಾದ್ದೇ ನಿರ್ದಿಷ್ಟ ಕಾರಣದಿಂದ ದೈವ ವಿಕಾಸಗೊಂಡಿತೆಂದು ಹೇಳಲಾಗದಷ್ಟು ಸಂಕೀರ್ಣತೆಯು ಇವುಗಳಲ್ಲಿ ಕಂಡುಬರುವುದರಿಂದ ಕೆಲವೇ ಕಾರಣಗಳಿಂದ ದೈವಗಳ ವಿಕಾಸರವನ್ನು ನಿರ್ದಿಷ್ಟ ಪಡಿಸಲಾಗದು. ಸಂಸ್ಕೃತಿಯು ಹೇಗೆ ಯಾವತ್ತೂಕೂಡ ನಿರ್ದಿಷ್ಟ ಕಾರಣವನ್ನು ಹೊಂದಿರುವುದಿಲ್ಲವೋ ಅದೇ ಬಗೆಯಾಗಿ ದೈವದ ವಿಕಾಸಕ್ರಮವು ಒಂದು ಹಿಡಿತಕ್ಕೆ ಬರುವುದಿಲ್ಲ. ದೈವ ವಿಕಾಸವು ಪ್ರಜ್ಞೆಯ ಕ್ರಿಯಾಶೀಲತೆಗೆ ಸಂಬಂಧಿಸಿದ್ದು. ಅದು ನಿರಂತರವಾದ ಹುಡುಕಾಟದಲ್ಲಿ, ಸುಪ್ರಪ್ರಜ್ಞೆಯಲ್ಲಿ ವಿಶ್ವದ ರಹಸ್ಯವನ್ನು ಧ್ಯಾನಿಸುವುದರಿಂದ ಕಾಲಾತೀತವಾದ ಆಕೃತಿಗಳಿಂದ ಸಮಕಾಲೀನ ಜಗತ್ತಿನ ಜೊತೆ ಬೆಸುಗೆಯಾಗುತ್ತಿರುತ್ತದೆ(Mead, George 1934-60). ಈ ಬಗೆಯ ಆಲೋಚನೆಗಳನ್ನು ಮನಃ ಶಾಸ್ತ್ರದಲ್ಲಿ ಮಾರ್ಮಿಕವಾಗಿ ಮಾಡಲಾಗಿದ್ದ ದೈವದ ಅಸ್ತಿತ್ವವನ್ನು ಪ್ರಾಯ್ಡ್ ಯೂಂಗ್‌ನ ನಂತರದವರೂ ಸಮರ್ಥವಾಗಿ ಮಾಡಿದ್ದಾರೆ. ಎಲ್ಲ ಪರಂಪರೆಗಳ ಮನಸ್ಸು ತಮ್ಮದೇ ಅದ ಪ್ರತ್ಯೇಕತೆಯನ್ನು ಬಯಸುತ್ತದೆ. ದೈವದ ವಿಕಾಸಕ್ಕೆ ಬೇರೆಯದೆ ನಿಯಮಗಳ ಕಾರಣಕ್ಕಾಗಿ ದೈವದ ಅನಿವಾರ್ಯತೆ ಆದಿಮ ಸಮುದಾಯಗಳಿಗೆ ಬಲವಾಗಿತ್ತು. ಕುಟುಂಬದ ಅನೇಕ ಕಾರ್ಯಗಳಲ್ಲಿ ದೈವವು ಪರೋಕ್ಷ ಶಕ್ತಿಯಾಗಿ ಬೇರು ಬಿಟ್ಟಿರುತ್ತದೆಯಾದ್ದರಿಂದ ಇವೆರಡರ ಹಾಗೂ ಸ್ತ್ರೀ ಶಕ್ತಿಯ ಅಗಾಧತೆಯೊಂದರಿಂದಲೇ ದೈವದ ಕಲ್ಪನೆ ವಿಸ್ತರಿಸಿ ಬೆಳೆಯಿತು ಎಂದು ಹೇಳಲು ಬರದು.

ಜಗತ್ತನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದ್ದು ಒಂದು ಶಕ್ತಿ ಅದರಲ್ಲೂ ಈ ವಿಶ್ವಸೃಷ್ಟಿಗೆ ಕಾರಣ ಸ್ತ್ರೀ ಶಕ್ತಿ ಎಂಬುದು ಜನಪದರ ನಂಬಿಕೆ. ಈ ವಿಶ್ವ ಕಾರಣ ಶಕ್ತಿಗೆ ವೇದಾಂತಿಗಳು ಮಾಯೆ ಎಂದರೆ, ಸಾಂಖ್ಯರು ಪ್ರಕೃತಿ ಎಂದರು. ಜಗತ್ತನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಆಳುವುದು ಶಕ್ತಿಯಾದರೆ, ತನ್ನ ಹಿಡಿತದಲ್ಲಿಟ್ಟುಕೊಂಡು ಆಳುವವಳು ಸ್ತ್ರೀ ಶಕ್ತಿ. ಪ್ರಾಪಂಚಿಕ ಜೀವನದಲ್ಲಿ ಸ್ತ್ರೀ ಹೊಂದಿದ ಉನ್ನತಿಕೆಯ ಪರಿಕಲ್ಪನೆಯನ್ನು ಸೃಷ್ಟಿಯ ಮೂಲಶಕ್ತಿಯಾದ ಮಾಯೆ ಅಥವಾ ಪ್ರಕೃತಿ ಎಂದು ಭಾವಿಸಿ ಅದನ್ನು ಸ್ತ್ರೀ ರೂಪದಲ್ಲಿಯೇ ಪೂಜಿಸತೊಡಗಿದರು. ಜಗತ್ತಿನ ಬಹುತೇಕ ಜನಾಂಗಗಳಲ್ಲಿ ಮಾತೃದೇವತೋಪಾಸನೆ ಪ್ರಚುರಗೊಂಡುದಕ್ಕೆ ಭಾರತದಲ್ಲಿ ಹೆಣ್ಣು

ದೇವತೆಗಳೇ ಗ್ರಾಮ ದೇವತೆಗಳಾಗಿ ಕೂಡಲು ಬಹಳಷ್ಟು ಕಾರಣಗಳಿಗೆ ಮೊದಲಿನಿಂದಲೂ ಹೆಣ್ಣು ಕಾಡುಜೀವನದ ಆದಿಮಾನವರಲ್ಲಿ ಒಂದು ಶಕ್ತಿಯಾಗಿ ಕಾಣಿಸತೊಡಗಿದಳು. ಹಾಗೇ ಬದುಕಿನ ಎಲ್ಲಾ ರಂಗದಲ್ಲಿ ಪ್ರಗಲ್ಭ ಪ್ರಭಾವ ಬೀರುವವಳು ಹೆಣ್ಣೇ ಆಗಿದ್ದಾಳೆ ನಮ್ಮ ಹಿಂದಿನ ವೇದ-ಸಂಸ್ಕೃತಿಗಳಿಂದಲೂ ಮೂಲ ಸ್ಥಾನ ಹೆಣ್ಣಿಗಿದೆ. ಸಂಸ್ಕೃತಿಯಲ್ಲಿ ಹಣ್ಣನ್ನು ವಿಶಿಷ್ಟ ಶಕ್ತಿಯೆಂದು, ತಾಯಿಯೆಂದು ಇರುವುದನ್ನು ಕಾಣಬಹುದಾಗಿದೆ.

ಮೊದಲು ಹೆಣ್ಣಿಗೆ ದೈವದ ಸ್ವರೂಪ ಬಂದದ್ದು ಮಾನವನ ನಾಗರೀಕತೆಯ, ಉತ್ಕ್ರಾಂತಿಯ ದ್ವಿತಿಯ ಘಟ್ಟದಲ್ಲಿ ಎಂದು ಹೇಳಬಹುದು. ಹೆಣ್ಣು ಬದುಕಿನ ಎಲ್ಲಾ ಭಾರಗಳನ್ನು ಹೊರುವುದನ್ನು ನೋಡಿ, ತನ್ನನ್ನು ಸರ್ವರೀತಿಯಿಂದ ನಿಯಂತ್ರಿಸಬಲ್ಲ ರೂಪ, ಚೈತನ್ಯವನ್ನು ಮನುಷ್ಯ ಅವಳಿಂದಲೇ ಬರುತ್ತದೆಂದು ಭಾವಿಸಿಕೊಂಡು ಅವಳ ಈ ಎಲ್ಲಾ ಗುಣಕ್ಕಾಗಿ ಸತ್ವಕ್ಕಾಗಿ ಮೋಹಿಸಿ ಆ ಮೋಹವನ್ನು ದೈರವತ್ವಕ್ಕೇರಿಸಿದ. ತನ್ನನ್ನು ನಿಯಂತ್ರಿಸುವ ಶಕ್ತಿಯಾದ ಹೆಣ್ಣಿನ ಫಲವಂತಿಕೆಯನ್ನು ಪಡೆದ ಪ್ರಕೃತಿಯೇ ಜಗತ್ತನ್ನು ನಡೆಸಿಕೊಂಡು ಹೋಗುವುದು ಎಂಬ ನಂಬಿಕೆ ಬಲಿತಾಗಲೇ ಜನಪದರು ಹೆಣ್ಣಿನ ಪೂಜೆ, ಹೆಣ್ಣಿನ ಹಿರಿಮೆಯ ಕಲ್ಪನೆಯನ್ನು ಕೊಂಡಾಡಿದರು. ಮಾತೃದೇವೋಪಾಸನೆ ಎಂಬ ಪರಿಕಲ್ಪನೆ ಮೊದಲು ಜನಪರಲ್ಲಿ ಬೆಳೆದು ಬರಲು ಕಾರಣವಾಯಿತು.

೩.೨ ಗ್ರಾಮದೈವದ ಪರಿಕಲ್ಪನೆ

ಮಾತೃದೈವಗಳ ವಿಕಾಸ ಹೆಚ್ಚು ಕಡಿಮೆ ಒಂದೇ ತೊಟ್ಟಿಲಿನಿಂದ ತೂಗುತ್ತವೆ. ಮಾನವನ ವಿಕಾಸದಲ್ಲಿ ಭಯ ಅತ್ಯಂತ ವಿಶಿಷ್ಟವಾದ ಒಂದು ಗುಣ. ಭಯವೇ ಇಲ್ಲದಿದ್ದರೆ ಮಾನವ ಮೆದುಳಿನ ಗ್ರಹಿಕೆಯೇ ಬೆಳೆಯುತ್ತಿರಲಿಲ್ಲ. ಭಯದಿಂದಾಗಿಯೇ ಸೃಜನಶೀಲತೆಯು ಟಿಸಿಲೊಡೆದಿರುವುದು. ನಿಸರ್ಗದಲ್ಲಾಗುವ ಅನೇಕ ಬಗೆಯ ಅಪಘಾತಗಳು, ಬದವಾವಣೆಗಳು, ಪಲ್ಲಟಗಳು, ವಿಸ್ಮಯಗಳು, ಹಗಲು ರಾತ್ರಿಗಳು, ಪ್ರಾಣಿ ಪಕ್ಷಿ ಕೀಟಗಳು ಮತ್ತು ಇವೆಲ್ಲದರ ಜೊತೆಗೆ ಬೆರೆತುಕೊಂಡ ಸಾವಿನ ಭೀತಿ ಇವೆಲ್ಲವೂ ಇಡಿಯಾಗಿ ಮಾನವನ ಪ್ರಜ್ಞೆಯಲ್ಲಿ ದಟ್ಟವಾಗಿ ಪರಿಣಾಮವನ್ನು ಮಾಡಿವೆ. ನಿಸರ್ಗವನ್ನು ಗೆಲ್ಲುವುದಕ್ಕಾಗಿ ಸಾದ್ಯವಾಗದ "ಹುಲು ಮಾನವ" ಅದಕ್ಕೆ ಶರಣಾಗಿ ಅದನ್ನು ತಾಯಿ ಎಂದು ಭಾವಿಸಿದ್ದರಲ್ಲಿ ಸಹಜತೆಯಿದೆ. ಇದರಲ್ಲಿ ಗಂಡಿಗೆ ಸಂತೈಸುವ ಸಂರಕ್ಷಿಸುವ ಸಂತಾನವೀಯುವ ಆದಿಯ ಶಕ್ತಿ ಸ್ತ್ರೀಯಲ್ಲಿ ನೈಸರ್ಗಿಕ ವಿಸ್ಮಯವನ್ನೇ ಬಿಂಬಿಸಿದ್ದು ಕೂಡ ಆಕಸ್ಮಿಕವಾದರೂ ಸಾಕಾರಾತ್ಮಕವಾಗಿತ್ತು. ಸ್ತ್ರೀಗೆ ಸೃಷ್ಟಿಸುವ ಭಾಷೆ ಜೈವಿಕವಾಗಿ ಬಂದಿತ್ತು. ಸೃಷ್ಟಿಯ ರಹಸ್ಯ ಗುಣ ಹೆಣ್ಣಿನಲ್ಲಿದ್ದದ್ದು ಆ ಕಾಲದ ಮುಗ್ಧ ಮಾನವ ಗುಂಪುಗಳಿಗೆ ಮನವರಿಕೆಯಾಗಿತ್ತು. ಹೀಗಾಗಿಯೇ ಹೆಣ್ಣೆಂದರೆ ಸೃಷ್ಟಿಯೆಂತಲೂ, ಸೃಷ್ಟಿಯೆಂದರೆ ಶಕ್ತಿಯೆಂತಲೂ, ಶಕ್ತಿಯೆಂದರೆ ಹೆಣ್ಣೆಂತಲೂ, ಹೆಣ್ಣೆಂದರೆ ಶಕ್ತಿಯ ದೈವ ಎಂತಲೂ ತಾರ್ಕಿಕ ಪ್ರಜ್ಞೆ ಕೆಲಸಮಾಡಿ ಆಕೆಯ ಸ್ಥಾನಗರ್ಭ ಯೋನಿಗಳನ್ನು ದೈವದ ಶಕ್ತಿ ಕೇಂದ್ರಗಳೆಂದು ಒಪ್ಪಿಕೊಳ್ಳುವಂತಾಯಿತು. ಹೀಗಾಗಿ ಸ್ತ್ರೀಶಕ್ತಿಯು ಮಾತೃದೇವತಾರಾಧನೆಯಾಗಿ ಮೊಳಕೆಯೊಡೆಯಿತು. ಈ ಮಾತೃ ದೈವಗಳು ಜಗತ್ತಿನ ಎಲ್ಲಾ ಸಮುದಾಯಗಳಲ್ಲು ಕಂಡುಬರುತ್ತವೆ. ಯಾಕೆ ಅಂತಿಮ ಹಂತದ ಸಂಸ್ಕೃತಿಯ ಸಂದರ್ಭದಲ್ಲಿ ಮಾತೃ ಶಕ್ತಿಯೇ ಪ್ರಧಾನವಾಯಿತು ಎಂಬುದು ಕುತೂಹಲಕಾರಿ ಅಂಶವಾಗಿದೆ. ಮಾತೃಪ್ರಧಾನ ಸಂಸ್ಕೃತಿಯ ಅನಿವಾರ್ಯತೆಯನ್ನು ಒಪ್ಪಿಕೊಂಡರು. ಅದಕ್ಕಿಂತಲೂ ಮಿಗಿಲಾಗಿ ಎಲ್ಲಾ ಜನಪದರ ಮನಸ್ಸು ಕೂಡ ಸ್ತ್ರೀ ಶಕ್ತಿಯ ಸೃಜನಶೀಲತೆಯನ್ನೇ ತನ್ನ ಅಸ್ತಿತ್ವದ ವಿಕಾಸವನ್ನಾಗಿ ಮಾಡಿಕೊಂಡಿದ್ದರಿಂದ ಘನವಾಗಿರುವ ಈ ಮಾತೃ ದೈವ ಪರಿಕಲ್ಪನೆ ಎಲ್ಲಾ ಸಮುದಾಯಗಳಲ್ಲೂ ಹುಟ್ಟಿಕೊಂಡಿತು.

ಒಟ್ಟಾರೆ ಭಾರತೀಯ ಸಂಸ್ಕೃತಿಯಲ್ಲಿ ಶಕ್ತಿ ದೇವತೆಗಳು ವಿವಿಧ ರೂಪದಲ್ಲಿ ಪೂಜಿಸಲ್ಪಡುತ್ತಾರೆ. ಪಾರ್ವತಿಯ ತಾಮಸ ಹಾಗೂ ಸಾತ್ವಿಕ ಶಕ್ತಿ ಸ್ವರೂಪದಲ್ಲಿಯೇ ಅನೇಕ ದೇವತೆಗಳು ಸೃಷ್ಟಿಯಾಗಿರುವುದು ಗಮನಾರ್ಹವಾಗಿದೆ. ಜಾನಪದ ಪರಂಪರೆಯಲ್ಲಂತೂ ಆದಿಶಕ್ತಿ ಸ್ವರೂಪಿಣಿಯೆಂದು ಕರೆಯಿಸಿಕೊಂಡು ಪಾರ್ವತಿಯಂತೆ, ತಾಮಸ ರೂಪಗಳಾಗಿ ನಿಂತ ದುರ್ಗೆ, ಕಾಳಿ, ದ್ಯಾಮವ್ವ, ದುರ್ಗಮ್ಮ, ಎಲ್ಲಮ್ಮ, ಚಾಮುಂಡಿ ಲಕ್ಕವ್ವ, ಕರಿಯವ್ವ, ಉಡಚಲಮ್ಮ, (ಸಂಡೂರು) ಮುಂತಾದ ಉಗ್ರದೇವತೆಗಳನ್ನು ಗಮನಿಸಬಹುದಾಗಿದೆ.

ಸ್ತ್ರೀ ದೈವ ಮೂಲ

ಹರಪ್ಪ ಸಂಸ್ಕೃತಿಯಲ್ಲಿ ಒಂದು ಕುತೂಹಲಕಾರಿಯಾದ ಮುದ್ರೆ ಸಿಕ್ಕಿದ್ದು ಇದು ಒಂದು ಕೃಷಿ ದೃಶ್ಯಕ್ಕೆ ಸಂಬಂಧಿಸಿದ್ದಾಗಿದೆ. ಈ ಮುದ್ರಿಕೆಯಲ್ಲಿ ಒಂದು ಸ್ತ್ರೀ ವಿಗ್ರಹವಿದ್ದು ಆಕೆಯ ಗರ್ಭದಿಂದ ಒಂದು ಸಸ್ಯವು ಹುಟ್ಟುತ್ತಿರುವಂತೆ ಚಿತ್ರಿಸಲಾಗಿದೆ. ಇದರ ಇನ್ನೊಂದು ಬದಿಯಲ್ಲಿ ಸ್ತ್ರೀ ಪುರುಷರ ಚಿತ್ರಗಳಿವೆ. ಒಬ್ಬ ಮನುಷ್ಯನು ನೇಗಿಲಿನಂಥ ಆಯುಧವನ್ನು ಹಿಡಿದಿದ್ದಾನೆ. ಈ ಚಿತ್ರದಲ್ಲಿರುವ ಮನುಷ್ಯ ಉಳಿಮೆ ಮಾಡುವ ರೈತನೆಂದು ಭಾವಿಸಲಾಗಿದೆ. ಈಕೆಯನ್ನು ಶಾಕಾಂಭರಿ ಎಂದು ಗುರ್ತಿಸಿದ್ದಾರೆ. ಹೀಗೆ ಸಸ್ಯ ಸಂಬಂಧಿಯಾದ ದೇವತೆಯ ಇನ್ನೊಂದು ಮುದ್ರಿಕೆಯು ಹರಪ್ಪ ಸಂಸ್ಕೃತಿಯಲ್ಲೇ ದೊರೆತಿದೆ. ಈ ಚಿತ್ರ ಒಂದು ಹೆಣ್ಣಿನದಾಗಿದ್ದು ಈಕೆ ಒಂದು ವೃಕ್ಷದ ಎರಡು ಕೊಂಬೆಗಳ ನಡುವೆ ನಿಂತಿದ್ದಾಳೆ. ಒಬ್ಬ ಭಕ್ತನು ಮರದ ಪಕ್ಕದಲ್ಲಿ ಬಾಗಿ ನಿಂತಿದ್ದಾನೆ. ಇದರ ಕೆಳಭಾಗದಲ್ಲಿ ಏಳು ವಿಗ್ರಹಗಳನ್ನು ಕಾಣಬಹುದು. ಒಂದು ಮೇಕೆಯು ಭಕ್ತನ ಹಿಂದೆ ನಿಂತಿದೆ. ಈ ಚಿತ್ರದ ಹೆಣ್ಣಿನ ವಿಗ್ರಹವನ್ನು ಮಾತೃದೇವತೆ ಎಂದು ಭಾವಿಸಲಾಗಿದೆ. ಏಳು ವಿಗ್ರಹಗಳನ್ನು ಏಳು ದೇವತೆಗಳೆಂದು ಭಾವಿಸಲಾಗಿದೆ. ಮೇಲಿನ ಮಾತೃದೇವತೆಯು ವೃಕ್ಷ ದೇವತೆಯೆಂದೂ ಅರಣ್ಯದ ತಾಯಿಯೆಂದೂ ಹೇಳಲಾಗಿದೆ. ಬಾಗಿರುವ ಮನುಷ್ಯ ಪೂಜಾರಿಯೆಂದು ಭಾವಿಸಲಾಗಿದೆ.

ಸಿಂಧೂ ಸಂಸ್ಕೃತಿಯಲ್ಲಿ ಮಾತೃ ದೇವತೆಯನ್ನು ಭೂಮಿಯ ತಾಯಿಯೆಂದೂ, ಮಾನವರ ಮಾತೆಯೆಂದೂ, ದೇವತೆಗಳ ತಾಯಿ ಎಂದೂ, ಅರಣ್ಯ, ಪ್ರಾಣಿ, ಧಾನ್ಯ, ಪಕ್ಷಿ, ಇವುಗಳ ಮಾತೃವೆಂದು ಪೂಜಿಸಲಾಗಿದೆ. ಸ್ತನ, ಗರ್ಭ, ಯೋನಿ ಇವುಗಳನ್ನು ಮಾತೃದೇವತೆಯ ಸಂಕೇತಗಳೆಂದು ಅವರು ಭಾವಿಸಿದ್ದರು. ಈ ಮೂರು ಅಂಗಗಳು ಮೂರು ಚಟುವಟಿಕೆಗಳನ್ನು ಮಾಡುತ್ತವೆ. ಅವು ಪಾಲನೆ, ಧಾರಣೆ ಮತ್ತು ಸೃಷ್ಟಿಗಳಾಗಿವೆ. ಸಿಂಧೂ ಸಂಸ್ಕೃತಿಯಲ್ಲಿ ದೊರೆತಿರುವ ಉಗ್ರಾಕಾರದ ಕಲ್ಲುಗಳನ್ನು ಮಾತೃದೇವತೆಯ ಸೃಷ್ಟಿಯ ಅಂಗವಾದ ಯೋನಿ ಎಂದು ಭಾವಿಸಲಾಗಿದೆ.

ಕೃಷಿ ಸಂಸ್ಕೃತಿಯು ಪ್ರವರ್ಧಮಾನಕ್ಕೆ ಬಂದ ಕಾಲದಲ್ಲಿ ಸ್ತ್ರೀ ದೈವಗಳು ಉದ್ಭವವಾದವು. ಸ್ತ್ರೀ ಗರ್ಭಧಾರಣ ಶಕ್ತಿಗೂ ಭೂಮಿಯ ಫಲವತ್ತತೆಗೂ ಸಂಬಂಧ ಏರ್ಪಟ್ಟು ಕೃಷಿಯ ಎಲ್ಲಾ ಕೆಲಸಗಳನ್ನು ಸ್ತ್ರೀ ಆರಂಭಿಸಬೇಕು. ಈರೀತಿಯ ಕಾರ್ಯವನ್ನು ಕೆಲವು ದೇವಾಲಯಗಳಲ್ಲಿ ಜರುಗಿಸಿದರೆ ಆಯಾ ದೈವಕ್ಕೆ ಸಂತೃಪ್ತಿಯಾಗುವುದೆಂಬ ನಂಬಿಕೆ ಬೆಳೆದು ಬಂದಿರಬೇಕು. ಇದರಿಂದಲೇ ಬಳ್ಳಾರಿ ಜಿಲ್ಲೆಯ ಸಂಡೂರು ಪ್ರದೇಶದ ಶ್ರೀಕುಮಾರ ಸ್ವಾಮಿ ಬೆಟ್ಟದಲ್ಲಿ "ವೇದ ಪೂರ್ವಕಾಲದಲ್ಲಿ ಶಿಶ್ನಾರಾಧನೆಯಿತ್ತು ಎಂಬುದಕ್ಕೆ ನಂದಿ ಹಳ್ಳಿ ಗ್ರಾಮದ ಹತ್ತಿರ ಶಿಶ್ನಾರಾಧನೆಯ ಕಲ್ಲು ದೊರೆತಿದೆ. ಈಭಾಗವು ದ್ರಾವಿಡ ಜನರ ವಸತಿ ಕ್ಷೆತ್ರವಾಗಿತ್ತೆಂದು ತಿಳಿಯುತ್ತದೆ. ಈ ಆರಾಧನೆಯು ನಂತರದ ಹಂತವಾದ ಊರ್ದ್ವಮುಖ ಯೋನಿಪೀಠ ರಹಿತ ಕಲ್ಲು ದೊರೆತಿದೆ. ಇದು ಯೋನಿಪೀಠಯುಕ್ತಲಿಂಗಗಳಿಗಿಂತಲೂ ಪ್ರಾಚೀನ" (ಡಾ.ಜಿ.ಎಂ.ನಾಗಯ್ಯ) ಎನ್ನಲಾಗುತ್ತದೆ.

ಸ್ತ್ರೀ ಸರ್ವ ಶಕ್ತಳಾಗಿದ್ದರಿಂದ ಗಂಡು ದೇವರು ಕೈಲಿ ಅಗದ ಕೆಲಸಗಳನ್ನು ಹೆಣ್ಣು ದೇವತೆಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸತೊಡಗಿದವು. ಮನು ತನ್ನ ಕೃತಿಯಲ್ಲಿ ಸ್ತ್ರೀಯನ್ನು ವೈಭವಿಕರೀಸಿದ ಪ್ರಸಂಗವೊಂದಿದೆ.

"ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರದೇವತಾಃ ||

ಯತ್ರೈತಾಸ್ತುತನ ಪೂಜಂತೆ ಸರ್ವಾಸ್ತಿತ್ರಾ ಫಲಾಃ ಕ್ರಿಯಾಃ || (ಮನುಸ್ಮೃತಿ)"

ಯಾವ ಮನೆಯಲ್ಲಿ ಸ್ತ್ರೀಯರನ್ನು ನಾರಿಯರನ್ನು ಪೂಜ್ಯಭಾವನೆಯಿಂದ ಕಾಣುವರೋ ಅಲ್ಲಿಗೆ ದೇವತಾ ಕುಲಗಳೆಲ್ಲ ಆಗಮಿಸುವರು. ಎಲ್ಲಿ ಅವರಿಗೆ ಗೌರವ ಸಲ್ಲುವುದಿಲ್ಲವೊ ಆ ಮನೆಯಲ್ಲಿ ಮಾಡಿದ ಕ್ರಿಯಾದಿಗಳೆಲ್ಲ ನಿಷ್ಪ್ರಯೋಜಕ ಎಂದು ನಾರೀ ಮಹಿಮೆಯನ್ನು ಹೇಳುತ್ತಾನೆ.

ಆರ್ಯರು ಭಾರತಕ್ಕೆ ಬರುವ ಪೂರ್ವದಲ್ಲಿದ್ದವರು ದ್ರಾವಿಡರು. ದ್ರಾವಿಡರು ಮಾತೃಪ್ರಧಾನ ಕುಟುಂಬದವರು. ಅವರು ಸ್ತ್ರೀಗೆ, ಹೆಣ್ಣಿಗೆ, ಮೂಲ ಸ್ಥಾನವನ್ನು ಕೊಟ್ಟರು. ಅಲ್ಲಿ ಗಂಡೆಂದರೆ ಹೆಣ್ಣಿಗೆ ಸಮಾನ, ಇವರಿಗೆ ಪಶುಪಾಲನೆಗೊತ್ತಿಲ್ಲ. ಇವರು ಶಿವೋಪಾಸಕರು ಆದರೂ ಪಾರ್ವತಿ (ಶಕ್ತಿ) ದೇವಿಯನ್ನು ಹೆಣ್ಣು ದೈವವನ್ನು ಗಾಢವಾಗಿ ಪೂಜಿಸುತ್ತಿದ್ದರು. ಹೆಣ್ಣು ಗಂಡಿನಂತೆ ಹೆಣ್ಣು ಹಂಪಲು ಕೂಡಿಸುವಳು, ಕಾಳಗೆದೆಡೆ ಕಲ್ಲುಕೊಡಲಿ ಬೀಸುವಳು, ಬಾಣ ಹೊಡೆಯುವಳು, ಒಟ್ಟಿನಲ್ಲಿ ವೇದ ಪೂರ್ವ ಆದಿ ದ್ರಾವಿಡರ ಸಮಾಜದಿಂದಲೂ ಹೆಣ್ಣಿಗೆ ಅತ್ಯಂತ ಗೌರವದ ಸ್ಥಾನವಿದೆ. ಇವರ ನಂತರ ಬಂದವರು ಆರ್ಯರು. ಅರ್ಯರು ಉತ್ತರ ಭಾರತವನ್ನು ಆಕ್ರಮಿಸಕೊಂಡ ಮೇಲೆ ದ್ರಾವಿಡರು ದಕ್ಷಿಣ ಭಾರತಕ್ಕೆ ಬಂದರು. ಹೀಗಾಗಿ ಇಂದಿಗೂ ಪಿತೃಪ್ರಧಾನ ಕುಟುಂಬದ ಲಕ್ಷಣವನ್ನು ಉತ್ತರ ಭಾರತದಲ್ಲಿ, ಮಾತೃ ಪ್ರಧಾನ ಕುಟುಂಬದ ಲಕ್ಷಣವನ್ನು ದಕ್ಷಿಣ ಭಾರತದಲ್ಲಿ ಕಾಣುತ್ತೇವೆ.

ನಮ್ಮ ಭಾರತೀಯ ಸಂಸ್ಕೃತಿ ಎಂದರೆ ದ್ರಾವಿಡ ಮತ್ತು ಆರ್ಯ ಸಂಸ್ಕೃತಿಗಳೆರಡು ಇವೆ ಎಂದು ಹೇಳಬಹುದು. ಸಾಮಾಜಿಕವಾಗಿ ಒಂದು ಮಾತೃದೈವಾರಾಧನೆ ಕಂಡರೆ, ಇನ್ನೊಂದೆಡೆ ಪಿತೃಪ್ರಧಾನವಾದದು. ಆರ್ಯ ಮತ್ತು ದ್ರಾವಿಡರ ನಡುವೆ ಸಮನ್ವಯದಿಂದಾಗಿ ಒಬ್ಬರಿಗೊಬ್ಬರು ಪೂರಕದವರಾದರು. ಧಾರ್ಮಿಕ ಸಂಬಂಧವನ್ನೇರ್ಪಡಿಸಿದರು. ನಾರಾಯಣ ಉಪಾಸಕರಾದ ಆರ್ಯರು ದಕ್ಷ ಪ್ರಜಾಪತಿಯ ಮಗಳಾದ ಸತಿಯನ್ನು, ಶಿವೋಪಾಸಕರಾದ ದ್ರಾವಿಡರ ಶಿವನಿಗೆ ಮದುವೆ ಮಾಡಿದರು. ಆದರೆ ವಸ್ತುಸ್ಥಿತಿಯೆಂದರೆ ವೈದಿಕ ಸಂಸ್ಕೃತಿಯಲ್ಲಿ ಸ್ಥಾನ ಪಡೆದಿದ್ದ ಮಾತೃದೇವತಾ ಪೂಜೆ ಹಾಗೂ ಶಿವ ಶಕ್ತಿ ಆರಾಧನೆ ತತ್ವಶಃ ದ್ರಾವಿಡ ಸಂಸ್ಕೃತಿಯ ಮೂಲದಿಂದಲೇ ಬಂದವುಗಳು. ಹೀಗೆ ಶಕ್ತಿ ದೈವದ ಆರಾಧನೆ ಕಂಡು ಬಂದಿತೆನ್ನಬಹುದು.

ಆದಿಮಾನವನ ಜೀವನದಲ್ಲಿ ಗಂಡು ಬೇಟೆ, ವ್ಯವಸಾಯದಲ್ಲಿ ತೊಡಗಿದರೆ ಹೆಣ್ಣಿಗೆ ಮನೆಗೆಲಸ ಹಾಗೂ ಮಕ್ಕಳ ಲಾಲನೆ ಪಾಲನೆಯ ಜವಾಬ್ದಾರಿ ಇತ್ತು. ಇಡೀ ಸಂಸಾರದ ರಕ್ಷಣೆಯೇ ಅವಳ ಹೊಣೆಯಾಯಿತು. ಪುರುಷನ ಸರ್ವಸ್ವವೇ ಅವಳಾಗಿ ನಿಂತಳು. ಅವಳ ತಾಯ್ತನವೊಂದು ಗಂಡಿಗೆ ಅದಮ್ಯ ಶಕ್ತಿ ಕಂಡಿತು. ಪುರುಷನ ಸರ್ವಸ್ವವೇ ಅವಳಾಗಿ ನಿಂತಾಗ ಅಗಾಧ ಶಕ್ತಿ ಸ್ವರೂಪಿಣಿಯೆನಿಸಿದಳು. ಕಾಲಾಂತರದಲ್ಲಿ "ಸತಿ ಸಂತುಷ್ಟಳಾಗಿದ್ದರೆ ಕುಲ, ಶೀಲ, ಧರ್ಮ, ಚಾರಿತ್ರ್ಯ ಎಲ್ಲವೂ ಸುರಕ್ಷಿತ" ಹಾಗೂ "ಎಲ್ಲಿ ಸ್ತ್ರೀಯರು ಸಂತುಷ್ಟರಾಗಿರುವರೋ ಅಲ್ಲಿ ದೇವತೆಗಳು ಪ್ರಸನ್ನರಾಗುತ್ತಾರೆ." ಎಂಬ ತಿಳುವಳಿಕೆಯಲ್ಲಿ ಸ್ತ್ರೀಗೆ ದೈವತ್ವವನ್ನು ಆರೋಪಿಸಲಾಯಿತು.

ಎಲ್ಲವನ್ನು ರಕ್ಷಿಸಬಲ್ಲ ಸ್ತ್ರೀ ಮಾತೆಯಾದಳು. ಅದಲ್ಲದೇ ಪ್ರಕೃತಿಯೇ ಜೀವನೋಪಾಯದ ಸಾಧನವಾದ ಆದಿಮಾನವನ ಅರಿವಿನಲ್ಲಿ ಪ್ರಕೃತಿ ಶಕ್ತಿಯಾಗಿಯೂ ಕಾಣಿಸಿಕೊಂಡಿತು. ಮೊದಲು ಪ್ರಕೃತಿ, ಆ ಮೇಲೆ ಪುರುಷ. ಪ್ರಕೃತಿಯಿಂದಲೇ ಜಗತ್ತು, ಪ್ರಕೃತಿಯ ಕಾರ್ಯಕಾರಣವೆಲ್ಲ ತಾನೇ ಆದವಳು ಸ್ತ್ರೀ. ಪುರುಷ ಪ್ರಕೃತಿ ಸಂಯೋಗವೇ ಸೃಷ್ಟಿಕಾರ್ಯ. ಪ್ರಕೃತಿ ಜಡ, ಪುರುಷ ನಿಷ್ಕ್ರಿಯ. ಆದರೆ ಕ್ರಿಯೆಗೆ ಸಂಯೋಗ ಅವಶ್ಯ ಹೀಗಾಗಿ ಹೆಣ್ಣು ಪ್ರಕೃತಿ ತತ್ವವಾಗಿ ಉಪಾಸನಾ ದೇವತೆಯಾದಳು.

ಕಾಡಿನಲ್ಲಿದ್ದಾಗ ಅಮೂರ್ತವಾಗಿ ಪೂಜಿಸುತ್ತಿದ್ದ ಮನುಷ್ಯ ಗ್ರಾಮ ಮಾನವನಾದಾಗ, ತನ್ನ ಪೂಜೆಯನ್ನು ಮೂರ್ತಸ್ಥಿತಿಗೆ ತಂದನು. ಅವನ ಪೂಜಾವಸ್ತುಗಳು ಮೊದಲು ಒರಟೊರಟಾದ ಕಲ್ಲು ಕಟ್ಟಿಗೆ ರೂಪದಲ್ಲಿದ್ದುದು ಅನಂತರ ಮೂರ್ತಿಯ ರೂಪ ತಾಳಿದವು. ಮೊದಲು ತಾನು ಪೂಜಿಸುತ್ತಿದ್ದ ಶಕ್ತಿಗಳಿಗೆ ಆತ್ಮಗಳಿಗೆ ಸಂಕೇತ ರೂಪದಲ್ಲಿ ಮೂರ್ತಿ ಪೂಜೆ ಮಾಡಿ, ಮನುಷ್ಯಾಕಾರದ ಗೊಂಬೆ ಮಾಡಿ ದೈವವೆಂದು ಪೂಜಿಸತೊಡಗಿದನು. ಹೀಗೆ ಮಾನವನು ಬೆಳೆಯುತ್ತಾ ಒಕ್ಕಲುತನ ಆರಂಭಿಸಿದ ಅನಂತರ ಅದರಿಂದ ಕಾಡು ಜೀವನ ಹೋಗಿ ಗ್ರಾಮ ಜೀವನ ಆರಂಭಿಸಿದ. ಹನಿ ಹನಿ ಸೇರಿದಾಗ ಹಳ್ಳವಾದಂತೆ ಕಾಡು ಜನರು ಒಂದೆಡೆ ಸೇರಿ ಗ್ರಾಮದಲ್ಲಿ ವಾಸಿಸತೊಡಗಿದರು. ಅಕ್ಷರ ಜ್ಞಾನವು ಬಂತು. ಕಾಡಿನಲ್ಲಿ ರಕ್ಷಿಸುತ್ತಿದ ಸ್ತ್ರೀ ಶಕ್ತಿಯ ದೈವವು ಗ್ರಾಮಜೀವನಕ್ಕೆ ಬಂದಾಗ ಅದು ತಮ್ಮನ್ನೆಲ್ಲಾ ರಕ್ಷಣೆ ಮಾಡುವ ಗ್ರಾಮದೈವವಾಗಿ ಕಾಣಿಸಿಕೊಂಡಿತು. ಬ್ರಹ್ಮ, ವಿಷ್ಣು ಮಹೇಶ್ವರರನ್ನು ಸೃಷ್ಟಿಸಿದರು. ಕ್ರಮೇಣ ಅಂದರೆ ಹನುಮಂತನ ಬಾಲ ಬೆಳೆದಂತೆ ಜನಪದರಲ್ಲಿ ದೈವಗಳು ಒಂದು ಹತ್ತು ನೂರು ದೈವಗಳು ಹರಡಿ ಹಬ್ಬಿ ಬೆಳೆಯುತ್ತಾ ಮೂವತ್ತು ಮೂರು ಕೋಟಿಯಾಯಿತು.

ಪಿತೃ ಪ್ರಧಾನ ಕುಟುಂಬದರವರಾದ ಆರ್ಯರು ಪುರುಷ ದೈವಗಳಾದ ಇಂದ್ರ, ವರುಣ, ಅಗ್ನಿಯನ್ನು ಪೂಜಿಸಿದರು, ಮಾತೃ ಪ್ರಧಾನ ಕುಟುಂಬದವರಾದ ದ್ರಾವಿಡರು ಹೆಣ್ಣು ದೈವವೆಂದು ಪೂಜಿಸಿದರು. ದ್ರಾವಿಡರ ಸಂಪರ್ಕದಿಂದ ಕ್ರಮೇಣ ಆರ್ಯರಲ್ಲಿ ಬದಲಾವಣೆಯಾಗಿ ಸ್ತ್ರೀಯರಿಗೂ ಮಹತ್ವ ಬರತೊಡಗಿತು. ಇದರಿಂದ ಲೋಪಮುದ್ರಾ, ಅಪಾಲಾ, ವಿಶ್ವವರಾ, ಶಿಕರಾ, ಘೋರ ಮುಂತಾದ ಸ್ತ್ರೀಯರು ಪುರುಷರಷ್ಟೆ ಮಂತ್ರಗಳನ್ನು ರಚಿಸುವ ಸಾಮರ್ಥ್ಯ ಹೊಂದಿದವರಾಗಿದ್ದರು. ಶಿವನಿಗೆ ಪಾರ್ವತಿ ಇದ್ದಹಾಗೆ ಬ್ರಹ್ಮನಿಗೆ ಸರಸ್ವತಿ, ವಿಷ್ಣುವಿಗೆ ಲಕ್ಷ್ಮಿ ಆದದ್ದು ದ್ರಾವಿಡರ ಮಾತೃ ದೇವತೋಪಾಸನೆಯಿಂದ ಎಂಬುದು ಇಡೀ ಹಿಂದು ದೈವಗಳ ಹುಟ್ಟು ನೋಡಿದಾಗ ತಿಳಿದು ಬರುವುದು ಅದಕ್ಕಾಗಿ ಸರ್ ಜಾನ್ ಮಾರ್ಷಲ್ ಅವರು ಒಟ್ಟಾರೆಯಾಗಿರುವ ದೈವಗಳಲ್ಲಿ ಅದರಲ್ಲೂ ಹೆಣ್ಣು ದೈವವು ಹೆಚ್ಚಾಗಿ ಇರುವುದು ಆರ್ಯರಿಗಿಂತ ದ್ರಾವಿಡರಲ್ಲಿ ಎಂದು ತಮ್ಮ ಪುಸ್ತಕದಲ್ಲಿ ತಿಳಿಸಿದ್ದಾರೆ.

ಜನಪದರಲ್ಲಿ ಗ್ರಾಮದೈವಗಳ ಕಲ್ಪನೆ ಬಂದದ್ದು ಹೆಣ್ಣಿನಿಂದಲೆ, ಹೆಣ್ಣು ಸಿಟ್ಟಿಗೆದ್ದು ಕಣ್ಣು ಕೆಂಪಗೆ ಮಾಡುವಲ್ಲಿ ದ್ಯಾಮವ್ವ, ದುರಗಮ್ಮ, ಮಾರೆಮ್ಮ, ಕಾಳಮ್ಮ, ಊರಮ್ಮ, ಚೌಡಮ್ಮರನ್ನು, ಶಾಂತಳಾಗಿ ಇರುವಲ್ಲಿ ಲಕ್ಷ್ಮಿ, ಸರಸ್ವತಿಯರನ್ನು ಸೃಷ್ಟಿಸಿದ್ದೇವೆ. ಈ ಎರಡು ರೂಪಗಳನ್ನು ಹೆಣ್ಣಿನಲ್ಲಿ ಕಂಡುಕೊಂಡು ಇದಕ್ಕೆ ದೈವತ್ವವನ್ನು ಆರೋಪಿಸಲಾಯಿತು.ಮನುಷ್ಯ ಬಾಯಿಯಿಂದ ಅಮ್ಮ ಎಂಬ ಪದ ಹುಟ್ಟಿಕೊಂಡಿತು. ಕನ್ನಡದಲ್ಲಿ ಈ ಅಮ್ಮನಿಗೆ ಜನಕೊಡುವ ಅರ್ಥವು ಎರಡು ಪ್ರಕಾರದಲ್ಲಿರುವುದು. ಒಂದನೆಯದು ತಾಯಿಯೆಂದಿದ್ದರೆ, ಇನ್ನೊಂದು ಕಷ್ಟದಿಂದ, ರೋಗದಿಂದ ಕಾಪಾಡುವವಳೆಂದರ್ಥ. ಆದ್ದರಿಂದ ಕಾಪಾಡುವ ಕೊಲ್ಲುವ ಎರಡೂ ಶಕ್ತಿಗಳನ್ನು ಹೊಂದಿದ ಹೆಣ್ಣು ಶಕ್ತಿಯೆನಿಸಿಕೊಂಡಳು ಶಿಷ್ಟರನ್ನು ಕಾಪಾಡುವ, ದುಷ್ಟರನ್ನು ಕೊಲ್ಲುವ ಇಂಥ ಅಮ್ಮನನ್ನು ವ್ಯವಸಾಯವನ್ನು

ಬಲ್ಲ ಬುಡಕಟ್ಟಿನ ಜನಾಂಗದವರು ಊರು ಮಾಡಿದಾಗ, ಊರನ್ನು ಕಾಪಾಡಲು ಊರ ಮದ್ಯದಲ್ಲಿ ಸ್ಥಾಪಿಸಿ ಊರಮ್ಮನನ್ನಾಗಿ ಮಾಡಿದರು. ಈ ಊರಮ್ಮನೀಗೇನೆ ಮುಂದೆ ಗ್ರಾಮದೇವತೆ ಎನ್ನತೊಡಗಿದರು.

ಈ ಗ್ರಾಮದೈವವು ಉಳಿದ ಹೆಣ್ಣು ದೈವಗಳಂತೆ ಸರ್ವಸಾಧಾರಣವಾಗಿದ್ದರೆ ಜನ ಅಂಜಿ ಭಯಭಕ್ತಿಯಿಂದ ನಡೆಯುವುದಿಲ್ಲವೆಂದು ಜನಪದರು ದೇವಿಗೆ ಹತ್ತಾರು ಕೈಗಳನ್ನು ಮಾಡಿ, ಆಕೈಗಳಲ್ಲಿ ಕಪಾಲ, ಶೂಲ, ಖಡ್ಗ, ಅಂಕುಶಗಳನ್ನು ಇಟ್ಟು, ಉರಿನಾಲಿಗೆ, ಕೋರೆದಾಡೆ ಕೆಂಗಣ್ಣುಗಳನ್ನು ತೋರಿಸಿ ಹುಲಿ ಸಿಂಹಗಳನ್ನು ವಾಹನವನ್ನಾಗಿ ಮಾಡಿ ಕುರಿಕೋಣಗಳ ಬಲಿ ತೆಗೆದುಕೊಳ್ಳುವವಳನ್ನಾಗಿ ಮಾಡಿದರು.

ಬುಡಕಟ್ಟು ಜನಾಂಗದವರು ಈ ಶಕ್ತಿದೈವಗಳಲ್ಲಿ ಒಂದೊಂದು ಪ್ರದೇಶದವರು ಒಂದೊಂದು ಶಕ್ತಿದೈವವನ್ನು ತೆಗೆದುಕೊಂಡು ಗ್ರಾಮದೈವವನ್ನಾಗಿ

ಅಧ್ಯಾಯ ನಾಲ್ಕು

ಜಾತ್ರೆ, ಉತ್ಸವ, ಹಬ್ಬಹರಿದಿನಗಳು, ಆಚರಣೆಗಳು, ನಂಬಿಕೆಗಳು, ಸಂಪ್ರದಾಯಗಳು

ಅಧ್ಯಾಯ ನಾಲ್ಕು

ಜಾತ್ರೆ, ಉತ್ಸವ, ಹಬ್ಬಹರಿದಿನಗಳು, ಆಚರಣೆಗಳು, ನಂಬಿಕೆಗಳು, ಸಂಪ್ರದಾಯಗಳು

ಜನಪದ ಸಂಸ್ಕೃತಿಗೆ ಆಚರಣೆಯೇ ಬೆನ್ನೆಲುಬು, ಆಚರಣೆಯಿಲ್ಲದೆ ಯಾವ ದೈವದ ಅಸ್ತಿತ್ವವೂ ಇಲ್ಲಿ ಸಾಧ್ಯವಿಲ್ಲ. ಜನಪದ ಧರ್ಮ ಒಂದು ಬಗೆಯಲ್ಲಿ ಆಚರಣೆಯ ಧರ್ಮ ಎನ್ನಬಹುದು. ಆ ಆಚರಣೆ ನಿರ್ದಿಷ್ಟ ಕಾಲದಲ್ಲಿ, ನಿರ್ದಿಷ್ಟ ವ್ಯಕ್ತಿಯಿಂದಲೇ ಆಗಬೇಕಾದುದು. ದೇವತೆಗಳೂ ಸಮಾಜಕ್ಕೂ ಇರುವ ಸಂಬಂಧ ಅಭಿನಯಗೊಳ್ಳುವ ಕ್ರಮದ ವಿವರಗಳಿಗೆ ಆಚರಣೆಗಳು. "ಸಂಪ್ರದಾಯ ಅಂಗೀಕರಿಸಿದ ಧಾರ್ಮಿಕ ಮತ್ತು ಮಾಂತ್ರಿಕ ಆಚರಣೆಗಳ ಮೊತ್ತವೇ ಆಚರಣೆ" ಎನ್ನಲಾಗಿದೆ. ನಂಬಿಕೆ ಆಚರಣೆಯ ಬೆನ್ನೆಲುಬು. ನಂಬಿಕೆಯ ಸಿದ್ಧಾಂತ ಆಚರಣೆಯನ್ನು ಮುಂದುವರೆಸಿಕೊಂಡು ಹೋಗುವಂತೆ ಮಾಡುತ್ತದೆ. ಆಚರಣೆಯು ಹುಟ್ಟುವ ಮುನ್ನ ಅಥವಾ ಆನಂತರ ಪುರಾಣಗಳು ಹುಟ್ಟಿಕೊಳ್ಳುತ್ತವೆ.

ಆಚರಣೆಯನ್ನು ವಿವರಿಸುವಾಗ ಮತ ಧರ್ಮಗಳಿಗೆ ಸಂಬಂಧಿಸಿದಂತೆ, ಅಗೋಚರ ದೈವ ಶಕ್ತಿಗಳ ಪ್ರೀತ್ಯರ್ಥವಾಗಿ ಮಾನವ ನಡೆಸುತ್ತಾ ಬಂದಿರುವ ಮತಾಚರಣೆಗಳಿಗೆ ಕರ್ಮವಿಧಿಗಳಿಗೆ ಈ ಹೆಸರಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಪುನಾರವರ್ತನೆ ಮತ್ತು ಸಾಮೂಹಿಕ ವೀಕ್ಷಣೆಯಿಂದ ಸಾಂಪ್ರದಾಯಿಕವಾಗಿ ಒಪ್ಪಿತವಾಗಿರುವ, ಭೂತ ವರ್ತಮಾನ, ಭವಿಷ್ಯತ್ ಕಾಲಗಳಿಗೆ ಸಂಬಂಧಿಸಿದಂತೆ ಕಾರ್ಯಕಾರಣ ಸಂಬಂಧವನ್ನು ಸೂಚಿಸುವ ಕಲ್ಪನೆಯನ್ನೇ ನಂಬಿಕೆ ಎಂದು ಕರೆಯಬಹುದು. ಒಂದು ವರ್ಗ ಪರಂಪಾರಾನುಗತವಾಗಿ ಒಪ್ಪಿರುವ ಮಾನವನ ಕ್ರಿಯಾವಿನ್ಯಾಸವನ್ನು ಸಂಪ್ರದಾಯ ಎಂದು ಕರೆಯಬಹುದು. ಸಂಪ್ರದಾಯ ವೈಯಕ್ತಿಕವಾದುದಲ್ಲ, ಸಾಮೂಹಿಕವಾದುದು. ಜನರು ಏನು ಮಾಡಬೇಕೆಂದು ತಿಳಿಸುವುದೇ ಸಂಪ್ರದಾಯ. ಏಕೆ ಅದನ್ನು ಮಾಡಬೇಕೆಂದು ತಿಳಿದಿದ್ದರೋ ಅದೇ ನಂಬಿಕೆ. ಸಮಷ್ಟಿಯ ಹಿತರಕ್ಷಣೆಗಾಗಿ, ಸಾಮಾನ್ಯವಾಗಿ ವರ್ಷಕ್ಕೊಂದು ಸಲ, ವಿಶೇಷ ಸಂದರ್ಭಗಳಲ್ಲಿ ಆಚರಿಸುವ ಸಂಪ್ರದಾಯ, ಆಚರಣೆಗಳನ್ನು ಒಳಗೊಂಡ ಸಂಕೀರ್ಣ ಸ್ವರೂಪವನ್ನೇ ಹಬ್ಬ ಎಂದು ಕರೆಯಬಹುದು. ಸಂಪ್ರದಾಯ, ಹಬ್ಬ, ಆಚರಣೆ ಈ ಮೂರಕ್ಕೂ ನಂಬಿಕೆಯೇ ಜೀವಧಾತು.

ಗ್ರಾಮದೈವಗಳನ್ನು ಅಧ್ಯಯನ ಮಾಡಲು ಆಚರಣೆಗಳೇ ಆಧಾರ. ಹರಕೆಗಳನ್ನೂ ಆಚರಣೆ ಒಳಗೊಳ್ಳುತ್ತದೆ. ಆಚರಣೆ ಕಡ್ಡಾಯವಾದರೆ, ಹರಕೆಯನ್ನು ಹರಸಿಕೊಂಡವರು ಮಾತ್ರ ಒಪ್ಪಿಸುತ್ತಾರೆ. ಆಚರಣೆ ಸಾಮೂಹಿಕವಾದರೆ, ಹರಕೆ ವೈಯಕ್ತಿಕವಾದುದು. ಹರಕೆ ಬಹಳ ಸಲ ಆಚರಣೆಯ ರೂಪದಲ್ಲೇ ನಡೆಯುತ್ತದೆ. ಕೊಂಡಹಾಯುವುದು, ದೀಪ ಹಚ್ಚುವುದು, ದೀಡ ನಮಸ್ಕಾರ ಹಾಕವುದು, ಸಿಡಿ ಆಡುವುದು, ಇದೆಲ್ಲಾ ಹರಕೆ ರೂಪದ ಆಚರಣೆಗಳು. ಗ್ರಾಮದೇವತೆಯ ಹಬ್ಬದಲ್ಲಿ ಕಂಡುಬರುವ ಹೊಸ್ನಾರು ಆಚರಣೆಯಲ್ಲಿ ವಿನೋದ, ನಾಟಕೀಯತೆ ಈ ಅಂಶಗಳೂ ಸೇರಿಕೊಂಡಿರುವುದನ್ನು ಗಮನಿಸಬಹುದು. ಅಲ್ಲದೆ ಅಂಥ ಆಚರಣೆಗಳು ಐತಿಹಾಸಿಕ

ಅಂಶವೊಂದನ್ನು ಅಭಿನಯಿಸಿ ತೋರಿಸುತ್ತವೆ. ಚರಿತ್ರೆಯ ಅನೇಕ ಸಂಗತಿಗಳು ಅಳಿದು ಹೋದರೂ ಅವು ಆಚರಣೆಯಲ್ಲಿ ಜೀವಂತ ಜೀವಂತವಾಗಿರುವುದು ಇದಕ್ಕೆ ಕಾರಣವಾಗಿರಬಹುದು. ಪೌರಾಣಿಕ ಘಟನೆಗಳೂ ಆಚರಣೆಗಳ ಮೂಲಕ ಅಭಿವ್ಯಕ್ತಿಗೊಳ್ಳುವುದನ್ನು ನೋಡಬಹುದು. ಒಬ್ಬ ವ್ಯಕ್ತಿ ತನಗೆ ಬೇಕೆಂದಾಗ ಆಚರಣೆಯನ್ನು ಸೃಷ್ಟಿಸಲು ಸಾಧ್ಯವಿಲ್ಲ. ಒಂದು ಜನಾಂಗದ ಜೀವನ ವಿಧಾನದ ಬೇಡಿಕೆಯ ಅಂಗವಾಗಿ ಆಚರಣೆ ರೂಪ ಪಡೆಯುತ್ತದೆ. ಆದ್ದರಿಂದಲೇ ಅದು ಬಹುಕಾಲ ಬಾಳುತ್ತದೆ. ಆಚರಣೆಗಳು ವಿಶೇಷ ಸಂದರ್ಭಗಳಲ್ಲಿ ಆಚರಿಸಲ್ಪಟ್ಟಾಗ ಹಬ್ಬಗಳೆನಿಸಿಕೊಳ್ಳುತ್ತವೆ. ಈ ಹಬ್ಬಗಳಿಗೆ ವ್ಯಾಪಾರ ವಾಣಿಜ್ಯದ ಸ್ಪರ್ಶವಾದಾಗ ಅವಕ್ಕೆ ಜಾತ್ರೆಯ ಸ್ವರೂಪ ಬರುತ್ತದೆ. ಜಾತ್ರೆಗಳು ಪ್ರಾರಂಭದಲ್ಲಿ ಪ್ರಸಿದ್ಧ ತೀರ್ಥಕ್ಷೇತ್ರಗಳಲ್ಲಿ ನಡೆಯುತ್ತಿದ್ದು ನಂತರ ಸ್ಥಳೀಯವಾದವೆಂಬ ಅಭಿಪ್ರಾಯವಿದೆ. ಪಾಪ ಪರಿಹಾರಕ್ಕಾಗಿ ದೇಶದ ಮೂಲೆ ಮೂಲೆಗಳಿಂದ ಜನ ಅಂಥ ಕ್ಷೇತ್ರದಲ್ಲಿ ಅಪಾರ ಸಂಖ್ಯೆಯಲ್ಲಿ ನೆರೆಯುತ್ತಿದ್ದರು. ಅನಂತರ ಕೆಲವು ಹಳ್ಳಿಗಳಲ್ಲಿ ನೆಂಟರಿಷ್ಟರ ಜೊತೆಗೆ ಶ್ರದ್ಧಾವಂತ ಭಕ್ತರೂ ಬರಲಾರಂಭಿಸಿದರು. ದೇವರು ಪ್ರಭಾವಶಾಲಿ ಆದರಂತೂ ಜನರ ಗದ್ದಲವೂ ಅಧಿಕವಾಗುತ್ತಿತ್ತು. ಒಂದು ದಿನದ ಹಬ್ಬ ಮೂರು ಅಥವಾ ಹೆಚ್ಚು ದಿನಗಳಂತೆ ಹಬ್ಬುತ್ತಾ ಕುಣಿತ, ಮೆರೆತಗಳು ಕೂಡಿಕೊಂಡು ಮದ್ದು ಪಟಾಕಿಗಳ ವೈಭವ ಆಕರ್ಷಕವಾಗಿ, ಅಂಗಡಿ ಮುಂಗಟ್ಟುಗಳೂ ಜಮಾಯಿಸಿ, ಜನಮರುಳಾಗಿ ಪರುಷೆ ಪರುಷೆ ಸೇರಿದಾಗ ಅದು ಜಾತ್ರೆಯೆಂಬ ನಾಮಕರಣಕ್ಕೆ ಯೋಗ್ಯವಾಯಿತು. ಕೊನೆಗೆ ರೈತರ ಜೀವನಾಡಿಯಂತಿರುವ ದನಗಳ ನೆರವಿಯೂ ಸಂಘಟನೆಗೊಂಡಾಗ ಆ ಪದದ ಅರ್ಥ ವಿಶಾಲವಾಯಿತು. ಧಾರ್ಮಿಕ ಸ್ವರೂಪದ ಹಬ್ಬ ಕಾಲಕ್ರಮೇಣ ಸಾಂಸ್ಕೃತಿಕ ಮಹತ್ವವನ್ನು ಪಡೆದು ಕೊನೆಗೆ ವಾಣಿಜ್ಯ ಮುಖವನ್ನು ರೂಪಿಸಿಕೊಂಡಾಗ ಜಾತ್ರೆಯಾಯಿತು.

ಹಬ್ಬದ ಸಂದರ್ಭದಲ್ಲಿ ಆಚರಿಸುವ ಆಚರಣಗಳು, ಗ್ರಾಮದೇವತೆಯ ಅಧ್ಯಯನಕ್ಕೆ ತುಂಬ ಸಹಕಾರಿಯಾಗುತ್ತವೆ. ಭಯ ಭಕ್ತಿಯಿಂದಲೂ, ಅಪಾರವಾದ ತೊಡಗುವಿಕೆಯಿಂದಲೂ ಭಕ್ತರೂ ಈ ಆಚರಣೆಗಳನ್ನು ನಿರ್ವಹಿಸುತ್ತಾರೆ. ಇವರಿಗೆ ಒಂದೊಂದು ಆಚರಣೆಯೂ ಜೀವಂತ, ಅರ್ಥಪೂರ್ಣ, ಹೀಗೆ ಮಾಡದಿದ್ದರೆ ಕಂಟಕಗಳು ಆರಂಭವಾಗುತ್ತವೆ ಎಂಬ ನಂಬಿಕೆ ಇರುವುದರಿಂದ ಆಚರಣೆಗಳನ್ನು ನಿಲ್ಲಿಸುವ ಪ್ರಶ್ನೆಯೇ ಹುಟ್ಟುವುದಿಲ್ಲ. ಮುಂದೆ ಗ್ರಾಮದೇವತೆಗೆ ಸಂಬಂಧಿಸಿದ ಆಚರಣೆ, ಹರಕೆಗಳನ್ನು ಅವುಗಳು ಆಚರಿಸಲ್ಪಡುವ ಅನುಕ್ರಮಣಿಕೆಯಲ್ಲಿಯೇ ಪರಿಶೀಲಿಸಬಹುದು.

೪.೧ ಸ್ತ್ರೀದೈವಗಳು

ಸ್ತ್ರೀದೈವಗಳು ಮೂಲದಲ್ಲಿ ಪ್ರಕೃತಿಯ ಆರಾಧನೆಯ ವಸ್ತುಗಳಾದ ಪಂಚಭೂತಗಳನ್ನು ಮಾತೃಸ್ವರೂಪದ ಮೂಲಕ ಪೂಜಿಸುತ್ತಾ ಬಂದಿರಬೇಕು. ಅವುಗಳಲ್ಲಿ ಭೂಮಿಯನ್ನು ಭೂಮಿತಾಯಿ ಎಂಬುದಾಗಿ ಬಳಸಲ್ಪಟ್ಟಿರಬೇಕು. ಇದೇ ಮುಂದುವರೆದ ಅಮ್ಮ ಎಂಬ ಪದವು ಇತರ ಪಂಚಭೂತಗಳಿಗೂ ಸೇರ್ಪಡೆಯಾಗಿರಬೇಕು. ಬಿಸಿಲಮ್ಮ, ಗಾಳಿಯಮ್ಮ ಮರದಮ್ಮ, ಕಾಳಮ್ಮ ಮುಂತಾದವು. ಅಂತೆಯೇ ಸ್ತ್ರೀದೈವಗಳಲ್ಲಿ ಶಕ್ತಿಯ ಪ್ರತೀಕವಾಗಿ ಬೆಳವಣಿಗೆಯಾಗಿವೆ. ಈ ರೀತಿಯ ಮಹಾಮಾತೆಯನ್ನು ಆರಾಧಿಸುವ ಧರ್ಮಗಳು ಬಹುಶಃ ಮಾನವನ ಪೂರ್ವ ಚರಿತ್ರೆಯ ಪ್ರಾರಂಭದಲ್ಲಿಯೇ ಇದ್ದಿರಬೇಕು. ಈ ಮಾತೃಪೂಜೆಯ ಸಪ್ತಮಾತೃಕೆಯ ಹೆಸರಿನಲ್ಲಿ ಬೆಳೆದು ಬರತೊಡಗಿತು. ಅವುಗಳಲ್ಲಿ ಕಾಳಿ, ದುರ್ಗಿ, ಚೌಡಿ, ಮಾರಿ, ದೇವಿ, ಯಕ್ಷಿಣಿ, ಪೋಷಿ ಎಂಬ ಹೆಸರು ಬಳಕೆಯಾಗಿ ಇವುಗಳಿಗೆ ಅಮ್ಮ ಎಂಬ ಪದ ಧರಿಸಿ ಕಾಳಮ್ಮ, ದುರ್ಗಮ್ಮ,

ಮಾರೆಮ್ಮ ಅಥವಾ ಊರಮ್ಮ, ಪೋಷಮ್ಮ, ಉಡುಚಮ್ಮ ಎಂಬುದಾಗಿ ಬಳಕೆಯಾಗಿವೆ. ಇಲ್ಲಿ ಆರ್ಯ ಮತ್ತು ದ್ರಾವಿಡರ ದೇವತೆಗಳಾಗಿ ವಿಭಜಿಸಲು ತೊಡಗಿದ್ದು ಕಾಣಸಿಗುತ್ತದೆ. ಪಾರ್ವತಿ ಅಂಶದವರು, ಲಕ್ಷ್ಮೀ ಅಂಶದವರು, ಸರಸ್ವತಿ ಅಂಶದವರು ಈ ಎಲ್ಲದರ ಜೊತೆಗೆ ಮಾಸ್ತಿ ಪರಂಪರೆಯ ಅಂಶವೂ ದೈವಗಳಲ್ಲಿ ಸೇರ್ಪಡೆಯಾಗಿತ್ತು. ಇದರಿಂದಲೇ ಸಪ್ತಮಾತೃಕೆಯರು ಪಾಶ್ಚಾತ್ಯ ಮೂಲದವರಲ್ಲ, ಭಾರತೀಯ ಮೂಲದವರೆಂಬ ಮಾತು ಸ್ಪಷ್ಟವಾಗಿದೆ(ಚೆನ್ನಣ್ಣವಾಲೀಕರ). ಆದರೂ ಸಂಡೂರಿನಲ್ಲಿರುವ ಉಡುಚಮ್ಮ, ಊರಮ್ಮ, ಕಾಳಮ್ಮನ ಹೆಸರುಗಳೂ ಬೇರೆಯಾದರೂ ಒಂದೇ ದೈವವಾಗಿ ಗುರುತಿಸತೊಡಗುತ್ತಾರೆ. ಹಿಂದೆ ತಿಳಿಸಿದಂತೆ ದ್ಯಾವಮ್ಮ, ಮರಗಮ್ಮ, ಎಲ್ಲಮ್ಮ, ಕಾಳಮ್ಮ, ಚೌಡಮ್ಮ ಪಾರ್ವತಿ ಪರಂಪರೆಗೆ ಸೇರಿದ ಗ್ರಾಮದೈವಗಳಾಗಿದ್ದಾರೆ. ಇವರಲ್ಲಿ ದ್ಯಾವಮ್ಮ, ಮರಗಮ್ಮ, ಎಲ್ಲಮ್ಮರನ್ನು ಹೆಚ್ಚಾಗಿ ಕೆಳ ವರ್ಗದ ಜನ ಪೂಜಿಸುವುದರಿಂದ ಇವರಿಗೆ ಕೆಳವರ್ಗದ ದೈವಗಳೆಂದು ಕರೆಯುವರು. ಚೌಡಮ್ಮ, ಕಾಳಮ್ಮ, ಮುಂತಾದ ದೈವಗಳನ್ನು ಕೆಳವರ್ಗದ ಹಲವು ಪಂಗಡಗಳವರು ಪೂಜಿಸುತ್ತಾರೆ.

ಸಂಡೂರು ಎಂದು ಪ್ರಸಿದ್ಧವಾದ ನಗರವು ಸ್ಕಂಧಪುರಿಯೆಂದು ಪುರಾಣಗಳಲ್ಲಿ ಪ್ರಸಿದ್ಧವಾಗಿದೆ. ಖನಿಜಗಳ ತವರ್ಮನೆಯಾದ ಬೆಟ್ಟಗಳ ಸುತ್ತಲೂ ಇದ್ದು ನಡುವೆ ತಾಯಿ ಮಡಿಲಲ್ಲಿರುವ ಮುದ್ದು ಮಗುವಿನಂತೆ ಸಂಡೂರಿನ ವನದೇವಿಯರು ಕಟ್ಟಿಸಿರುವ ಹಸಿರು ತೊಟ್ಟಿಲಲ್ಲಿ ರಾರಾಜಿಸುತ್ತಿದೆ. ಹೀಗೆ ಹಚ್ಚಹಸುರಾಗಿರುವ ಸಂಡೂರಿನಲ್ಲಿನ ಜನಪದರು ಗ್ರಾಮದೇವತೆಗಳನ್ನು ಹಿಂದಿನಿಂದಲೂ ಪೂಜಿಸುತ್ತಾ ಬಂದಿದ್ದಾರೆ. ಇಲ್ಲಿಯ ಜನರಿಗೆ ಗ್ರಾಮದೈವಗಳ ಮೇಲೆ ಭಯ, ಭಕ್ತಿ ಹೆಚ್ಚಾಗಿರುವುದು ಕಾಣಸಿಗುತ್ತದೆ. ಸಂಡೂರಿನ ಸ್ತ್ರೀದೈವಗಳೆಂದರೆ ಉಡುಚಮ್ಮ, ಊರಮ್ಮನನ್ನೇ ಪ್ರಮುಖ ಗ್ರಾಮದೈವಗಳೆಂದು ಪೂಜಿಸುತ್ತಾರೆ. ಇವರಲ್ಲದೆ ಬನ್ನಿಮಾಂಕಾಳಮ್ಮ, ಕನ್ನಿಕಾಪರಮೇಶ್ವರಿ, ಹುಲಿಗೆಮ್ಮ ಮುಂತಾದ ದೈವಗಳು ಕಾಣಸಿಗುತ್ತವೆ.

ಉಡುಚಮ್ಮ

ಉಡುಚಮ್ಮ ಎಂದರೆ ಜನಪದರಿಂದ ಉಡಿಯನ್ನು ತುಂಬಿಸಿಕೊಳ್ಳುವ ಅಮ್ಮ ಉಡುಚಮ್ಮ ಎಂದು ಜನಪದರ ಅಭಿಪ್ರಾಯವಾಗಿದೆ. ಉಡುಚವ್ವ - ಉಡುಚಮ್ಮ - ಉಡುಚಲವ್ವ - ಉಡುಚಲಮ್ಮ ಎಂದು ಹಿಂದಿನಿಂದ ಇದರ ಹೆಸರು ಬಂದಿದೆ. ಈ ದೈವವು ಸಂಡೂರಿನ ಗ್ರಾದೈವವಾಗಿದೆ. ಒಂದು ಪುರಾತನವಾದ ದೈವವಾಗಿದೆ. ಎಷ್ಟೆಂದರೆ ಸು. ೩೦೦ ವರ್ಷದ ಹಿಂದಿನದಾಗಿದೆ. ಸಂಡೂರು ಗ್ರಾಮದಲ್ಲಿ ಸಿಕ್ಕಿರುವಂತಹ ದೈವವಾಗಿದೆ. ಈ ದೇವತೆಯನ್ನು ಕುರಿತು ಸಂಡೂರಿನ ಶ್ರೀ ಸ್ಕಂದ ಕ್ಷೇತ್ರ ಮಹಾತ್ಮೆಯಲ್ಲಿ ಅವಳ ಸ್ವಲ್ಪ ಚರಿತ್ರೆಯು ಸಿಗುತ್ತದೆ. ಇವಳ ಬಗ್ಗೆ ಸ್ಥಳೀಯ ಪುರಾಣ ಕಟ್ಟು ಕಥೆಗಳು ಇವೆ. ಈ ದೈವವು ೩೦೦ ವರ್ಷಗಳ ಹಿಂದಿನದು. ಈ ದೇವತೆಗೆ ಮೊದಲಿನಿಂದಲೂ ಅಗಸರ ಮನೆತನದವರೇ ಪೂಜಾರಿಗಳಾಗಿದ್ದಾರೆ.

ಸ್ಥಳ ಪುರಾಣ

ಇಂದ್ರಾದಿ ದೇವತೆಗಳು ಆನಂದದಿಂದ ಲೋಹಾಚಲದಲ್ಲಿ ವಾಸಮಾಡಿಕೊಂಡಿರುವಾಗ ಒಂದು ಜಲರೂಪದಿಂದ ಭೂಲೋಕವನ್ನು ಗ್ರಾಸ ಮಾಡುತ್ತಾ ಬರುವ ಪ್ರಳಯ ಕಾಲವನ್ನು ನೋಡಿ ಇನ್ನು ಸ್ವಲ್ಪ ಕಾಲದಲ್ಲಿಯೇ ಈ ಪರ್ವತವನ್ನು ಸಹ ಇದು ನುಂಗಿ ಬಿಡುವುದೆಂದು ಭೀತಿಯಿಂದ ಸ್ವಾಮಿಗೆ ಪ್ರಾರ್ಥನೆ ಮಾಡಲು ಸ್ವಾಮಿಯು ಹುಬ್ಬು ಗಂಟಿಕ್ಕಿ ಸಿಟ್ಟಿನಿಂದ ನೋಡಿದನು. ಆಗ ಆ ಮಹಾಸ್ವಾಮಿಯ ಲಲಾಟದಿಂದ ಖಡ್ಗಾದಿ ಆಯುಧಗಳನ್ನು ಧರಿಸಿ ಚತುರ್ಭುಜಗಳಿಂದ ಯುಕ್ತವಾದ ಕೌಮಾರೀ ಶಕ್ತಿಯು ಸಿಂಹನಾದವನ್ನು ಮಾಡುತ್ತಾ

ಹೊರಟು ಸ್ವಾಮಿ ಸಮ್ಮುಖದಲ್ಲಿ ಅಖಂಡ ತಾಂಡವವನ್ನು ಮಾಡಲಾರಂಭಿಸಿದಳು. ಆಕೆಯನ್ನು ಇಂದ್ರಾದಿ ದೇವತೆಗಳು ಕೈಮುಗಿದು ಕೊಂಡು ದೇವೀ ಸೂಕ್ತದಿಂದ ಸ್ತೋತ್ರ ಮಾಡಿದರು. ಸ್ತೋತ್ರದಿಂದ ಪ್ರಸನ್ನಳಾದ ದೇವಿಯು ಮುಖ ಮುದ್ರೆಯನ್ನು ಕುರಿತು ಇಂದ್ರನು ಸಾಷ್ಟಾಂಗ ನಮಸ್ಕರಿಸಿ "ಆರ್ಯೇ, ಈ ಪ್ರಲಯನ ಔದತ್ಯವು ಅತಿಶಯವಾಗತೊಡಗಿತು. ಹೇಗಾದರೂ ಮಾಡಿ ನಮ್ಮನ್ನು ಈ ಪರ್ವತವನ್ನೂ ರಕ್ಷಣೆ ಮಾಡು" ಎಂದು ವಿನಯದಿಂದ ಬೇಡಿಕೊಂಡನು.

ಆ ಶಕ್ತಿದೇವತೆಯು ಕುಮಾರನನ್ನು ನಮಿಸಿ ಅವನ ಆಜ್ಞೆಯನ್ನು ಸ್ವೀಕರಿಸಿ ಜಲರೂಪದಿಂದ ಜಗತ್ತನ್ನು ಗ್ರಾಸಮಾಡುತ್ತಾ ಬರುತ್ತಿರುವ ಪ್ರಲಯನನ್ನು ತಡೆದು ನಾಲಿಗೆ ಚಾಚಿ ಬಂದ ಪ್ರವಾಹವನ್ನೆಲ್ಲಾ ಕುಡಿದು ಬಿಟ್ಟಳು. ಆಗ ಪ್ರಲಯನು ಭೀತನಾಗಿ ಅನನ್ಯ ಶರಣಾಗಿ ದೇವಿಗೆ ಶರಣು ಮಾಡಿ ಅಜ್ಞಾನದಿಂದ ಮಾಡಿದ ನನ್ನ ಅಪರಾಧವನ್ನು ಕ್ಷಮಿಸು ನಿನ್ನ ಕ್ಷೇತ್ರವನ್ನು ಬಿಟ್ಟು ನಾನು ಅನ್ಯತ್ರ ಹೋಗುತ್ತೇನೆ ಎಂದು ಪ್ರಾರ್ಥಿಸಿ ದೇವಿಯ ಆಜ್ಞೆಯನ್ನು ಪಡೆದು ಅಲ್ಲಿಂದ ಓಡಿಹೋದನು. ಇತ್ತ ದೇವಿಯು ಇಂದ್ರಾದಿ ಸಕಲದೇವತೆಗಳಿಂದೊಡಗೂಡಿ ಕುಮಾರನಿಗೆ ಶರಣು ಮಾಡಿ ಕೈಮುಗಿದು ಕೊಂಡು ಎದುರಿಗೆ ನಿಂತಿರಲು ಆತ್ಮಶಕ್ತಿಯನ್ನು ನೋಡಿ ಎಲೌ ಕುಮಾರಿ ನೀನು ನಿರಂತರವಾಗಿ ಈ ಕ್ಷೇತ್ರವನ್ನು ರಕ್ಷಿಸುತ್ತಾ ಇಲ್ಲಿಯೇ ವಾಸಿಸು. ನಿನ್ನ ಪೂಜೆ ಮಾಡುವ ನಾರಿಯರ ಮನಸ್ಸಿನ ಬಯಕೆಯನ್ನು ಪೂರೈಸುವವಳಾಗು ಎಂದು ಆಜ್ಞಾಪಿಸಿದನು. ಆತನ ಆಜ್ಞಾನುಸಾರವಾಗಿ ದೇವತೆಯು ಸ್ಕಂದ ಪುರದ ದಕ್ಷಿಣದ ನದಿತೀರದಲ್ಲೇ ಉಡಚಲಾಪರಮೇಶ್ವರಿ ಎಂಬ ಹೆಸರಿನಿಂದ ವಾಸಮಾಡಿಕೊಂಡು ಭಕ್ತರ ಬಯಕೆಯನ್ನು ಪೂರ್ತಿಗೊಳಿಸುತ್ತಿರುತ್ತಾಳೆ. ಇದೇ ನಂಬಿಕೆಯಿಂದ ಇಲ್ಲಿಯ ಜನಪಪದರು ಇವಳು ಉಡುಚಮ್ಮ ಎಂದು ಭಯ ಭಕ್ತಿಯಿಂದ ಪೂಜಿಸುತ್ತಾರೆ. ಹೀಗೆ ಈ ದೇವಿಗೆ ಉಡಚಲ ಎಂಬ ಹೆಸರು ಬಂತು.

ಜನಪದರ ಕಟ್ಟುಕಥೆ

ಪ್ರತಿಯೊಂದು ಗ್ರಾಮದಲ್ಲೂ ಗ್ರಾಮದೈವಗಳಿರುವಂತೆ ಸಂಡೂರು ಗ್ರಾಮದಲ್ಲಿ ಈ ಉಡುಚಲಮ್ಮ ಎನ್ನುವ ದೈವವು ಪ್ರಮುಖವಾದಂತಹ ಜನಪದರ ಇಚ್ಛೆಯುಳ್ಳಂತ ಗ್ರಾಮದೈವವಾಗಿದೆ. ಜನಪದರ ಪ್ರಕಾರ ನಮ್ಮ ಊರಿಗೆ ಕೇಡುಬಂದಾಗ ನಮ್ಮನ್ನೆಲ್ಲಾ ರಕ್ಷಣೆ ಮಾಡಿ ಊರಿಗೆ ಮಳೆ ಬೆಳೆ ತಂಪು ಸೊಂಪು ಸುಖವನ್ನು ಕೊಟ್ಟು, ನಮ್ಮನ್ನು ಹರಸಿ, ನಮ್ಮಿಂದ ಉಡಿಯನ್ನು ತುಂಬಿಸಿಕೊಳ್ಳುವ ಅಮ್ಮ ಉಡುಚಮ್ಮ ಎಂದು ಕರೆದಿದ್ದಾರೆ. ಈ ಗುಡಿಯ ಪಕ್ಕದಲ್ಲಿ ಉಡುಚಮ್ಮದೇವಿಯ ಒಂದು ಹಳ್ಳವಿದೆ. ಮೊದಲು ಆ ಹಳ್ಳದಲ್ಲಿ ಸ್ನಾನಮಾಡಿ ನಂತರ ದೇವಿಯ ದರ್ಶನ ಮಾಡುತ್ತಿದ್ದರು. ಈಗ ಸ್ನಾನಮಾಡುವಾಗ ಒಬ್ಬರಿಗೆ ಒಂದು ಸ್ತ್ರೀದೇವತೆಯ ಮುಖವಾಡವಿರುವ ಒಂದು ಬಂಡೆ ಸಿಕ್ಕಿತು. ನೀನು ನನ್ನನ್ನು ಭಯಭಕ್ತಿಯಿಂದ ಪೂಜಿಸು ಎಂದು ಕನಸಿನಲ್ಲಿ ಹೇಳಿದಂತೆ ಭಾಸವಾಯಿತು. ಹಾಗೆಯೇ ಅವನು ಆ ಬಂಡೆಯನ್ನು ತೆಗೆದು ಕೊಂಡು ಹೋಗಿ ಅದಕ್ಕೆ ಒಂದು ಚಪ್ಪರವನ್ನು ಹಾಕಿ ಪೂಜಿಸಿದ್ದರಿಂದ ಅವನಿಗೆ ಸುಖವು ಶ್ರೀಮಂತಿಕೆಯು ಬಂದಿತೆಂದು ಜನಪದರು ಹೇಳುತ್ತಾರೆ.

ಸಂಡೂರಿನ ಎಲ್ಲಾದೈವಗಳ ಆಭರಣಗಳು ಸಂಡೂರು ಸಂಸ್ಥಾನದ ಮಹಾರಾಜರ ಬಳಿಯಲ್ಲಿ ಇರುತ್ತಿದ್ದವು. ಆದರೆ ಈ ಉಡುಚಮ್ಮ ದೇವಿಯ ಆಭರಣ ಮಾತ್ರ ಇವರ ಬಳಿ ಇರುತ್ತಿದ್ದಿಲ್ಲ. ಏಕೆ ಎನ್ನುವುದಕ್ಕೆ ಈ ದೇವಿಯನ್ನೇ ಕುರಿತಾದ ಒಂದು ಸಣ್ಣ ಕಥೆಯಿದೆ. ಒಮ್ಮೆ ಮಹಾರಾಜರು ನಮ್ಮ ಮನೆಯಿಂದಲೇ ಎಲ್ಲಾ ದೈವಗಳಿಗೂ ಉತ್ಸವ ಜಾತ್ರೆಯ ಸಂದರ್ಭದಲ್ಲಿ ಆಭರಣಗಳು ಹೋಗುತ್ತವೆ. ಈ ದೇವಿಯದು ಮಾತ್ರ ಯಾಕೆ ಇಲ್ಲ ಎಂದು ಹಟ ಮಾಡುತ್ತಿದ್ದರು. ಹಿಂದಿನಿಂದಲೂ ಈ ದೇವಿಯ ಆಭರಣಗಳನ್ನು ಸ್ವಾಮಿರಾವ್ ಮನೆತನದವರು (ಕುಲಕರ್ಣಿಗಳು)

ಮನೆಯಲ್ಲಿಯೇ ಇರುತ್ತಿದ್ದವು. ಅವನ್ನು ಪೂಜಾರಿಗಳು ಮಂಗಳವಾರ, ಶುಕ್ರವಾರ ಬೆಳಗ್ಗೆ ಬಂದು ಒಯ್ದು ನಂತರ ಸಾಯಂಕಾಲ ತಂದು ಕೊಟ್ಟು ಹೋಗುವ ಪದ್ಧತಿ ಇತ್ತು. ಅದೇ ಪ್ರಕಾರ ಎಷ್ಟೋ ವರ್ಷಗಳವರೆಗೆ ನಡೆಯುತ್ತಿತ್ತು. ಆದರೆ ಮಹಾರಾಜರು ಒಮ್ಮೆ ರಾತ್ರಿ ಸ್ವಾಮಿರಾವ್ ಅವರ ಮನೆಗೆ ಹೋಗಿ ಎಲ್ಲಾ ದೈವಗಳ ಆಭರಣ ನಮ್ಮ ಮನೆಯಲ್ಲಿಯೇ ಇರುವಾಗ ಈ ದೈವದ ಆಭರಣಗಳು ನಿಮ್ಮಲ್ಲಿ ಯಾಕೆ ಎಂದು ತೆಗೆದುಕೊಂಡು ಹೋಗಿ ಮನೆಯಲ್ಲಿ ಇರಿಸಿಕೊಂಡರು. ಆ ದಿವಸವೆಲ್ಲಾ ಅವರ ರಾಣಿಗೆ ಮತ್ತು ಮಕ್ಕಳಿಗೆ ತುಂಬಾ ತೊಂದರೆಯಾಗಿ ಕನಸಿನಲ್ಲಿ ದೇವಿಯು ಬಂದು ನಾನು ಅವರ ಮನೆಯಲ್ಲಿಯೇ ಇದ್ದೇನೆ. ನೀನು ಆಭರಣಗಳನ್ನು ಅವರ ಮನೆಯಲ್ಲಿಯೇ ಕೊಡು. ಇದರಿಂದ ನಿನಗೆ ಯಾವ ತೊಂದರೆಯಾಗುವುದಿಲ್ಲ ಎಂದು ಹೇಳಿದಂತೆ ಭಾಸವಾಯಿತು. ಅದೇ ಪ್ರಕಾರ ಮಹಾರಾಜರು ರಾತ್ರಿ ಆಭರಣಗಳನ್ನು ಒಯ್ದಿದ್ದರೂ ಬೆಳಿಗ್ಗೆ ನಸುಕಿನಲ್ಲಿಯೆ ಹೋಗಿ ಕೊಟ್ಟು ಬಂದರಂತೆ. ನಂತರ ಅವರ ರಾಣಿ ಮತ್ತು ಮಕ್ಕಳು ಸುಖವಾಗಿದ್ದರು ಎಂಬುದು ಇಲ್ಲಿಯ ಜನಪದರ ಅಭಿಪ್ರಾಯ.

ಸಾಮಾನ್ಯವಾಗಿ ಎಲ್ಲಾ ದೈವಗಳಿಗೆ ಮಂಗಳವಾರ ಶುಕ್ರವಾರ ವಿಶೇಷ ಪೂಜೆಯಂತೆ ಈ ಉಡುಚಮ್ಮಗೂ ಈ ವಾರಗಳಲ್ಲಿಯೇ ವಿಶೇಷ ಪೂಜೆ ನಡೆಯುತ್ತದೆ. ಈ ದೇವಿಗೂ ಜನರು ಹರಕೆ ಹೊರುತ್ತಾರೆ. ದೀಡ ನಮಸ್ಕಾರ ಹಾಕುವುದು, ನಂದಾ ದೀಪ ಕಾಯುವುದು, ಕುಂಕುಮದ ಪೂಜೆ ಮಾಡಿಸುವುದು, ಬುತ್ತಿಪೂಜೆ ಮಾಡಿಸುವುದು, ತೊಟ್ಟಿಲು ಸೇವೆ ಮಾಡುವುದು ಹೀಗೆ ಮುಂತಾದ ಹರಕೆಗಳಿವೆ. ಈ ಹರಕೆಗಳನ್ನು ಜನರು ಜಾತ್ರೆಯ ಸಂದರ್ಭದಲ್ಲಿ ಇಲ್ಲವೆ ತಮಗೆ ಕೈಲಾದಾಗ ಮಾಡುತ್ತಾರೆ. ಈ ದೈವಕ್ಕೆ ನವರಾತ್ರಿಯಂದು ವಿಶೇಷವಾಗಿ ಪೂಜೆಯನ್ನು ಮಾಡಲಾಗುತ್ತದೆ. ಅಂದರೆ ದೇವಿಗೆ ಒಂಬತ್ತು ದಿನಗಳಲ್ಲೂ ಒಂದೊಂದು ತರಹದ ಅಲಂಕಾರವನ್ನು ಮಾಡಲಾಗುತ್ತದೆ. ಮತ್ತು ಆ ಒಂಭತ್ತು ದಿನಗಳಲ್ಲಿ ವಿಶೇಷವಾಗಿ ಸಂಡೂರಿನ ಮಹಾರಾಜರು ಮತ್ತು ರಾಣಿಯರು ಬಂದು ಹೋಗುತ್ತಾರೆ. ಕುಂಕುಮ ಪೂಜೆ ಅರಿಶಿಣ ಪೂಜೆ, ಗಂಧದ ಪೂಜೆ, ಹೂವಿನ ಪೂಜೆ, ಎಲ್ಲಾ ಹಣ್ಣುಗಳ ಪೂಜೆ, ಬುತ್ತಿಯ ಪೂಜೆ, ಎಲೆ ಪೂಜೆ, ದ್ರಾಕ್ಷಿ, ಗೋಡಂಬಿ, ಕೊಬ್ಬರಿಯಿಂದ ಅಲಂಕಾರ ಮಾಡಿರುವ ಪೂಜೆ ಹೀಗೆ ಮುಂತಾದ ವಿಶೇಷ ಪೂಜೆಯನ್ನು ಮಾಡಲಾಗುತ್ತದೆ. ಇಲ್ಲಿಯ ವಿಶೇಷತೆಯೆಂದರೆ ಜಾತ್ರೆ ಉತ್ಸವ ಸಂದರ್ಭದಲ್ಲಿರುವಂತಹುದಾಗಿದೆ. ಅಲ್ಲದೆ ಯುಗಾದಿ, ಹುಣ್ಣಿಮೆ, ಅಮವಾಸ್ಯೆ, ಸಂಕ್ರಾಂತಿ, ದೀಪಾವಳಿ ಮುಂತಾದ ಹಬ್ಬಗಳಲ್ಲಿ ವಿಶೇಷವಾದಂತಹ ಪೂಜೆ ಇರುತ್ತದೆ.

ಜಾತ್ರೆ ಉತ್ಸವಗಳು

ಮಾಘಮಾಸದ ಹೊಚ್ಚಲ ಹುಣ್ಣಿಮೆಯಲ್ಲಿ ಬರುವ ಮಂಗಳವಾರದಂದು ಈ ಜಾತ್ರೆಯನ್ನು ಮಾಡಲಾಗುತ್ತದೆ. ಈ ಜಾತ್ರೆಯನ್ನು ಒಟ್ಟು ಒಂಭತ್ತು ದಿನ ಮಾಡಲಾಗುವುದು. ಹುಣ್ಣಿಮೆಯ ಮುಂಚೆ ಅಂದರೆ ಹುಣ್ಣಿಮೆ ಬರುವುದಕ್ಕೆ ಒಂಭತ್ತು ದಿನ ಇರುವಾಗಲೇ ಶುಕ್ರವಾರದಂದು ನೋಡಿ ಅಮ್ಮನಿಗೆ ಉಡಿ ತುಂಬುವರು. ಮೊದಲಿನಿಂದಲೂ ಈ ಗ್ರಾಮ ದೈವದ ಜಾತ್ರೆಯನ್ನು ಶಾನುಭೋಗ ಮನೆತನದವರು ಹಿಂದಿನ ಪದ್ಧತಿಯಂತೆ ಮಾಡಿಕೊಂಡು ಬಂದಿದ್ದಾರೆ. ಜಾತ್ರೆಗೆಂದು ಊರಿನವರಿಂದ ಚಂದಾ ಎತ್ತಲಾಗುತ್ತದೆ. ಅಮ್ಮನ ಗುಡಿಗೆ ಸುಣ್ಣ ಬಣ್ಣ ಮಾಡುತ್ತಾರೆ. ನಂತರ ಉಡಿ ತುಂಬುವ ಕಾರ್ಯಕ್ರಮ. ಜಾತ್ರೆಯ ಪೂರ್ವದಲ್ಲಿ ಈ ಶಾನುಭೋಗ ಮನೆತನದವರು ಐದು ಮಂಗಳವಾರ ಉಪವಾಸ ಮಾಡುತ್ತಾರೆ. ಈ ಉಡಿಯ ಸಾಮಾನುಗಳನ್ನು ಮತ್ತು ಪೂಜಾ ಸಾಮಾನುಗಳನ್ನು ಸಾಯಂಕಾಲ ಶಾನುಭೋಗರ ಮನೆಯಿಂದ ಸಕಲ ವಾದ್ಯಗಳೊಂದಿಗೆ ಒಯ್ಯುತ್ತಾರೆ. ಅರಿಶಿಣ ಕುಂಕುಮ ಹೂವು ಭಂಡಾರ ಚಂದ್ರಹಾರಗಳು ಸೀರೆ ಕುಪ್ಪಸಗಳು ಕಣ ಅಕ್ಕಿ ತೆಂಗಿನಕಾಯಿ, ಕೊಬ್ಬರಿ ಬಟ್ಟಲು, ಹಸುರಿನ ಬಳೆ, ಮುಂತಾದ ಉಡಿ ತುಂಬುವ ಸಾಮಾನುಗಳನ್ನು ಒಯ್ಯುತ್ತಾರೆ. ಹೀಗೆ ಉಡಿ ತುಂಬಿ ಐದು

ದಿನಗಳ ಒಳಗೆ ಜಾತ್ರೆ ಮಾಡಬೇಕೆಂಬುದು ಇಲ್ಲಿಯ ರೂಡಿಯಾಗಿದೆ. ಅದರಂತೆ ಶುಕ್ರವಾರ ಉಡಿ ತುಂಬಿ ಬರುವ ಮಂಗಳವಾರದಂದು ಜಾತ್ರೆ ಮಾಡಲಾಗುವುದು. ಮಂಗಳವಾರದ ದಿನ ದೇವಿಗೆ ದೇವಿಯ ಆಭರಣಗಳನ್ನು ಸ್ವಾಮಿರಾವ್ ಮನೆತನದವರಿಂದ ತರುತ್ತಾರೆ. ನಂತರ ದೇವಿಗೆ ಅಲಂಕಾರ ಮಾಡಿ ಪೂಜಿಸುತ್ತಾರೆ. ಆವತ್ತಿನ ದಿನದಂದು ಎಲ್ಲರೂ ಹೂ ಹಣ್ಣು ಕಾಯಿ ಕೊಡುತ್ತಾರೆ. ನಂತರ ಮಂಗಳವಾರದ ರಾತ್ರಿ ೧೨ ಗಂಟೆ ಸಮಯದಂದು ಕೋಣದ ಬಲಿಯನ್ನು ಕೊಡಲಾಗುವುದು. ನಂತರ ಬುಧವಾರದಂದು ವಿಜೃಂಭಣೆಯಿಂದ, ಸಂತೋಷದಿಂದ ಜಾತ್ರೆ ಮಾಡಲಾಗುವುದು.

ಊರಮ್ಮ

ಸಂಡೂರಿನ ಗ್ರಾಮದೈವಗಳಲ್ಲಿ ಈ ಊರಮ್ಮ ದೈವವು ಒಂದು ಸ್ತ್ರೀ ದೈವವಾಗಿದೆ. ಈ ದೈವಕ್ಕೆ ಈಲ್ಲಿಯ ಜನರು ವಿಶೇಷವಾಗಿ ನಡೆದುಕೊಳ್ಳುತ್ತಾರೆ. ಸಾಮಾನ್ಯವಾಗಿ ಎಲ್ಲಾ ಗ್ರಾಮಗಳಲ್ಲಿ ಈ ಗ್ರಾಮದೈವಗಳು ಇರುತ್ತದೇವೆ. ಹೀಗೆ "ಊರು ಹುಟ್ಟಿದ ಕ್ಷಣವೇ ಊರಮ್ಮ ಹುಟ್ಟಿದವಳೆಂಬ ಪ್ರತೀತ ಇದೆ" ಈಕೆ ಊರಿನ ಜನರನ್ನು ಸಲಹುವ ಗ್ರಾಮದ ಅಧಿದೇವತೆಯಾದರೂ ಜನ ಜಾನುವಾರುಗಳಿಗೆ ರೋಗ ಹೋಗಿಸುವ ದೇವಿ ಎಂತಲೂ ಕರೆಯುತ್ತಾರೆ. ಪ್ರತಿಯೊಂದು ಗ್ರಾಮದಲ್ಲಿ ಊರಮ್ಮ ಇರುತ್ತಾಳೆ ಈ ದೈವವನ್ನು ಊರಮಾರಮ್ಮ, ಮಾರೆಮ್ಮ, ಗಾಳೆಮ್ಮ, ಉಗ್ರದೇವತೆ ಯಂತಲೂ ಕರೆಯುವರು. ಸಂಡೂರಿನ ಹತ್ತಿರವಿರುವ ಭುಜಂಗ ನಗರ ಈಕೆಯ ತವರುಮನೆಯೆಂದು ಸಂಡೂರು ಈಕೆಯ ಗಂಡನ ಮನೆ ಎಂದು ಇಲ್ಲಿಯ ಜನಪದರ ಅಭಿಪ್ರಾಯವಾಗಿದೆ.

ಈ ದೇವಿಗೆ ವಿಶೇಷವಾಗಿ ಮಂಗಳವಾರ, ಶುಕ್ರವಾರ ಪೂಜೆ ಮಾಡಲಾಗುವುದು. ಅಲ್ಲದೆ ದಸಾರದಲ್ಲಿ ಅಂತೂ ಈ ದೇವಿಗೆ ವಿವಿಧ ತರ ತರಹದ ಪೂಜೆಯನ್ನು ಮಾಡುವುರು. ನುತ್ತು ಆ. ೯ ನೇ ದಿನ ದೇವಿಯ ಪುರಾಣ ಓದಿ ಮುಗಿಸಿ ಮಂಗಳಾರತಿ ಮಾಡಿ ದೇವಿಯ ಹತ್ತಿರ ಬನ್ನಿ ಮುಡಿದ ನಂತರ ಊರವರೆಲ್ಲೂ ಬನ್ನಿ ಮುಡಿಯುತ್ತಾರೆ. ಇಷ್ಟೆ ಅಲ್ಲದೆ ಯುಗಾದಿ, ದೀಪಾವಳಿ, ಹುಣ್ಣಿಮೆ, ಅಮವಾಸೆಗಳಲ್ಲಿ ವಿಶೇಷ ಪೂಜೆ ಮಾಡುತ್ತಾರೆ. ಶ್ಯಾನಭೋಗದ ಮತ್ತು ಕುಲಕರ್ಣಿ ಮನೆತನದವರು ಮಂಗಳವಾರ ಶುಕ್ರವಾರ ತಪ್ಪದೇ ದೇವಿಯ ಗುಡಿಗೆ ಹೋಗುವರು ಎಂಬುದು ಇಲ್ಲಿಯ ವಾಡಿಕೆ (ಜನರ) ನಂಬಿಕೆಯಾಗಿದೆ.

ಊರನ್ನು ನೋಡಿಕೊಂಡು ಹೋಗುವ ದೇವತೆಗೆ ಊರಮ್ಮ ಎನ್ನುವರು. ಈದೇವತೆ ಒಂದು ಕುಟುಂಬಕ್ಕೆ ಸಂಬಂಧಿಸಿದವಳಾಗಿರದೇ ಇಡೀ ಊರಿನ ಸಮುದಾಯಕ್ಕೆ ಸಂಬಂಧಿಸಿದವಳಾಗಿರುವಳು. ಬಿತ್ತುವಾಗ, ಬೆಳೆ ಬಂದಾಗ, ಬೆಳೆಕೊಯ್ಯುವಾಗ, ಈ ದೇವಿಯ ಪೂಜೆಯನ್ನು ಊರಿನ ಜನರೆಲ್ಲಾ ಸೇರಿ ಮಾಡುವರು. ಸಮೃದ್ಧಿಯಾಗಿ ಮಳೆ ಬರಲಿ ಎಂದು ಆಕೆಗೆ ಅಲಂಕಾರಗೊಳಿಸುವರು. ಮೇಲ್ವರ್ಗದವರು ಆ ದೇವತೆಗೆ ಬಿತ್ತುವಾಗ ಬೆಳೆ ಕೊಯ್ಯುವಾಗ ಸಿಹಿ ಅಡುಗೆ ಮಾಡಿದರೆ, ಕೆಳವರ್ಗದವರು ಖಾರದಡುಗೆ ಮಾಡುವರು. ಮೇಲ್ವರ್ಗದವರು ಬಿತ್ತುವ ಕೂರಿಗೆಗೆ ರೇಷ್ಮೆ ಸೀರೆ ಉಡಿಸುವರು, ಕುಬಸದ ಕಣ ಹಾಕುವರು, ದಂಡೆ ಕಟ್ಟುವರು, ಚಂದ್ರ ಕುಂಕುಮ ಭಂಡಾರ ಹಚ್ಚುವರು. ಬಂಗಾರದಾಭರಣಗಳನ್ನು ಹಾಕುವರು. ಇವುಗಳ ಜೊತೆಗೆ ಸೀರೆಯಲ್ಲಿ ಏಳು ಹಿಡಿ ಅಕ್ಕಿ, ಗೋಧಿ, ಏಳು ಉತ್ತತ್ತಿ, ಏಳು ಕೊಬ್ಬರಿಗಳನ್ನು ಹಾಕಿ ಕಟ್ಟುವರು. ಹೋಳಿಗೆ ಹುಗ್ಗಿ, ಉಂಡಿ, ಹಿಡಿಪಲ್ಲೆ, ಬಾಜಿ ಮಾಡಿ ಜನರಿಗೆ ಉಣ್ಣಿಸುವರು. ಆದರೆ ಕೆಳವರ್ಗದವರಲ್ಲಿ ಈ ಸಂಪ್ರದಾಯವಿಲ್ಲ. ಅವರು ಪೂಜೆಗಾಗಿ ಊರಲ್ಲಿ ದವಸಧಾನ್ಯ, ದುಡ್ಡು ಸೆತ್ತುವರು. ಕುರಿ ಖರೀದಿ ಮಾಡುವರು. ಗುಡಿಯಲ್ಲಿರುವ ಊರಮ್ಮ ಉಗ್ರಳಾದ ಸಲುವಾಗಿ ಕೆಂಪು ಸೀರೆ ಉಡಿಸುವರು. ದಂಡೆ ಕಟ್ಟುವರು ಹರಿಸಿನ ಕುಂಕುಮ ಭಂಡಾರ ಬಳೆ ಮುತ್ತುಗಳು ಇದರ ಜೊತೆಗೆ

ಬಂಗಾರದಾಭರಣಗಳಿಂದ ಸಿಂಗರಿಸುವರು. ಉಡಿಯ ಉಡಿಯಕ್ಕಿ ಕಟ್ಟುವರು. ದೇವಿಯ ಪ್ರಮುಖ ವಾರವಾದ ಶುಕ್ರವಾರ ದಿವಸ ಇದನ್ನಾಚರಿಸುತ್ತಾ ಕುರಿಬಲಿ ಕೊಡುವರು. ಸಂಜೆ ಹೊತ್ತಿನೊಳಗಾಗಿ ಅಡಿಗೆ ಮಾಡಿ ಸಾಮೂಹಿಕವಾಗಿ ಊಟ ಮಾಡುವರು. ರೈತರು ಬಿತ್ತುವ ಬೀಜದಲ್ಲಿ ದೇವಿಯ ಭಂಡಾರ ಕೂಡಿಸುವರು. ಇದರಿಂದ ಒಳ್ಳೆಯ ಬೆಳೆ ಬರುವುದೆಂದು ಈ ಗ್ರಾಮೀಣರ ನಂಬಿಗೆಯಾಗಿದೆ.

ಊರಮ್ಮನ ಜಾತ್ರೆಯು ೩.೫.೭ ಇಲ್ಲವೆ ೧೧ ಅಸಮ ಸಂಖ್ಯಾ ವರ್ಷಗಳಲ್ಲಿ ನಿಗದಿಪಡಿಸಿರುವ ವರ್ಷದಲ್ಲೆ ಮಾತ್ರ ಜಾತ್ರೆಮಾಡುವರು. ಊರ ಎಲ್ಲಾ ಗ್ರಾಮಸ್ಥರು ಸೇರಿ ಗ್ರಾಮದ ಒಳತಿಗಾಗಿಯೇ ಆಚರಣೆ ಜರುಗಿಸುವುದಿದೆ. ಇದರಿಂದ ಇದು ಸೌಹಾರ್ದದ ಪ್ರತೀಕ ಆಚರಣೆ ಎನಿಸುತ್ತದೆ. ಸಂಡೂರಿನಲ್ಲಿ ಊರಿನ ಮಧ್ಯದಲ್ಲಿ ಈ ದೈವದ ಗುಡಿ ಇರುತ್ತದೆ. ಚಿಕ್ಕಮಕ್ಕಳಿಗೆ ಸೀತಾಳ, ಸಿಡುಬು, ದಡಾರಗಳಾಗುವುದು ಸಹಜ. ಇದರೊಂದಿಗೆ ಮಾರಿಹುಣ್ಣು, ದೊಡ್ಡಮ್ಮ (ಅಮ್ಮ), ತಟ್ಟಮ್ಮ ಆಚರಿಸುವ ದೈವವಾಗಿದೆ. ಈ ಹಿಂದೆ ಊರಿಗೆ ಪ್ಲೇಗು, ಕಾಲರಾ ಬಂದು ಅನೇಕ ಜನರು ಬಲಿಯಾಗುತ್ತಿದ್ದರು. ಇದನ್ನರಿತು ಜನಪದರು ಊರಮ್ಮನನ್ನು ಕಳಿದರೆ ರೋಗ ವಾಸಿಯಾಗುತ್ತದೆಂಬ ನಂಬಿಕೆ ಈಗಲೂ ಇದೆ. ಈ ದೈವದ ಸಂತೃಪ್ತಿಗಾಗಿ ಕುರಿ ಕೋಣ ಬಲಿಕೊಡುವುದಿದೆ. ಆದರೆ ಇಂದು ಆಧುನಿಕವಾಗಿ ದೇಶವು ಮುಂದುವರೆಯುತ್ತಿರುವುದರಿಂದ ಅನೇಕ ಗ್ರಾಮೀಣರು ಊರಿನಲ್ಲಿ ಚಿಕ್ಕಮಕ್ಕಳಿಗೆ ಅಮ್ಮ ಕಾಣಿಸಿಕೊಂಡಾಗಲೂ ಅಸ್ಪತ್ರೆಗೆ ಒಯ್ಯದೆ ಈ ಊರಿನ ಊರಮ್ಮನ ಗುಡಿಗೆ ಹೋಗಿ ಸುಂಕ ನೀಡಿ, ಕಾಯಿ ಹಣ್ಣು ಮಾಡಿ ದೇವಿಗೆ ನೈವೇದ್ಯ ಕೊಡುವುದು ವಾಡಿಕೆಯಾಗಿದೆ. ಈಗಲೂ ಈ ಪದ್ಧತಿ ಇದೆ.

ಜಾತ್ರೆಗಿಂತ ಮುಂಚೆ ದೇವಿಯ ಗುಡಿಯನ್ನೆಲ್ಲಾ ಸ್ವಚ್ಛಮಾಡಿ ಸುಣ್ಣ - ಬಣ್ಣಗಳಿಂದ ಅಲಂಕರಿಸುತ್ತಾರೆ. ಮಾವಿನ ತೋರಣ ಕಟ್ಟುತ್ತಾರೆ. ಊರಮ್ಮನನ್ನು ಕಟ್ಟಿಗೆಯ ಮೂರ್ತಿಯನ್ನು ಅಕ್ಕಸಾಲಿಗರಿಂದ (ಬಡಿಗೇರರಿಂದ) ಮಾಡಿಸುವರು. ಇಲ್ಲಿ ಇವರೇ ದೇವಿಯ ಮೂರ್ತಿಗೆ ಬಣ್ಣವನ್ನು ಬಳೆಯವುರು. ಬಣ್ಣವೆಲ್ಲವೂ ಮುಗಿದ ನಂತರ ಕಣ್ಣಿಗೆ ಬಣ್ಣ ಬಳಿಯುವಾಗ ದೇವಿಯು ಉಗ್ರವಾಗಿರುವುದರಿಂದ ಆಕೆಯ ಕಣ್ಣು ನಮ್ಮ ಮೇಲೆ ಬೀಳದಿರಲೆಂದು ಕಣ್ಣಿಗೆ ಬಣ್ಣ ಬಡಿಯುವುದು ಮುಗಿದನಂತರವೇ ಕುರಿ ಕಡಿಯುವ ರೂಢಿ ಇಲ್ಲಿ ಇದೆ. ನಂತರ ಮೆರವಣಿಗೆಯೊಂದಿಗೆ ಹೋಗಿ ಭಾವಿಯ ನೀರನ್ನು ತರುವುದಕ್ಕೆ ಗಂಗೆಗೆ ಹೋಗಿ ಬರುವುದು ಎನ್ನುವರು. ಈ ಮೆರವಣಿಗೆಯಲ್ಲಿ ಡೊಳ್ಳು ಪ್ರಮುಖ ವಾದ್ಯವಾಗಿರುತ್ತದೆ. ಇದರ ಜೊತೆಗೆ ತಮಟೆ, ಕೊಂಬು ಕಳ ಕಹಳೆ ಇತರೆ ವಾದ್ಯಗಳ ಸಮೇತ ಪಂಜನ್ನು ಹಿಡಿದುಂಕೊಂಡು ಮಡಿಯಿಂದಲೇ ಊರಿಗೆ ತೆರಳಿ ಬರುವರು. ಈ ಮಡಿ ಹಾಸುವ ಕ್ರಿಯೆಯನ್ನು ಮಡಿವಾಳರೇ ಇಲ್ಲವೆ ಹರಕೆ ಹೊತ್ತವರು ಮಾಡುತ್ತಾರೆ. ಗ್ರಾಮದೊಳಗೆ ಬಂದ ನಂತರ ಜನಪದರು ವಂಶಪರಂಪರಗತವಾಗಿ ರೂಢಿಸಿಕೊಂಡು ಬಂದಿರುವ ಪದ್ಧತಿಯಂತೆ ಶ್ಯಾನುಭೋಗ ಮನೆಗೆ ಹೋಗಿ ಪೂಜೆ ಸಾಮಾನುಗಳನ್ನು ಮತ್ತು ದೇವಿಗೆ ಉಡಿಯನ್ನು ಹಾಗೂ ಕೆಳವರ್ಗದ ಮುತ್ತೈದೆಯರಿಂದ ಆರತಿಯನ್ನು ಅದು ಮೆರವಣಿಗೆಯ ಮೂಲಕ ತರುವರು.

ಎಲ್ಲಾ ಊರಿನಲ್ಲಿರುವಂತೆ ಸಂಡೂರಿನ ಜನಪದರು ಊರಿಗೆ ದೇವಿ ಬಂದಳೆಂಬ ಸಂತಸದಿಂದ ತಮಗೆ, ತಮ್ಮ ಬೆಳೆ ಜಾನುವಾರುಗಳಿಗೆ ಒಳಿತನ್ನು ಮಾಡಲಿ ಎಂಬ ಸದುದ್ದೇಶದಿಂದ ದೇವಿಯ ಸಂತೃಪ್ತಿಗಾಗಿ ಬಲಿ ಪ್ರಕ್ರಿಯೆಯನ್ನು ಆರಂಭಿಸುವರು. ಈ ಬಲಿಯು ಕೋಣ ಇಲ್ಲವೆ ಕುರಿಯ ರೂಪದಲ್ಲಿರುತ್ತದೆ. ಒಟ್ಟಿನಲ್ಲಿ ಕೋಣವನ್ನು ಕಡಿದು ಅದರ ರಕ್ತವನ್ನು ಬೀಳಿಸದ ಮೇಲೆಯೇ ಊರಮ್ಮ ಶಾಂತಳಾದಾಳೆಂಬ ಪ್ರತೀತಿಯೂ ಇದೆ. ಈಗಲೂ ಈ

ಜಾತ್ರೆಯಲ್ಲಿ ಕೋಣಕಡಿಯುತ್ತಾರೆ. ಕೋಣ ಬಲಿ ನೀಡುವಿಕೆಯಲ್ಲಿ ಹರಿಜನರದು ಪ್ರಮುಖ ಪಾತ್ರ. ಒಂದು ವಿಸ್ಮಯದ ಸಂಗತಿ ಎಂದರೆ ಕೋಣವನ್ನು ಒಂದೇ ಏಟಿಗೆ ಕಡೆಯದಿದ್ದರೆ ಬಡಿಗೆಗಳಿಂದ ಕೋಣ ಕಡಿಯುವ ವ್ಯಕ್ತಿಗೆ ಹೋಡೆಯುವರು. ಒಂದೇ ಏಟಿಗೆ ಕಡಿದಾಕ್ಷಣವೇ ಕೆಳಗೆ ಬಿದ್ದ ರುಂಡದ ಬಾಯಿಗೆ ಬಲಗಾಲನ್ನು ಕತ್ತರಿಸಿ ಇಡುತ್ತಾರೆ. ಇದು ಒಂದು ರೀತಿಯ ತಪ್ಪೊಪ್ಪಿಗೆಯ ಸಂಕೇತವೆನಿಸುತ್ತದೆ. ಹೇಗೆಂದರೆ ಇಂದು ಯಾರೇ ಆಗಲಿ ತಪ್ಪುಕಾರ್ಯ ಎಸಗಿದಾಗ ಬಾಯಲ್ಲಿ ಬೆರಳು ಇಟ್ಟುಕೊಳ್ಳುವುದು ವಾಡಿಕೆ. ಅದರಂತೆ ಅಂತರ್ಜಾತಿ ವಿವಾಹವಾದ ಮಾದಿಗನು ತಾನು ಸುಳ್ಳು ಹೇಳಿ ವಿವಾಹವಾಗಿದ್ದಕ್ಕೆ ಮಾರಿ ಅವನು ಮೇಲೆ ಸೇಡು ತೀರಿಸಿಕೊಳ್ಳಲು ಭಯಂಕರ ರೂಪತಾಳಿ ಕೋಣನ ದೇಹದಲ್ಲಿ ಹೊಕ್ಕ ಗಂಡನನ್ನು ಕಡಿದಳೆಂಬ ಕಾರಣದಿಂದ ಇಂದಿಗೂ ಕೋಣ ಕಡಿಯುತ್ತಿರುವವರೆಂದು ತಿಳಿಯುತ್ತದೆ. ಈ ಕೋಣವೇ ಗಂಡ ಎಂದು ನಂಬುತ್ತಾ ಬಂದಿರುವುದರಿಂದ ದೇವಿಯ ಗಂಡನೇ ತೀರಿಹೋದ ಎಂಬ ಹಿನ್ನೆಲೆಯಲ್ಲಿ ದೇವಿಯ ಮೂರ್ತಿಯ ಕೊರಳಳ್ಲಿರುವ ತಾಳಿ, ಮೂಗುತಿ, ಬಳೆಗಳನ್ನು ತೆಗೆದು ರಂಡೆಯಾಗಿನ್ನಾಗಿಸುವ ಆಚರಣೆ ಮಾಡುವರು(ಅಮಂಗಳ ಕಾರ್ಯ ಮಾಡುವುದು). ಸಂಡೂರಿನಲ್ಲಿ ಕೋಣ ಕಡಿಯುವ ಕಾರ್ಯವನ್ನು ಮತ್ತು ಅಮಂಗಳ ಮಾಡುವ ಕಾರ್ಯವನ್ನು ಮಂಗಳವಾರದಂದು ಮಾಡಿ ಮುಂದೆ ಬರುವ ಶುಕ್ರವಾದಂತ ದಿವಸ ವಿವಾಹ ಮಾಡುವ ಪದ್ಧತಿ ಇದೆ. ಕೋಣ ಕಡಿದ ದಿನದಂದು ರಾತ್ರಿ ಹೊತ್ತಿನಲ್ಲಿ (೧೨ ಗಂಟೆಗೆ) ಊರಿನ ತುಂಬಾ ಸರಗ ಉಗ್ಗುವುದಕ್ಕೆ ಸಿದ್ಧತೆಗೊಳಿಸುವರು. ೨೦ ಸೇರು ಜೋಳದ ನುಚ್ಚಿನಿಂದ ಸಂಕಟಿಮಾಡಿ ಅದರಲ್ಲಿ ಕೋಣದ ಕರಳು ಹಾಗೂ ರಕ್ತ ಬೆರೆಸಿ ಹರಿಜನನೊಬ್ಬ ಪುಟ್ಟಿಯಲ್ಲಿ ಸರಗ ಹಾಕಿಕೊಂಡು ಬೆತ್ತಲೆ ಸರಗ ಚೆಲ್ಲಿ ಬರಲು ತೆರಳುವನು. ಇವನ ಜೊತೆಗೆ ಊರಿನ ಗ್ರಾಮದ ಕೆಲವರು ಹೋಗಿರುತ್ತಾರೆ. ಈ ಕಾರ್ಯವನ್ನು ಸು.೧೨ ಗಂಟೆ ಮಧ್ಯರಾತ್ರಿವೇಳೆಯಲ್ಲಿಯೇ ಮಾಡುತ್ತಾರೆ. ಏಕೆಂದರೆ ಸರಗ ಉಗ್ಗುವುದನ್ನು ಭೂತಪಿಲ್ಲೆಯನ್ನು ಯಾರೂ ನೋಡಬಾರದು. ಅದು ಅವರಿಗೆ ಅಮಂಗಳ ವಾಗುವುದು ಎಂಬ ರೂಢಿ ಇದೆ. ತಿರುವು ತಿರುವುಗಳಲ್ಲಿ ನಿಂಬಿ ಹಣ್ಣನ್ನು ಕೊಯ್ಯುವರು. ನಿಂಬೆ ಹಣ್ಣು ಬಲಿಯ ಇನ್ನೊಂದು ರೂಪವಾಗಿ ಪರಿಣಮಿಸಿದೆ.

ಈ ಕಡೆ ದೇವಿಯ ಗುಡಿಯ ಹತ್ತಿರ ಸರಗ ಚೆಲ್ಲುವ ಹೆಂಡತಿಯು ತಾಳಿ ಬಳೆಗಳನ್ನು ತೆಗದಿರಿಸಿ, ಬಿಳಿ ಸೀರೆ ಉಟ್ಟುಕೊಂಡು ಮೂಗುತಿಯನ್ನು ತಿರುಗಿಸುತ್ತಾ ಕುಳಿತಿರಬೇಕೆಂಬ ರೂಡಿಯಾಗಿರುತ್ತದೆ.(ಕಟ್ಟಳೆ ಗಳಿರುತ್ತವೆ)- ಆಗ ಮೂಗುತಿ ತನ್ನಷ್ಟಕ್ಕೆ ತಾನೇ ತಿರುಗಿಸುವಾಗ ನಿಂತರೆ ತನ್ನಗಂಡನಿಗೆ ಏನಾದರೂ ಅನಾಹುತ ಆಗಿರಬೇಕೆಂಬ ಕಲ್ಪನೆಯಿಂದ ಊರಿನ ಇತರೆ ಜನರು ಕುರಿಮರಿಯನ್ನು ತೆಗೆದುಕೊಂಡು ಹೋಗಿ ಸರಗ ಚೆಲ್ಲುವ ವ್ಯಕ್ತಿಯ ಹತ್ತಿರ ಬಂದಾಗ ಅಷ್ಟೊತಿತಿಗಾಗಲೇ ಆ ವ್ಯಕ್ತಿ ಮೂರ್ಛೆ ಬಂದು ಬಿದ್ದಿರುತ್ತಾನೆ. ಈ ರೀತಿ ಬಲಿ ನೀಡಿದ ಸ್ವಲ್ಪ ಹೊತ್ತಿಗೆ ಸಹಜ ಸ್ಥಿತಿಗೆ ಬರುತ್ತಾನೆ. ನಂತರ ಶುಕ್ರವಾರದಂದು ಅಮ್ಮನ ಹೆಸರಿನಲ್ಲಿ ಅವರಿಬ್ಬರಿಗೂ ದೇವಿ ಗುಡಿಯ ಚಪ್ಪರದಲ್ಲೆ ವಿವಾಹ ಮಾಡಲಾಗುತ್ತದೆ. ಆಗ ಅವರಿಗೆ ದವಸ-ಧಾನ್ಯ-ಉಡುಗೆ-ತೊಡುಗೆ ಹಾಗೂ ೫೦೧ ರೂಗಳನ್ನು ಕೊಡುವರು ದೇವಿಯ ನಂದಾ ದೀಪ ಕಾಯುವವರು ೯ ದಿನ ಉಪವಾಸ ಇರುತ್ತಾರೆ. ಸುಣ್ಣಗಾರ ಮನೆತನದವರು ಈ ನಂದಾ ದೀಪ ಕಾಯುವ ಸೇವೆ ಮಾಡುತ್ತಾರೆ. ದೇವಿಗೂ ತಾಳಿ, ಬಳೆಗಳನ್ನು ಅರಿಸಿನ-ಕುಂಕುಮವನ್ನು ಹಚ್ಚಿ ಅಭರಣಗಳನ್ನು ಹಾಕಿ ಮಂಗಳವನ್ನಾಗಿ ಮಾಡುವರು. ನಂತರ ಜಾತ್ರೆ ಆಚರಿಸಲಾಗುವುದು. ಜಾತ್ರೆಯಲ್ಲಿ ಹರಿಜನರ ಕಳಸ, ಗೌಡರ ಕಳಸ, ರೈತರ ಕಳಸ ಹೀಗೆ ಮುಂತಾದವುಗಳೊಂದಿಗೆ ಊರಿನ ಕುಂಬವನ್ನು ತರುವರು. ಇವೆಲ್ಲದರೊಂದಿಗೆ ದೇವಿಯ ರಥೋತ್ಸವವನ್ನು ಮಾಡುವರು. ಹೀಗೆ ಚರಗ ಚಲ್ಲುವ ಆಚರಣೆಯಲ್ಲಿ ಪಾಲ್ಗೊಂಡ ದಂಪತಿಗಳಿಗೆ ಊರಿನ ಗ್ರಾಮಸ್ಥರು ಸತ್ಕರಿಸುತ್ತಾರೆ.

ನಂತರ ಬುಧವಾರ ಸಂಜೆ ಊರಮ್ಮನನ್ನು ಗಡಿದಾಟಿಸಿ ಬರುವ ಸಿದ್ಧತೆ ಆರಂಭವಾಗುತ್ತದೆ. ಅಂದು ಪುನಃ ಗಂಗಿಗೆ ತೆರಳಿ ಹೊಸ ಮಡಿಕೆಯಲ್ಲಿ ನೀರು ತಂದು ಮಡಿ ಉಡಿಯೊಂದಿಗೆ ಮೆರವಣಿಗೆ ಮೂಲಕ ಬರುತ್ತಾರೆ. ಅಷ್ಟೊತ್ತಿಗಾಗಲೇ ದೇವಿಯ ಮೂರ್ತಿಯುಳ್ಳ ಗಾಡಿಯನ್ನು ತಯಾರಿಸುವನೆಂಬ ಪ್ರತೀತಿ ಇದೆ. ಮೂರ್ತಿಯ ಕೆಳಗೆ ಹಸಿರು ಬಟ್ಟೆ, ಹಸಿರುಬಳೆ, ನಿಂಬೆ ಹಣ್ಣು, ಬಾಳೆ ಹಣ್ಣು, ಕಸಪೊರಕೆ, ಪುಟ್ಟಿ, ಮೊರ, ಬಾದಾಮಿ ಎಲೆ, ಅಡಿಕೆ, ಅರಿಸಿಣ ಕುಂಕುಮ, ಅರಿಸಿಣದ ಕೊಂಬು ಮುಂತಾದವುಗಳನ್ನು ಏಳೇಳರಂತೆ ಇಟ್ಟು ಮೂರ್ತಿಯ ಮೇಲೆ ಕುಂಕುಮ ಚೆಲ್ಲುತ್ತಾರೆ. ಇದನ್ನು ತಿಳಿದ ಜನಪದರು ರೈತರು ಕೃಷಿ ಕೆಲಸಕ್ಕೆ ಹೋಗದೆ ದೆವಿಗೆ ಹಣ್ಣು ಹೂವು ಕೊಡುವರು. ಇಲ್ಲಿ ತಮ್ಮ ಗ್ರಾಮಕ್ಕೆ ರೋಗ-ರುಜಿನಾದಿಗಳು ಬಾರದಿರಲೆಂಬ ಆಶಯ ವ್ಯಕ್ತವಾಗುತ್ತದೆ. ಇದರೊಂದಿಗೆ ಮಾರಿಯು ರೋಗ ಉಂಟು ಮಾಡುವ ದೇವಿ ಎಂಬ ಹಿನ್ನೆಲೆಯೇ ಆಕೆಗೆ ಸಂತೃಪ್ತಿ ಪಡಿಸಬೇಕೆಂಬ ಪ್ರತೀತತೆಯಿಂದ ಕುರಿಬಲಿ ನೀಡಿ ಗಡಿದಾಟಿಸಿ ಬರುವಲ್ಲಿ ಕಾರ್ಯ ಪ್ರವೃತ್ತರಾಗುತ್ತಾರೆ. ಅಲ್ಲದೆ ಊರಮ್ಮನ ಗುಡಿಗೆ ಜನಪದರು ತಮ್ಮ ಚಿಕ್ಕಮಕ್ಕಳಿಗೆ ಅಮ್ಮ ಬಂದಂತಹ ವೇಳೆಯಲ್ಲಿ ಅವು ಇಳಿವು ಆದ ಬಳಿಕ ಸುಂಕ ನೀಡಿ ಬರುವುದು ವಾಡಿಕೆ ಇದೆ. ಅಂತೆಯೇ ಅವರು ಮೊಸರು ಅನ್ನ ಬೆರೆಸಿ ಉಂಡೆ, ಸಜ್ಜಕ, ಉಪ್ಪು, ಉಳ್ಳಾಗಡ್ಡಿ, ಬದನೆಕಾಯಿ ನೀಡಿದರೆ ಮತ್ತೊಮ್ಮೆ ಮಕ್ಕಳಿಗೆ ಅಮ್ಮ ಬರುವುದಿಲ್ಲ ಎಂಬ ನಂಬಿಕೆ ಈಗಲೂ ಇದೆ. ಇದರೊಂದಿಗೆ ಅಮ್ಮ ಬಂದ ದಿನದಂದು ಏಳು ದಿನಸಿನ ಧಾನ್ಯವನ್ನು ಬೇಯಿಸಿ ಇತರೆ ಮಕ್ಕಳಿಗೆ ನೀಡುವರು. ನಂತರ ದಿನದಂದು ದೇವಿಗೆ ಹೂ-ಹಣ್ಣು ಕೊಡುವರು. ಮೂರ್ತಿಯನ್ನು ಬಡಿಗೇರರು ಇಲ್ಲದೆ ಲಿಂಗಾಯಿತರು ಹೊತ್ತು ತರುವುದು ಕಾಣಸಿಗುತ್ತದೆ.

ಈ ಮಾದರಿಯ ಆಚರಣೆ ಈ ಗ್ರಾಮಗಳಲ್ಲಿ ವಿಶೇಷವಾಗಿ ಆಚರಿಸುವರು ಈ ಜಾತ್ರೆಯನ್ನು

೪.೨ ಪುರುಷ ದೈವಗಳು

ಗಂಡಿ ನರಸಿಂಹಸ್ವಾಮಿ

ನರಸಿಂಹಸ್ವಾಮಿಯ ಹತ್ತಿರ ಒಂದು ಹೊಂಡವಿತ್ತು. ಅಲ್ಲಿ ಗಂಗಾದೇವಿಯು ಲಕ್ಷ್ಮಿನಾರಾಯಣನನ್ನು ಕುರಿತು (ನರಸಿಂಹಸ್ವಾಮಿ) ಉಗ್ರವಾದ ತಪಸ್ಸು ಮಾಡಿದಳು. ಆಗ ನರಸಿಂಹಸ್ವಾಮಿಯು ಉಗ್ರವಾದ ರೀತಿಯಲ್ಲಿ ಪ್ರತ್ಯಕ್ಷನಾದಾಗ ಗಂಗಾದೇವಿಯು "ನಿನ್ನ ಕ್ಷೇತ್ರದ ಹತ್ತಿರ ಬರಲು ನನಗೆ ದಾರಿಯನ್ನು ಮಾಡಿಕೊಡು" ಎಂದು ಕೇಳಿದಳು. ಆಗ ನರಸಿಂಹಸ್ವಾಮಿಯು ನಡುವೆ ಇದ್ದ ಒಂದು ದೊಡ್ಡದಾದ ಬಂಡೆಯಿತ್ತು. ಅದಕ್ಕೆ ನಿನ್ನ ತೆರೆಗಳಿಂದ ಅಪ್ಪಳಿಸು, ಬಂಡೆಯು ಒಡೆಯುತ್ತದೆ ಎಂದು ದೇವರು ವತ್ತಿ ಒಡೆದನು. ಆಗ ನರಸಿಂಹಸ್ವಾಮಿಗೆ ಬಂಡಿಹೋಗಿ ಗಂಡಿ ಎಂಬ ಹೆಸರು ಬಂದಿತು. ನಂತರ ಆ ದೇವರು ಉಗ್ರವಾದರೂಪ ತಾಳಿ ರಾತ್ರಿಯೆಲ್ಲ ಕುಣಿದು - ಕುಪ್ಪಳಿಸುತ್ತಿದ್ದನು. ಇದನ್ನು ನೋಡಿದ ಜನರಿಗೆ ಭಯವಾಗುತ್ತಿತ್ತು. ಅದಕ್ಕೆ ಅಲ್ಲಿನ ಜನಪದರು ಈ ನರಸಿಂಹಸ್ವಾಮಿಯ ಜೊತೆಗೆ ಲಕ್ಷ್ಮಿಯನ್ನು ತಂದು ಮದುವೆ ಮಾಡಿದರು. ಅಂದಿನಿಂದ ಅವನ ಉಗ್ರರೂಪ ಕಡಿಮೆಯಾಗಿ ಶಾಂತನಾದನು ಎಂದು ಜನಪದರು ಹೇಳಿದ ಕತೆಯಾಗಿದೆ.

ಈ ನರಸಿಂಹ ಸ್ವಾಮಿಗೆ ಶನಿವಾರದಂದು ವಿಶೇಷ ಪೂಜೆ ನಡೆಯುತ್ತದೆ. ಅಲ್ಲದೆ ಶ್ರಾವಣ ಮಾಸದಲ್ಲಿ ಬರುವ ೪ ಶನಿವಾರದಂದು ಅತಿ ವಿಶೇಷವಾದಂತಹ ಪೂಜೆ ನಡೆಯುತ್ತದೆ. ಈ ದೈವವು ಉಗ್ರರೂಪನಾದರೂ ಬೇಡಿದವರಿಗೆ ಇಚ್ಛಿತ ಫಲ ಕೊಡುವನು ಎಂದು ಇಲ್ಲಿನ ಜನರೆಲ್ಲರೂ ವಿಶೇಷವಾದ ರೀತಿಯಲ್ಲಿ ಪುರೋ ದೈವವೆಂದು ಪೂಜಿಸುವರು.

ಜಾತ್ರೆ ಉತ್ಸವ ವಿಶೇಷತೆಗಳು

ಈ ದೈವದ ಜಾತ್ರೆಯು ಮೂರು ಇಲ್ಲವೆ ಐದು ದಿನ ನಡೆಸಲಾಗುತ್ತದೆ. ಇದು ಉಗ್ರದೈವವಾದುದರಿಂದ ಬಹಳ ಸಂಪ್ರದಾಯ ಬದ್ಧವಾಗಿ ಆಚರಣೆಯೊಂದಿಗೆ ಮಾಡಲಾಗುತ್ತದೆ. ಮೊದಲನೆಯ ದಿನ ದೈವಕ್ಕೆ ಅಭಿಷೇಕ ಪೂಜೆಯನ್ನು ಮಾಡುತ್ತಾರೆ. ಈ ಜಾತ್ರೆಯ ಸಂದರ್ಭದಲ್ಲಿ ಬ್ಯಾಟಿ ಮರದ ಮನುಷ್ಯ ಐದು ದಿನ ಕಟ್ಟಾ ಉಪವಾಸ ಮಾಡುತ್ತಾನೆ. ಅಂದರೆ ಬರಿ ಹಾಲು ಹಣ್ಣಿನಲ್ಲಿ ಇರುತ್ತಾನೆ ಮೂರನೇ ದಿನ ಗುಡಿಯ ಸುತ್ತ ಕಂಕಣವನ್ನು ಸುತ್ತಿ ಪೂಜಾರಿಯು ಕಂಕಣವನ್ನು ಕಟ್ಟುತ್ತಾರೆ. ನಾಲ್ಕನೆಯ ದಿನ ಕಲ್ಯಾಣ ಉತ್ಸವವನ್ನು ಮಾಡುತ್ತಾರೆ. ಕಲ್ಯಾಣೋತ್ಸವ ಎಂದರೆ ನಾಲ್ಕನೆಯ ದಿನದಂದು ದೇವರಿಗೆ ಅಭಿಷೇಕ ಮಾಡಿ ವಿಶೇಷ ಪೂಜೆ ಮಾಡಿ ನಂತರ ಬ್ರಾಹ್ಮಣರಿಗೆ ಊಟಕ್ಕೆ ಹಾಕಿಸುತ್ತಾರೆ. ನಂತರ ಸಾಯಂಕಾಲದಂದು ಉತ್ಸವದ ಮೂರ್ತಿಗಳನ್ನು (ಲಕ್ಷ್ಮಿ ನಾರಾಯಣ ಮೂರ್ತಿ) ಪಾಲ್ಕಿಯಲ್ಲಿ ತೆಗೆದುಕೊಂಡು ಪಾದುಕಟ್ಟೆತನಕ ಹೋಗಿ ಅಲ್ಲಿ ಪೂಜೆ ಮಾಡಿ ನಂತರ ಗುಡಿಗೆ ಬಂದು ದೇವರನ್ನು ಮಧ್ಯೆದಲ್ಲಿಟ್ಟು ಕಲ್ಯಾಣೋತ್ಸವ ಮಾಡಲಾಗುತ್ತದೆ. ಜಾತ್ರೆಯ ದಿನ ವಿಶೇಷ ಪೂಜೆಗಳಿರುತ್ತವೆ. ಮೊದಲು ದೇವರಿಗೆ ಯಥಾ ಪ್ರಕಾರ ಪಂಚಾಮೃತ, ಗಂಧದ ಅಭಿಷೇಕ ಮಾಡಿ ವಸ್ತ್ರಾಭರಣ, ಹೂಗಳಿಂದ ಅಲಂಕಾರ ಮಾಡಿ ಪೂಜಿಸಲಾಗುತ್ತದೆ. ನಂತರ ಲಕ್ಷ್ಮೀನರಸಿಂಹಸ್ವಾಮಿ ಮೂರ್ತಿಗಳನ್ನು ಪಾಲಕಿ ಉತ್ಸವದೊಂದಿಗೆ ತೇರಿನ ಹತ್ತಿರ ಕೊಂಡೊಯ್ಯಲಾಗುತ್ತದೆ. ತೇರಿನ ಮುಂದೆ ಮೂರ್ತಿಗಳನ್ನು ಇಟ್ಟು ನಂತರ ತೇರಿನ ಮುಂದೆ ಐದು ಕುಂಭಗಳನ್ನು ಪ್ರತಿಷ್ಠಾಪಿಸಲಾಗುತ್ತದೆ. ನಂತರ ಗೋಧಿ ಹಿಟ್ಟನ್ನು ಕಲಸಿ ಐದು ಸಣ್ಣ ಪ್ರಣತಿ ಒಂದು ದೊಡ್ಡ ಪ್ರಣತಿ ಮಾಡಲಾಗುತ್ತದೆ. ಹೋಮಕುಂಡದ ಸುತ್ತಲೂ ಎಂಟು ದಿಕ್ಕುಗಳಿಗೂ ಒಂದೊಂದು ಪ್ರಣತಿ ಇಟ್ಟು ಉಳಿದ ದೊಡ್ಡ ಪ್ರಣತಿಯನ್ನು ತೇರಿನ ಮುಂದೆ ಇಡಲಾಗುತ್ತದೆ. ನಂತರ ಹೋಮಕುಂಡಕ್ಕೆ ಅಳ್ಳಿಕಟ್ಟಿಗೆ, ಬನ್ನಿಕಟ್ಟಿಗೆ ಹಾಕಿ ಮಂತ್ರಗಳನ್ನು ಹೇಳುತ್ತಾ ಯಾಗವನ್ನು ಮಾಡುತ್ತಾರೆ. ರಥಕ್ಕೆ ಸುತ್ತಲೂ ಮಾವನ ಎಲೆ ಹೂವಿನಿಂದ ಅಲಂಕರಿಸಿ ಗಂಧವನ್ನು ಮತ್ತು ಕುಂಕುಮವನ್ನು ಹಚ್ಚಲಾಗುತ್ತದೆ. ಬ್ಯಾಟಿ ಮನುಷ್ಯನು ರಥದ ಮೂರ್ತಿಗಳೊಂದಿಗೆ ರಥದ ಸುತ್ತಲೂ ಐದು ಸುತ್ತು ಸುತ್ತಿ ನಂತರ ಉತ್ಸವ ಮೂರ್ತಿಗಳನ್ನು ತೇರಿನೊಳಗೆ ಇಡುತ್ತಾನೆ. ರಥವನ್ನು ಬೆಳಗಿನ ಹೊತ್ತು ನಾಲ್ಕಜ್ಜ ದೂರ ಎಳೆಯುತ್ತಾರೆ. ಅಂದರೆ ಹಸಿ ಹೊಟ್ಟೆಯಲ್ಲಿ ರಥವನ್ನು ಎಳೆಯಬೇಕೆಂಬ ಸಂಪ್ರದಾಯವಿದೆ.

ಬ್ಯಾಟಿ ಮರದ ಮನುಷಯ ರಥದ ಮುಂದೆ ನಿಂತು ಹಿಂದೆ ಸ್ಥಾಪಿಸಿರುವ ಐದು ಕುಂಭಗಳ ನೀರನ್ನು ಮತ್ತು ಕುಂಭಗಳ ಮೇಲಿರುವ ತೆಂಗಿನಕಾಯಿಗಳನ್ನು ತೆಗೆದುಕೊಂಡು ರಥದ ಒಂದೊಂದು ಗಾಲಿಗೂ ಒಂದೊಂದು ತೆಂಗಿನಕಾಯಿಯನ್ನು ಒಡೆದು ನಂತರ ರಥದೊಳಗಿರುವ ಉತ್ಸವ ಮೂರ್ತಿಯನ್ನು ಇಳಿಸಿ ಅದಕ್ಕೆ ಕುಂಭಗಳ ಮಧ್ಯದಲ್ಲಿರುವ ತೆಂಗಿನಕಾಯಿಯನ್ನು ಒಡೆಯಲಾಗುತ್ತದೆ. ಪಾಲಕಿ ಉತ್ಸವದೊಂದಿಗೆ ಪಾದಗಟ್ಟೆ ತನಕ ಹೋಗಿ ಅಲ್ಲಿ ಬಲಿಅನ್ನವನ್ನು ಹಾಕಿ ಮರಳಿ ದೇವಸ್ಥಾನಕ್ಕೆ ಬರಲಾಗುತ್ತದೆ.

ಬಲಿಯನ್ನದ ಆಚರಣೆ

ಬಲಿಯನ್ನವನ್ನು ಮೊದಲು ಕೆಂಪು ಇಲ್ಲವೆ, ಅರಿಷಿಣ ಬಣ್ಣದಲ್ಲಿ ಕಲಸಲಾಗುತ್ತದೆ. ಈ ಅನ್ನವನ್ನು ಬ್ಯಾಟಿ ಮನುಷ್ಯನೇ ಮಾಡುತ್ತಾನೆ. ಅದನ್ನು ಒಂದು ಸಣ್ಣ ಗಡಿಗೆಯಲ್ಲಿ ಮಾಡಲಾಗುತ್ತದೆ. ಆ ಅನ್ನವನ್ನು ತಂದು ಐದು ತಟ್ಟೆಯಲ್ಲಿ ಹಾಕಿ ಗಡಿಗೆ ತಟ್ಟೆ ಒಂದೊಂದು ಗಾಲಿಯ ಹತ್ತಿರ ಇಟ್ಟು ನಂತರ ಉಳಿದಿದ್ದನ್ನು ರಥದ ಮಧ್ಯದಲ್ಲಿ ಇಡಲಾಗುತ್ತದೆ. ಇವೆಲ್ಲವೂ ಜಾತ್ರೆಯ ಬೆಳಗಿನ ಆಚರಣೆಗಳಾಗಿವೆ.

ಬ್ಯಾಟಿ ಮನುಷ್ಯ

ಈ ಉತ್ಸವದ ಆಚರಣೆಯ ಅಂಗವಾಗಿ ಬ್ಯಾಟಿ ಮನುಷ್ಯನು ಪಾಲ್ಗೊಳ್ಳುವುದು ವಿಶೇಷ. ಬ್ಯಾಟಿ ಮನುಷ್ಯನಾಗುವವನು ಐದು ದಿನ ಉಪವಾಸವಿರುತ್ತಾನೆ. ಈ ಬ್ಯಾಟಿ ಮನುಷ್ಯರಾಗುವವರು ಹರಿಜನರೇ ಆಗುತ್ತಾರೆ. ಅಂದಿನ ಸಾಯಂಕಾಲದಂದು ಬ್ಯಾಟಿ ಮನುಷ್ಯನಿಗೆ ಹೊಸ ಪಂಚೆ ಉಡಿಸಿ ಅರಿಷಿಣ ಕುಂಕುಮಗಳಿಂದ ನರಸಿಂಹಸ್ವಾಮಿ ನಾಮಗಳನ್ನು ಹಾಕಿ, ನಂತರ ಅವನಿಗೆ ಲೋಭಾನ ಹಾಕಿ ದೇವರ ಖಡ್ಗವನ್ನು ಅವನ ಕೈಯಲ್ಲಿ ಕೊಡಲಾಗುತ್ತದೆ. ಆಗಲೆ ಅವನ ಮೈಯಲ್ಲಿ ದೇವರು ಬರುತ್ತಾನೆ. ನಂತರ ಅವನನ್ನು ನಾಲ್ಕು ಐದು ಜನ ಹಿಡಿದುಕೊಂಡು ದೇವರ ಗುಡಿಗೆ ಕರೆದುಕೊಂಡು ಹೋಗಿ ಪ್ರದಕ್ಷಿಣೆ ಮಾಡಿಸಿ ಭಜಂತ್ರಿಗಳ ಮೂಲಕ ಬ್ಯಾಟಿ

ಮರವನ್ನು ತರುವುದಕ್ಕೆ ಹೋಗಲಾಗುತ್ತದೆ. ಅವನು ಖಡ್ಗವನ್ನು ಹಿಡಿದುಕೊಂಡು ಜೋರಾಗಿ ಓಡುತ್ತಿರುತ್ತಾನೆ. ಅವನ ಹಿಂದೆ ಜನರು ಮತ್ತು ಜೋಗತಿಯರು ಹೋಗುತ್ತಿರುತ್ತಾರೆ. ಅವನು ಎಷ್ಟೋ ಹೊತ್ತು ಮರಕ್ಕಾಗಿ ಹುಡುಕಾಡಿ ಅವನು ಯಾವ ಮರವನ್ನು ತೋರಿಸಿ ಕೈಯಲ್ಲಿರುವ ಖಡ್ಗವನ್ನು ಅದರ ಬುಡಕ್ಕೆ ಹಾಕಿ ಗುರುತು ಮಾಡಿ ಮೂರ್ಛೆ ಹೋಗುತ್ತಾನೆ. ಜೋಗತಿಯರು ಅವನಿಗೆ ಏನೂ ಕೆಡುಕಾಗದಿರಲಿ ಎಂದು ಹಾಡುತ್ತಿರುತ್ತಾರೆ. ಅರ್ಧಗಂಟೆ ಇಲ್ಲವೆ ಮುಕ್ಕಾಲು ಗಂಟೆಯೊಳಗೆ ಆ ಬೃಹತ್ ಮರವನ್ನು ಕಿತ್ತು ಅವನನ್ನು ಆ ಬೃಹತ್ ಮರದ ಮೇಲೆ ಮಲಗಿಸಿ, ಅವನ ಬಾಯಲ್ಲಿ ಬೇವಿನ ಸೊಪ್ಪನ್ನು ಇಟ್ಟು ಮರದ ಸಮೇತ ಅವನನ್ನು ಹೊತ್ತು ತರಲಾಗುತ್ತದೆ. ಆ ರೀತಿ ಹೊತ್ತು ತರುವ ಮರವನ್ನು ಮುಟ್ಟಿದರೆ ಒಳ್ಳೆಯದಾಗುತ್ತದೆಂಬ ನಂಬಿಕೆಯಿರುವುದರಿಂದ ಜನಪದರಲ್ಲಿ ಅದನ್ನು ಮುಟ್ಟಲು ನೂಕು ನುಗ್ಗಲು ಶುರವಾಗುತ್ತದೆ. ಯಾವುದೆ ಆಸರೆಯಿಲ್ಲದೆ ಮರದ ಮೇಲೆ ಮಲಗಿದ್ದವನನ್ನು ಮರದ ಸಮೇತ ಕಡಿದಾದ ಗಂಡಿ ನರಸಿಂಹಸ್ವಾಮಿ ಗುಡಿಯ ಮೆಟ್ಟಿಲುಗಳನ್ನು ಹತ್ತುವಾಗಲು ಆ ಬ್ಯಾಟಿ ಮನುಷ್ಯನು ಕೆಳಗೆ ಬೀಳದಿರುವುದು ಸೋಜಿಗದ ಸಂಗತಿಯಾಗಿದೆ. ಹಾಗೆ ತಂದ ಅವನನ್ನು ದೇವರ ಮುಂದೆ ಮಲಗಿಸಿ ದೇವರಿಗೆ ಮಂಗಳಾರತಿ ಮಾಡಿ, ನಂತರ ಅವನಿಗೂ ಮಂಗಳಾರತಿ ಮಾಡಲಾಗುತ್ತದೆ. ಆಮೇಲೆ ದೇವರ ತೀರ್ಥವನ್ನು ಅವನ ಬಾಯಲ್ಲಿ ಹಾಕಿದಾಗ ಅವನಿಗೆ ಎಚ್ಚರವಾಗುತ್ತದೆ. ನಂತರ ಹೊರಗೆ ಕರೆತರಲಾಗುತ್ತದೆ. ಅಲ್ಲಿ ಅವನಿಗೆ ವಿಶ್ರಮಿಸಿಕೊಳ್ಳಲು ಅವಕಾಶ ಕೊಡಲಾಗುತ್ತದೆ. ನಂತರ ಉತ್ಸವ ಮೂರ್ತಿಗಳೊಂದಿಗೆ ಅವನನ್ನು ಕರೆದುಕೊಂಡು ರಥದ ಹತ್ತಿರ ಬಂದು ಉತ್ಸವ ಮೂರ್ತಿಗಳನ್ನು ಇಡುತ್ತಾರೆ. ಮೊದಲು ಪೂಜಾರಿಯು ರಥವನ್ನು ಏರುತ್ತಾನೆ. ನಂತರ ಬ್ಯಾಟಿ ಮನುಷ್ಯನು ಏರುತ್ತಾನೆ. ಆಮೇಲೆ ರಥವನ್ನು ಎಳೆಯಲಾಗುತ್ತೆದೆ.

ಶಿವಪುರ ಗುಡಿಯ ಈಶ್ವರ ದೈವ

ಸಂಡೂರು ಗ್ರಾಮದಲ್ಲಿ ಪೂರ್ವದಿಕ್ಕಿಗಿರುವ ಈ ಶಿವಪುರ ಗುಡಿಯು ಪುರಾತನವಾದದು. ಇದು ಸಂಡೂರಿನಲ್ಲೇ ಒಂದು ಸುಂದರವಾದ ದೇವಾಲಯವಾಗಿದೆ. ಈದೈವದ ಬಾಗಿಲು ಹಳೆಯ ಕಾಲದ ಚಿತ್ರಗಳಿಂದ ಕೂಡಿದೆ. ಹೊರಭಾಗದ ದ್ವಾರಗಳಲ್ಲಿ ಎರಡು ಕಲ್ಲಿನ ಆನೆಗಳಿದ್ದು ಒಳ ಭಾಗದಲ್ಲಿ ದ್ವಾರದ ಜಯವಿಜಯರೆಂಬ ದ್ವಾರ ಪಾಲಕರಿದ್ದಾರೆ. ಈಗುಡಿಯ ದೈವಗಳ ಸುತ್ತ-ಮುತ್ತ ಅನೇಕ ದೈವಗಳಿವೆ. ಅವುಗಳೆಂದರೆ, ಚಂಡಿಕೇಶ್ವರ ದೈವ, ವೆಂಕಟರಮಣ, ಲಕ್ಷ್ಮಿ ದೈವ, ಆಂಜನೆಯ ದೈವ, ದತ್ತಾತ್ರೇಯ ಪಾದಗಳಾಗಿವೆ.

ಶಿವಪುರ ಸಂಡೂರಿನಲ್ಲಿರುವ ಈ ಗುಡಿಗೆ ಶಿವಪುರ ಎಂಬ ಹೆಸರು ಬರಲು ಕಾರಣವೆಂದರೆ ಸಂಡೂರು ಮೊದಲಿನಿಂದಲೂ ರಾಜರುಗಳು ಪಾಳೆಯಗಾರರು ಆಳುತ್ತಿದ್ದ ಒಂದು ಸಂಸ್ಥಾನವಾಗಿತ್ತು. ಇದು ವಿಜಯನಗರದ ಒಂದು ಪುಟ್ಟ ಸಂಸ್ಥಾನವಾಗಿತ್ತು. ಈ ಸಂಸ್ಥಾನದ ಪಾಳೆಯಗಾರರು ವಿಜಯನಗರಕ್ಕೆ ಕಪ್ಪ ಕಾಣಿಕೆ ಕೊಡುತ್ತಿದ್ದರು. ಇಲ್ಲಿಯ ಜನ ಸುಖದಿಂದ ಜೀವನ ನಡೆಸುತ್ತಿದ್ದರು. ಹಿಂದಿನಿಂದಲೂ ಈ ಗ್ರಾಮದಲ್ಲಿ ದೈವ ನಂಬಿಕೆ ಪೂಜೆ ಗಾಢವಾಗಿತ್ತು. ಹೀಗೆ ದೈವವನ್ನೇ ನಂಬಿದ ಜನ ಅದರಲ್ಲು ಹೆಚ್ಚಾಗಿ ಈಶ್ವರ ದೇವರಿಗೆ, ವಿರೋಪಾಕ್ಷ ದೈವಕ್ಕೆ ಹೆಚ್ಚಾಗಿ ಪೂಜೆ ಮಾಡುತ್ತಿದ್ದರು. ಅವರು ೧೫ ದಿವಸಕ್ಕೊಮ್ಮೆ ಹಂಪಿವಿರೂಪಾಕ್ಷ ದೇವರಿಗೆ ಹೋಗಿ ಬರಬೇಕೆಂಬುದು ರೂಢಿಯಾಗಿತ್ತು. ಈ ಜನರಿಗೆ ಬಾರಿ ಬಾರಿಗೂ ಹಂಪೆಗೆ ಹೋಗಿ ವಿರೂಪಾಕ್ಷ ದೇವರನ್ನು ಪೂಜಿಸುವುದಕ್ಕೆ ಆಗದಿದ್ದಾಗ ಒಂದು ಪಾಳು ಗುಡಿಯಲ್ಲಿ ನಿಂತು ಈಶ್ವರ ದೈವವನ್ನು ಪೂಜಿಸಲು ಪ್ರಾರಂಭಿಸಿದರು. ಹೀಗೆ ಎಷ್ಟೊ ವರ್ಷಗಳು ಪೂಜಿಸುತ್ತಿರುವಾಗ ಅಲ್ಲಿಯ ಒಬ್ಬರಿಗೆ ಸಾಕ್ಷಾತ್ ವಿರೋಪಾಕ್ಷ ದೇವರೆ ಈಶ್ವರನ ರೂಪದಲ್ಲಿ ಪ್ರತ್ಯಕ್ಷನಾಗಿ ನಿಮಗೆ ಬಾರಿ ಬಾರಿಗೂ ಹಂಪೆಗೆ ಬರುವುದಕ್ಕೆ ತೊಂದರೆಯಾಗುತ್ತಿದೆ. ಆದ ಕಾರಣ ನಾನು ಇಲ್ಲೆ ನಲೆಸುತ್ತೇನೆ, ನನ್ನನು ಇಲ್ಲೆ ಪ್ರತಿಷ್ಠಾಪಿಸಿ ಪೂಜೆ ಮಾಡಿ ಎಂದು ಹೇಳಿ ಹೋದಂತೆ ಭಾಸವಾಯಿತು. ಆಗ ಊರಿನ ಜನರೆಲ್ಲ ಸೇರಿ ಒಂದು ಈಶ್ವರನ ಲಿಂಗವನ್ನು ತಂದು ಪ್ರತಿಷ್ಠಾಪಿಸಿ ರಾಜರಿಂದ ಲಿಂಗಕ್ಕೆ ವಿರೂಪಾಕ್ಷ ದೈವವೆಂದು ಕರೆದರು ಎಂಬುದು ಇಲ್ಲಿಯ ಜನಪದರ ಅಭಿಪ್ರಾಯವಾಗಿದೆ. ಮುಂದೆ ಇದನ್ನು ಜನಪದರು ಶಿವಪುರ ಗುಡಿ ಎಂದು ಕರೆಯುತ್ತ ಶಿವಪುರವಾಯಿತು. ಈ ಶಿವಪುರದ ಹತ್ತಿರ ಮಹಾರಾಜರು ಒಂದು ಪ್ಯಾಲೆಸ್ ಕಟ್ಟಿದಾಗ ಅದು ಶಿವಪುರ ಪ್ಯಾಲೇಸ್ ಎಂದು ರೂಢಿಗೆ ಬಂದಿತು.

ಚಂಡಿಕೇಶ್ವರ

ಈತನು ಶಿವನ ಮಹಾಭಕ್ತ. ಇವನು ಶಿವನನ್ನು ಒಲಿಸಿಕೊಳ್ಳುವುದಕ್ಕಾಗಿ ಬರಿಮ್ಮೆಯಲ್ಲಿ ತಪಸ್ಸನ್ನು ಮಾಡುತ್ತಾನೆ. ಆಗ ಶಿವನು ಪ್ರತ್ಯಕ್ಷನಾಗಿ ಅವನಿಗೆ ದಾರದ ರೂಪದಲ್ಲಿ ಅವನ ಮಾನವನ್ನು ಮುಚ್ಚುತ್ತಾನೆ. ಅದಕ್ಕಾಗಿ ಈ ದೇವರಿಗೆ ಯಾರೇ ಭಕ್ತರು ಬಂದರು ತಮ್ಮ ಬಟ್ಟೆಯಲ್ಲಿನ ಒಂದು ದಾರವನ್ನು ತೆಗೆದು ಹಾಕಿದರೆ ಚಂಡಿಕೇಶ್ವರನು ತಮ್ಮ ಮಾನವನ್ನು ಕಾಪಾಡುತ್ತಾನೆ. ಎಂಬ ಪ್ರತೀತಿ ಇದೆ. ಹೀಗೆ ಈ ದೇವತೆಯಿಂದಲೆ (ಉತ್ರಯ) ಬಟ್ಟೆ ಎಂಬುದು ಬಂದುದಾಗಿ ಎಂದು ಹೇಳುತ್ತಾರೆ. ಇದನ್ನು ದಕ್ಷಿಣ ಮೂರ್ತಿ ಎನ್ನುವರು. ಈ ದೈವದ ದಕ್ಷಿಣಕ್ಕೆ ವೆಂಕಟರಮಣನ ದೇವಸ್ಥಾನವನ್ನು ಕಟ್ಟಲಾಗಿದೆ. ಏಕೆಂದರೆ ಇದ್ದ ಜಾಗದಲ್ಲಿ ಹರಿಯು ಇರುಬಾರದೆಂಬುದು ನಂಬಿಕೆ ಇದೆ. ಆದರೆ ಇದರಲ್ಲಿ ಹರನ ಗೆಳೆಯನಾಗಿ ಹರಿಯು ಇಲ್ಲಿ ಬಂದು ನೆಲಸಿದ್ದರು ಎಂದು ಹೇಳುತ್ತಾನೆ. ಅಂದರೆ ಇಲ್ಲಿ ದೈವ ಮತ್ತು ಬ್ರಾಹ್ಮಣರಲ್ಲಿ ಐಕ್ಯತೆಯು ಭಾವನೆ ಬರಬೇಕೆಂಬುದು ಅವರಲ್ಲಿತ್ತು. ಹಿಂದಿನಿಂದಲೂ ಇಲ್ಲಿಯ ಜನಪದರಲ್ಲಿ ಜಾತಿಗಲಭೆಯಾಗಬಾರದೆಂಬುದಕ್ಕೆ ಹರಿ-ಹರನನ್ನು ಪೂಜಿಸುತ್ತಾರೆ. ಮಾಘಮಾಸದ ಭಾರತ ಹುಣ್ಣಿಮೆಯಲ್ಲಿ ಈ ಶಿವಪುರ ಗುಡಿಯ ಜಾತ್ರೆಯು ನಡೆಯುತ್ತದೆ. ಈ ಜಾತ್ರೆಯನ್ನು ೯ ದಿನ ನಡೆಸಲಾಗುತ್ತದೆ.

ಜಾತ್ರೆ ಉತ್ಸವ ವಿಶೇಷ ಪೂಜೆಗಳು

ಮಾಘಮಾಸದ ಭಾರತ ಹುಣ್ಣಿಮೆಯಲ್ಲಿ ಈ ದೈವದ ಜಾತ್ರೆಯನ್ನು ಒಂಭತ್ತುದಿನ ಮಾಡಲಾಗುತ್ತದೆ. ಅಂದರೆ ಪಂಚಾಂಗದ ಪ್ರಕಾರ, (ವತಿಗೆ ಕೇಳಿಸುವುದು) ಮಾಘಶುದ್ಧನವಮಿಯಿಂದ ಮಾಘಬಹುಳ ಬಿದಿಗಿಯವರೆಗೆ ಈ ಜಾತ್ರೆ ಉತ್ಸವಗಳು ನಡೆಯುತ್ತವೆ. (ನವಮಿ, ದಶಮಿ, ಏಕಾದಶಿ, ದ್ವಾದಶಿ, ತ್ರಯೋದಶಿ, ಚತುರ್ದಶಿ, ಪೌರ್ಣಿಮ, ಪಾಡ್ಯ, ಬಿದಿಗೆ) ಈ ಒಂಭತ್ತು ದಿನಗಳಲ್ಲಿ ಈ ಜಾತ್ರೆ ಬಹಳ ವಿಜೃಂಭಣೆ ವೈಭವದಿಂದ ಎಲ್ಲಾ ಜನರ ಒಮ್ಮತದಿಂದ ನಡೆಯುತ್ತದೆ.

ಮೊದಲನೆಯ ದಿನ ಅಂದರೆ ನವಮಿಯ ದಿನ ಈಶ್ವರ ದೈವಕ್ಕೆ ಅಭಿಷೇಕ ಮಾಡಲಾಗುತ್ತದೆ. ಆಮೇಲೆ ಹೂಗಳಿಂದ ಚೆನ್ನಾಗಿ ಅಲಂಕಾರ ಮಾಡಲಾಗುತ್ತದೆ. ಆ ದೈವವನ್ನು ಪೂಜೆ ಮಾಡುವ ಪೂಜಾರಿಯನ್ನೇ ದೈವಸಮಾನವೆಂದು ತಿಳಿದು ಕಂಕಣವನ್ನು ಕಟ್ಟಲಾಗುತ್ತದೆ. ಇಪ್ಪತ್ತೇಳು ಗಣಗಳು ಮತ್ತು ಎಂಟು ಗಡಿಗೆಯಲ್ಲಿ ಸಸಿಗಳನ್ನು ಹಾಕಿ ಮಧ್ಯಕುಂಭವನ್ನು ಇಟ್ಟು ಪೂಜಿಸುತ್ತಾರೆ. ಈ ಎಂಟು ಸಸಿಗಳನ್ನು ಪೂಜಿಸುವುದೇ ಇಲ್ಲಿಯ ವಿಶೇಷ. ಏಕೆಂದರೆ, ಎಂಟುದಿಕ್ಕುಗಳಿಗೂ ಈ ಸಸಿಗಳನ್ನು ಇಡಲಾಗುತ್ತದೆ. ಯಾವ ದಿಕ್ಕಿನಲ್ಲಿರುವ ಸಸಿ ಚೆನ್ನಾಗಿ ಬೆಳೆಯುತ್ತದೆಯೋ ಆ ಊರು ಚೆನ್ನಾಗಿ ಅಭಿವೃದ್ಧಿಯಾಗುತ್ತದೆ ಎಂಬುದು ಜನಪದರ ನಂಬಿಕೆ. ನಂತರ ಸೊಂಡೂರು ಮಹಾರಾಜರಿಂದ ಧ್ವಜಾರೋಹಣ ಮಾಡಲಾಗುತ್ತದೆ. ಹಿಂದೆ ಈ ಧ್ವಜಾರೋಹಣ ನೋಡಲು ಊರಿನ ಜನರೆಲ್ಲರೂ ಬರುತ್ತಿದ್ದರು. ಆದರೆ ಈಗೀಗ ಆಧುನಿಕತೆಯ ಪ್ರಭಾವದಿಂದ ಇದರ ಆಕರ್ಷಣೆ ಅಷ್ಟಾಗಿಲ್ಲ.

ದಿಗ್ಬಂಧನ ಪೂಜೆ

ಅಂದರೆ ದೇವರಿಗೆ ಅಭಿಷೇಕ ಮಾಡಿ ನಂತರ ಪೂಜಾರಿಗೆ ಕಂಕಣವನ್ನು ಕಟ್ಟುವ ಮುನ್ನ ಗುಡಿಯ ಮುಂದೆ ಮದುವೆ ಚಪ್ಪರವನ್ನು ಹಾಕಿ ಆಚಪ್ಪರದ ಪೂಜೆಯನ್ನು ಮಾಡಿ ನಂತರ ಚಪ್ಪರದಿಂದ ಹಿಡಿದು ಗುಡಿಯ ಸುತ್ತ ಮೂರು ಅಥವಾ ಆರು ಅಥವಾ ಒಂಭತ್ತು ಎಳೆ ದಾರವನ್ನು ಸುತ್ತಿ ದಿಗ್ಬಂಧನ ಪೂಜೆ ಮಾಡಲಾಗುತ್ತದೆ.

ಬಲಿಪೂಜೆ

ಅಂದರೆ ಈ ದೈವಕ್ಕೆ ಯಥಾಪ್ರಕಾರ ಪೂಜೆಮಾಡಿದ ನಂತರ ಪೂಜಾರಿಯು ವಧ್ಯೆ ಬಟ್ಟೆಯನ್ನು ಉಟ್ಟುಕೊಂಡು ಒಂದು ಪಾತ್ರೆಯಲ್ಲಿ ಅನ್ನವನ್ನು ಮಾಡಿ ಅದಕ್ಕೆ ಕುಂಕುಮವನ್ನು ಹಾಕಿ ಕಲೆಸಿ (ಕೆಂಪು ಬಣ್ಣ ಬರುವುದಕ್ಕೆ) ಎಂಟು ದಿಕ್ಕುಗಳಿಗೂ ಈಗಲೇ ಹಾಕಿ ಬರುತ್ತಾರೆ. ಇದಕ್ಕೆ ಬಲಿ ಪೂಜೆ ಅಥವಾ ದಿಗ್ಬಲಿ ಪೂಜೆ ಮಾಡುವುದು ಎನ್ನುತ್ತಾರೆ. ಹಿಂದೆ ಈ ಬಲಿ ಪೂಜೆಗಳ ಕೋಣ ಕುರಿಗಳ ಮೂಲಕ ನಡೆಯುತ್ತಿತ್ತು ಆದರೆ ಈಗ ಪ್ರಾಣಿ ಬಲಿ ಮಾಡಬಾರದು ಎಂಬುದರಿಂದ ಅನ್ನದ ಬಲಿಯನ್ನು ಕೊಡಲಾಗುತ್ತದೆ. ನಂತರ ದೇವರಿಗೆ ಆರತಿ ಮಾಡಿ ನೈವೇದ್ಯ ಮಾಡುಲಾಗುತ್ತದೆ.

ಎರಡನೇ ದಿನ ಅಂದರೆ ದಶಮಿ ಇಂದ ಆರನೇ ದಿನದವರೆಗೆ ಚತುರ್ದಶಿ ವರೆಗೆ ದೇವರಿಗೆ ಅಭಿಷೇಕ ಮಾಡಿ ಹೂವಿನ ಅಲಂಕಾರ ಮಾಡಲಾಗುತ್ತದೆ. ಕುಂಭಗಳ ಪೂಜೆಯನ್ನು ಮಾಡಲಾಗುತ್ತದೆ.

ಆರನೇ ದಿನ ಅಂದರೆ ಚತುರ್ದಶಿಯ ದಿನ ದೇವರಿಗೆ ಅಭಿಷೇಕ ಮಾಡಿ ನಂತರ ಬಲಿ ಪೂಜೆ ಮಾಡಿ ನಂತರ ಬ್ರಾಹ್ಮಣರಿಗೆ ಊಟಕ್ಕೆ ಹಾಕಿಸುತ್ತಾರೆ. ಅಂದಿನ ಸಾಯಕಾಲ ಕಲ್ಯಾಣ ಉತ್ಸವವನ್ನು ಮಾಡಲಾಗುತ್ತದೆ.

ಏಳನೇ ದಿನ ಅಂದರೆ ಪೌರ್ಣಿಮ ದಿನ ಆ ದೈವದ ಜಾತ್ರೆಯನ್ನು ಮಾಡಲಾಗುವುದು. ಪ್ರತಿದಿನದಂತೆ ಜಾತ್ರೆಯ ದಿನವೂ ಕೂಡ ದೇವರಿಗೆ ಅಭಿಷೇಕವನ್ನು ಜೊತೆಗೆ ಗಂಧದ ಅಭಿಷೇಕವನ್ನು ಮತ್ತು ಹೂವಿನಿಂದ ಅಲಂಕರಿಸಿ ಉತ್ಸವದ ಮೂರ್ತಿಗಳನ್ನು ಪೂಜಿಸಲಾಗುತ್ತದೆ. ರಥವನ್ನು ಚೆನ್ನಾಗಿ ಶೃಂಗರಿಸಿ ಹೂವಿನ ಅಲಂಕಾರವನ್ನು ಮಾಡಿರುತ್ತಾರೆ. ನಂತರ ಈ ಉತ್ಸವದ ಮೂರ್ತಿಗಳನ್ನು ತೆಗೆದುಕೊಂಡು ರಥದ ಹತ್ತಿರ ಬಂದು ಹೋಮವನ್ನು ಮಾಡಲಾಗುತ್ತದೆ. ನಂತರ ಮೂರ್ತಿಗಳನ್ನು ಹಿಡಿದಿಕೊಂಡು ರಥದ ಸುತ್ತ ಐದು ಸುತ್ತು ತಿರುಗಿ ನಂತರ ಆ ಮೂರ್ತಿಗಳನ್ನು ರಥದೊಳಗೆ ಕೂಡಿಸಿ ರಥವನ್ನು ಸ್ವಲ್ಪ ಮುಂದಕ್ಕೆ ಎಳೆಯುತ್ತಾರೆ. ಇದಕ್ಕೆ ಮಡಿ ರಥ ಎನ್ನಲಾಗುತ್ತದೆ. ನಿರಾಹಾರವಾಗಿ ರಥ ಎಳೆಯುತ್ತಾರೆ. ನಂತರ ಸಾಯಂಕಾಲ ಅಂದು ಗ್ರಾಮಸ್ಥರು ಸಂಡೂರು ಮಹಾರಾಜರು ಹಾಗೂ ಊರಿನ ಗ್ರಾಮಸ್ಥರು ಒಮ್ಮತದಿಂದ ಸೇರಿಕೊಂಡು ಮೆರವಣಿಗೆ ಮೂಲಕ ವಿಜೃಂಭಣೆಯಿಂದ ರಥವನ್ನು ಎಳೆಯಲಾಗುತ್ತದೆ. ಇದನ್ನು ಬ್ರಹ್ಮೋತ್ಸವ ಎನ್ನುತ್ತಾರೆ.

ಕಡುಬಿನ ಕಾಳಗ

ಎಂಟನೇ ದಿನ ಅಂದರೆ ಪಾಡ್ಯದಿನ ದೇವರಿಗೆ ಅಭಿಷೇಕ ಮಾಡಿ ಕಡುಬಿನ ಕಾಳಗದ ಪೂಜೆ ಅವತ್ತಿನ ವಿಶೇಷ ಪೂಜೆಯಾಗಿರುತ್ತದೆ.

ಕಡುಬಿನ ಕಾಳಗ ಎಂದರೆ ರಥೋತ್ಸವದ ಮರುದಿನ ಈಶ್ವರ ಬೆಳಗ್ಗೆ ಎದ್ದು ಪಾರ್ವತಿಗೆ ಹೇಳದೆ ಬೇಟೆಗೆ ಹೋಗುತ್ತಾನೆ. ಪಾರ್ವತಿಯು ಎಲ್ಲಾಕಡೆ ಹುಡುಕುತ್ತಾಳೆ. ನಂತರ ಈಶ್ವರ ಸಾಯಂಕಾಲ ಬೇಟೆ ಮುಗಿಸಿಕೊಂಡು ಬಂದಾಗ ಪಾರ್ವತಿಯನ್ನು ಬಾಗಿಲು ತೆಗೆ ಎನ್ನುತ್ತಾನೆ. ಆಗ ಪಾರ್ವತಿಯು "ನೀನು ಯಾರು ಎಂದು ಕೇಳಿದಾಗ ನಾನು ಕಗ ವಾಹನ ಎನ್ನುತ್ತಾನೆ. ಕಗ ಅಂದರೆ ಕಾಗೆ, ಕಾಗ ವಾಹನ ನಾದವನು ಶನಿ ದೇವರು ಇಲ್ಲಿ ಬರುವುದಿಲ್ಲವೆಂದು ಬಾಗಿಲು ತೆರೆಯುವುದಿಲ್ಲ. ಹಾಗೆ ಗರುಡ ವಾಹನ ವಿಷ್ಣು ದೇವರು, ಸರ್ಪ ವಾಹನ ಅನಂತಶಯನ ಅಶ್ವ ವಾಹನ, ಗಜ ವಾಹನ, ಹೀಗೆ ಇತ್ಯಾದಿಯಾಗಿ ಈಶ್ವರನು ಬಂದಿದ್ದೇನೆ ಎಂದು ಹೇಳಿದಾಗ ಪಾರ್ವತಿಯು ಬಾಗಿಲು ತೆರೆಯುವುದಿಲ್ಲ. ನಂತರ ಅವನು ನಾನೇ ನಂದೀಶ ಬಂದಿದ್ದೇನೆ ಎಂದಾಗ ಗಂಟೆ, ಚಾಟಿ, ಡಮರುಗ ಬಾರಿಸುವುದನ್ನು ಕೇಳಿ ಪಾರ್ವತಿಯು ಈಶ್ವರನೇ ಬಂದಿದ್ದಾನೆ ಎಂದು ಸಂತೋಷಗೊಂಡು ಕಡುಬಿನ ಅಡುಗೆ ಮಾಡಿ ಊಟಕ್ಕೆ ಹಾಕುತ್ತಾಳೆ." ಎಂಬುದು ಜನಪದರ ನಂಬಿಕೆಯಾಗಿ ಹೀಗೆ ಜಾತ್ರೆಯ ಮರುದಿನ ಸಂಡೂರು ಗ್ರಾಮಸ್ಥರು ಕಡುಬಿನ ಅಡುಗೆ ಮಾಡಿ ಈಶ್ವರನಿಗೆ ನೈವೇಧ್ಯ ಮಾಡುತ್ತಾರೆ. ಇದು ಇಲ್ಲಿಯ ಜನರ ರೂಢಿಯಾಗಿದೆ.

ಒಂಭತ್ತನೆಯ ದಿನ ಅಂದರೆ ಬಿದಗಿ ದಿನ ಗುಡಿಯ ಸುತ್ತಾ ಸುತ್ತಿರುವ ಕಂಕಣ ರೂಪದ ದಾರವನ್ನು ಬಿಚ್ಚುತ್ತಾರೆ. ಮತ್ತು ಪೂಜಾರಿ ಕೈಯಲ್ಲಿರುವ ಕಂಕಣವನ್ನು ಬಿಚ್ಚುತ್ತಾರೆ.

ಈ ದೈವದ ವಿಶೇಷ ಪೂಜೆಗಳೆಂದರೆ ಇದು ಹೆಸರೆ ಸೂಚಿಸುವಂತೆ ಈಶ್ವರ ದೈವವಾದುದರಿಂದ ಸೋಮವಾರ ವಿಶೇಷಪೂಜೆ ಮತ್ತು ಭಾರತ ಹುಣ್ಣಿಮೆಯಲ್ಲಿ ವಿಶೇಷ ಪೂಜೆ ಹಾಗೂ ಶಿವರಾತ್ರಿ ಎಂದು 'ಯಾಮ ಪೂಜೆ' ಮಾಡಲಾಗುತ್ತದೆ. ಯಾಮ ಪೂಜೆ ಎಂದರೆ ಒಂದು ದಿನಕ್ಕೆ ಎಂಟು ಯಾಮಗಳಿದ್ದು ಒಂದು ಯಾಮಕ್ಕೆ ಮೂರು ತಾಸು ಬೇಕು. ಇದರಲ್ಲಿ ಈ ದೈವಕ್ಕೆ ನಾಲ್ಕು ಯಾಮ ಪೂಜೆಯನ್ನು ಶಿವರಾತ್ರಿ ಹಬ್ಬದಂದು ರಾತ್ರಿ ವೇಳೆಯಲ್ಲಿ ಮಾಡಲಾಗುವುದು. ನಂತರ ಬೆಳಗ್ಗೆ ಸಿಹಿ ಅಡಿಗೆ ಮಾಡಿ ಬ್ರಾಹ್ಮಣರಿಗೆ ಊಟಕ್ಕೆ ಹಾಕುತ್ತಾರೆ.

ಮನುಷ್ಯ ಬುಡಕಟ್ಟನವನಿದ್ದಾಗ ಕೈತೇರು, ಕಲೆ ತೇರು, ಗ್ರಾಮದವನಾದಾಗ ಬುಟ್ಟಿ ತೇರು, ಬಂಡಿ ತೇರು, ಆದಂತೆ ನಗರ ಮಾನವನಾದಾಗ ರಥದ ತೇರು ಬಂತು ಇಂದಿಗೂ ಇವೆಲ್ಲವೂ ಇರಲು ಇವುಗಳಲ್ಲಿ ಜನ ಇಟ್ಟಿಂತ ಶ್ರದ್ಧೆ ವಿಶ್ವಾಸ ಕಾರಣವಾಗಿದೆ. ಮನುಷ್ಯನೆಷ್ಟೆ ಬಾಹ್ಯ ದಲ್ಲಿ ಆಧುನಿಕತೆ ಸ್ವೀಕರಿಸಿದರು ಅಂತರಗದಲ್ಲಿ ಅವನು ತನ್ನ ಹಿಂದಿನ ನಂಬಿಕೆ ಸಂಪ್ರದಾಯ ಆಚರಣೆ ಭಕ್ತಿ ಶ್ರದ್ಧೆಯನ್ನು ಬಿಟ್ಟುಕೊಡಲು ತಯಾರಿಲ್ಲವೆಂಬುದು ದೈವಗಳ

ಉತ್ಸವದಲ್ಲಿ ರಥದ ಸಂಪ್ರದಾಯಗಳಲ್ಲಿ ಕಾಣಿಸಿಗುತ್ತದೆ.

ಗಂಡಿ ನರಸಿಂಹಸ್ವಾಮಿ ಸಂಡೂರು

ಜಾತ್ರೆ ಉತ್ಸವ ವಿಶೇಷತೆಗಳು

ಈ ದೈವದ ಜಾತ್ರೆಯು ಮೂರು ಇಲ್ಲವೆ ಐದು ದಿನ ನಡೆಸಲಾಗುತ್ತದೆ. ಇದು ಉಗ್ರದೈವವಾದುದರಿಂದ ಬಹಳ ಸಂಪ್ರದಾಯ ಬದ್ಧವಾಗಿ ಆಚರಣೆಯೊಂದಿಗೆ ಮಾಡಲಾಗುತ್ತದೆ. ಮೊದಲನೆಯ ದಿನ ದೈವಕ್ಕೆ ಅಭಿಷೇಕ ಪೂಜೆಯನ್ನು ಮಾಡುತ್ತಾರೆ. ಈ ಜಾತ್ರೆಯ ಸಂದರ್ಭದಲ್ಲಿ ಬ್ಯಾಟಿ ಮರದ ಮನುಷ್ಯ ಐದು ದಿನ ಕಟ್ಟಾ ಉಪವಾಸ ಮಾಡುತ್ತಾನೆ. ಅಂದರೆ ಬರಿ ಹಾಲು ಹಣ್ಣಿನಲ್ಲಿ ಇರುತ್ತಾನೆ ಮೂರನೇ ದಿನ ಗುಡಿಯ ಸುತ್ತ ಕಂಕಣವನ್ನು ಸುತ್ತಿ ಪೂಜಾರಿಯು ಕಂಕಣವನ್ನು ಕಟ್ಟುತ್ತಾರೆ. ನಾಲ್ಕನೆಯ ದಿನ ಕಲ್ಯಾಣ ಉತ್ಸವವನ್ನು ಮಾಡುತ್ತಾರೆ. ಕಲ್ಯಾಣ್ಯೋತ್ಸವ ಎಂದರೆ ನಾಲ್ಕನೆಯ ದಿನದಂದು ದೇವರಿಗೆ ಅಭಿಷೇಕ ಮಾಡಿ ವಿಶೇಷ ಪೂಜೆ ಮಾಡಿ ನಂತರ ಬ್ರಾಹ್ಮಣರಿಗೆ ಊಟಕ್ಕೆ ಹಾಕಿಸುತ್ತಾರೆ. ನಂತರ ಸಾಯಂಕಾಲದಂದು ಉತ್ಸವದ ಮೂರ್ತಿಗಳನ್ನು (ಲಕ್ಷ್ಮಿ ನಾರಾಯಣ ಮೂರ್ತಿ) ಪಾಲ್ಕಿಯಲ್ಲಿ ತೆಗೆದುಕೊಂಡು ಪಾದುಕಟ್ಟೆತನಕ ಹೋಗಿ ಅಲ್ಲಿ ಪೂಜೆ ಮಾಡಿ ನಂತರ ಗುಡಿಗೆ ಬಂದು ದೇವರನ್ನು ಮಧ್ಯೆದಲ್ಲಿಟ್ಟು ಕಲ್ಯಾಣ್ಯೋತ್ಸವ ಮಾಡಲಾಗುತ್ತದೆ. ಅಂದರೆ ಪೂಜಾರಿ ಮನೆತನದವರು ಲಕ್ಷ್ಮಿ ದೈವದ ಕಡೆಗಾದರೆ ಮೂರು ನಾಮದ ಮನೆತನದವರು ನರಸಿಂಹಸ್ವಾಮಿಯ ಕಡೆಗಾಗುತ್ತಾರೆ.

ತಾರಕೇಶ್ವರ ದೈವ

ಸಂಡೂರು ಪರಿಸರದಲ್ಲಿ ಕಂಡುಬರುವ ಈ ದೈವವು ಅತ್ಯಂತ ಪ್ರಾಚೀನವಾದದ್ದು. ತಾರಕ ರಾಕ್ಷಸನನ್ನು ಕುಮಾರಸ್ವಾಮಿಯು ಸಂಹಾರ ಮಾಡದ್ದರಿಂದ ಅವನಿಗೆ ತಾರಕೇಶ್ವರ ಎಂಬ ಹೆಸರು ಬಂತು. ತಾರಕೇಶ್ವರ ದೈವವನ್ನು ಕುರಿತಾದ ಕಥೆಯೊಂದು ಹೀಗಿದೆ. ಬ್ರಹ್ಮ, ವಿಷ್ಣು, ಮೊದಲಾದ ದೇವತೆಗಳಿಂದ ಸ್ತುತಿ ಮಾಡಿಸಿಕೊಂಡು ಆ ದುಷ್ಟ ತಾರಕಾಸುರನ ವಧಾರ್ಥವಾಗಿ ಶ್ರೀಕಾರ್ತಿಕೇಯನು ಎಲ್ಲಾ ದೇವತೆಗಳನ್ನು ಹಾಗು ತನ್ನ ಸೈನ್ಯವನ್ನು ಸಂಗಡ ಕರೆದುಕೊಂಡು ಲೋಹಾಚಲದಿಂದ ಹೊರಟು ಆ ದಾನವ ರಾಜನಾದ ತಾರಕಾಸುರನ ರಾಜಧಾನಿಯಾದ ಮಾಯಾಪುರಿಗೆ ನಡೆದನು. ದೇವ ಸೈನ್ಯವು ಮಾಯಾಪುರಿಯ ಸಮೀಪಕ್ಕೆ ಬರಲು ಯೋಧ್ಯಗಳ ವೀರ ಧ್ವನಿಯು ಭೇರಿ ಪಟಹ ಮುಂತಾದ ರಣವಾದ್ಯಗಳ ಕರ್ಣಕಠೋರವಾದ ಧ್ವನಿಯು ಮಾಯಾಪುರಿಯನ್ನು ವ್ಯಾಪಿಸಿತು. ಆ ಧ್ವನಿಯನ್ನು ಕೇಳಿ ತಾರಕಾಸುರನು ಕ್ರೋಧಾಗ್ನಿಯಿಂದ ತಪ್ತನಾಗಿ ತನ್ನ ಚತುರಂಗ ಬಲ ಸಮೇತನಾಗಿ ಸೇನಾ ಪತಿಯಿಂದೊಡಗೂಡಿ ರಣಭೂಮಿಗೆ ಆಗಮಿಸಿದನು. ಉಭಯ ಸೈನ್ಯಗಳ ಕೋಲಾಹಲ ಧ್ವನಿಯು ವೀರಭಟರ ಸಿಂಹನಾದವು ಧನುಷ್ಟಂಕಾರಗಳ ಶಬ್ದವು ಮಾಯಾಪುರಿಯ ಜನರ ಹೃದಯಗಳನ್ನು ವಿದಾರಿಸಿತು. ಉಭಯರಲ್ಲಿಯೂ ತುಮುಲ ಸಂಗ್ರಾಮವು ನಡೆಯಿತು. ದೈತ್ಯರಾಜನು ಕೋಪಗೊಂಡು ದೇವತೆಗಳ ಮೇಲೆ ಬಾಣಗಳ ಮಳೆಯನ್ನೇ ಸುರಿಸಿದನು. ಅದನ್ನು ಕಂಡು ಮಹಾ ಸ್ವಾಮಿ ಕೋಪಾಗ್ನಿಯಿಂದ ಪ್ರಜ್ವಲಿತನಾಗಿ ಅಸಂಖ್ಯ ಬಾಣಗಳನ್ನು ಬಿಟ್ಟು ದೈತ್ಯ ಸೈನ್ಯವನ್ನು ಚದುರಿಸಿದನಲ್ಲದೆ, ತಾರಕಾಸುರನ ರಥವನ್ನು ಪುಡಿ ಪುಡಿಯನ್ನಾಗಿ ಮಾಡಿದನು. ಧ್ವಜವನ್ನು ಕತ್ತರಿಸಿದನು. ಸಾರಥಿಯನ್ನು ಉರುಳಿಸಿದನು. ಈ ತನ್ನ ಅವಮಾನವನ್ನು ಸಹಿಸಲಾರದೆ ಅಸುರನಾದ ತಾರಕಾಸುರನು ಕಾರ್ತಿಕೇಯನ ಮೇಲೆ ವರುಣಾಸ್ತ್ರವನ್ನು ಪ್ರಯೋಗಿಸಿದನು. ಅದಕ್ಕೆ ಪ್ರತಿಯಾಗಿ ಸ್ವಾಮಿಯು ವಾಯುವ್ಯಾಸ್ತ್ರವನ್ನು ಬಿಟ್ಟನು. ಅದಕ್ಕೆ ಪ್ರತಿಯಾಗಿ ಸರ್ಪಾಸ್ತ್ರವನ್ನು ಬಿಡಲು ಅದಕ್ಕೆ ಪ್ರತ್ಯಾಸ್ತ್ರವಾಗಿ ಗರುಡಾಸ್ತ್ರವನ್ನು ಬಿಟ್ಟನು. ಹೀಗೆ ಅಸ್ತ್ರ ಪ್ರತ್ಯಸ್ತ್ರ ಯುದ್ಧದಿಂದ ಜಗತ್ತಿನ ಜನರಿಗೆ ಬಹಳ ಪೀಡೆಯಾಗ ಹತ್ತಿತ್ತು. ಜನರಿಗಾದ ಪೀಡೆಯನ್ನು ಕಂಡು ಮಹಾಸ್ವಾಮಿಯು ಆ ಮಾಯಾವಿಯಾದ ತಾರಕಾಸುರನ ಮೇಲೆ ದಿವ್ಯತರವಾದ ಶಕ್ತ್ಯಾಸ್ತ್ರ ಬಿಡಲು ಅದು ಆ ತಾರಕಾಸುರನನ್ನು ಆ ಪರಿವಾರವನ್ನು ಸಂಹಾರಗೊಳಿಸಿತು. ತಾರಕಾಸುರನ ವಧದಿಂದುಂಟಾದ ಆನಂದದಿಂದ ಆ ದೇವತೆಗಳು ಮಹಾಸ್ವಾಮಿಯ ಮೇಲೆ ಪುಷ್ಪವೃಷ್ಟಿಯನ್ನು ಕರೆದು ನಂತರ ತಂದೆತಾಯಿಗಳು ಆಶೀರ್ವಾದ ಮಾಡಿ ತಾರಕೇಶ್ವರ ಎಂದು ಕರೆದರು.

ಶ್ರೀಶೈಲೇಶ್ವರ ದೇವ

ಇದು ಒಂದು ಸಂಡೂರಿನ ದೈವವಾಗಿದ್ದು ಬಹಳ ಹಿಂದಿನ ಕಾಲದಿಂದಲೂ ಈ ದೈವವನ್ನು ಪೂಜಿಸುತ್ತಾ ಬಂದಿದ್ದಾರೆ. ಇಲ್ಲಿ ಸೋಮವಾರ ಮತ್ತು ಶಿವರಾತ್ರಿ ಹಬ್ಬಗಳಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಇದು ೨೫೦

ವರ್ಷದಷ್ಟು ಹಿಂದಿನ ಪುರಾತನ ದೈವವಾಗಿದೆ. ಇದನ್ನು ಪವಾಡ ಮಲ್ಲಿಕಾರ್ಜುನ ಸ್ವಾಮಿ ಎಂದು ಕರೆಯುತ್ತಾರೆ. ಬ್ರಹ್ಮಾಚಾರಿಗಳಾದ ದಿಗಂಬರ ಶಾಸ್ತ್ರಿಗಳು ಕಾಶಿಯಿಂದ ೫ ಲಿಂಗಗಳನ್ನು ತಂದು ಪ್ರತಿಷ್ಠಾಪಿಸಿದನು. ಈ ಐದು ಲಿಂಗಗಳಲ್ಲಿ ೧. ಶ್ರೀಶೈಲೇಶ್ವರ ೨. ವಿಜಯರಾಮೇಶ್ವರ ಇನ್ನುಳಿದ ಮೂರು ಲಿಂಗಗಳು ಯಾವುವೆಂಬುದು ಕ್ಷೇತ್ರಾಧ್ಯಯನದಿಂದ ತಿಳಿದು ಬಂದಿಲ್ಲ.

ಈ ದೈವವನ್ನು ಕುರಿತ ಪವಾಡ

ಶ್ರೀಶೈಲೇಶ್ವರ ಗುಡಿಯು ಪಾಳುಬಿದ್ದ ದೈವವಾಗಿತ್ತು. ಈ ಪಾಳುಗುಡಿಗೆ ನೀಲಕಂಠಶಾಸ್ತ್ರಿಗಳು ಪ್ರತಿದಿನವು ಹೋಗಿ ನಮಸ್ಕಾರ ಮಾಡಿಕೊಂಡು ಬರುತ್ತಿದ್ದರು. ಹೀಗಿರುವಾಗ ಅವರಿಗೆ ಒಂದು ದಿನ ಆ ಪಾಳು ಗುಡಿಯಲ್ಲಿ ೫ ಅಡಿ ಸರ್ಪವನ್ನು ಕಂಡರು. ಒಮ್ಮೆ ಈಶ್ವರ ದೇವರೇ ಬ್ರಾಹ್ಮಣನ ರೂಪದಲ್ಲಿ ನೀಲಕಂಠಶಾಸ್ತ್ರಿಗಳು ಇರುವ ಓಣಿಗೆ ಬಂದು ಎರಡು ಮೂರು ಮನೆಗಳಿಗೆ ಬಿಕ್ಷೆ ಬೇಡುತ್ತಾರೆ. ಅವರೆಲ್ಲರೂ ಬಿಕ್ಷೆಹಾಕದೆ ಈ ಶಾಸ್ತ್ರಿಗಳ ಮನೆಯನ್ನು ತೋರಿಸುತ್ತಾರೆ. ಈ ಶಾಸ್ತ್ರಿಗಳು ತುಂಬಾ ಕಡು ಬಡವರಾಗಿದ್ದಾರೆ. ಅವರೇ ದಿನಾಲು ಗೋಪಾಳಕ್ಕೆ ಹೋಗಿ ಬಂದುದರಲ್ಲಿ ಗಂಜಿಯನ್ನು ಮಾಡಿಕೊಂಡು ಗಂಡಹೆಂಡಿರು ಕುಡಿದು ಸುಖವಾಗಿ ಇರುತ್ತಿದ್ದರು. ಮದ್ಯಾಹ್ನದ ಸಮಯದಲ್ಲಿ ಬ್ರಾಹ್ಮಣರೂಪದ ಶಿವನು ಬಂದು ಅಮ್ಮಾ ನನಗೆ ತುಂಬಾ ಹಸಿವೆಯಾಗುತ್ತಿದೆ. ಏನಾದರೂ ಕೊಡಿ ಎಂದನು. ಹಿಂದಿನ ಜನಪದರಲ್ಲಿ ಊಟದ ಹೊತ್ತಿಗೆ ಯಾರಾದರೂ ಬಂದರೆ ದೇವರೆ ಬಂದನೆಂಬ ನಂಬಿಕೆಯಿದೆ. ಅವರಿಗೆ ಇಲ್ಲದ ಹೊತ್ತಿನಲ್ಲಿ ಇವರಿಗೆ ಹೇಗೆ ಕೊಡುವುದು ಎಂದು ಆ ಶಾಸ್ತ್ರಿಗಳು ಸಂಕಟ ಪಟ್ಟು, ಹೇ ಬ್ರಾಹ್ಮಣನೇ ನಮ್ಮ ಮನೆಯಲ್ಲಿ ಬರಿ ಗಂಜಿಯೊಂದೆ ಇದೆ ಎನ್ನಲು ಅದನ್ನೆ ಕೊಡಿ ಎಂದಾಗ ಅವರು ಕೊಟ್ಟರು. ಅವನು ಗಂಜಿಯನ್ನು ಅರ್ಧ ಕುಡಿದು ಇನ್ನರ್ಧ ಗಂಜಿಯನ್ನು ಹಾಗೆ ಮನೆಯಲ್ಲಿ ಚೆಲ್ಲಿ ಹೊರಟು ಹೋದನು. ಆಗ ಈ ಶಾಸ್ತ್ರಿಗಳಿಗೆ ಚೆನ್ನಾಗಿಲ್ಲವೇನೊ ಅದಕ್ಕೆ ಚೆಲ್ಲಿ ಹೋಗಿದ್ದಾನೆ ಎಂದು ಸಂಕಟ ಪಟ್ಟುಕೊಂಡರು. ಅದೇ ದಿನ ರಾತ್ರಿ ಕನಸಿನಲ್ಲಿ ಈಶ್ವರನು ಕಾಣಿಸಿಕೊಂಡು ನಾನೇ ಬ್ರಾಹ್ಮಣನ ವೇಷದಲ್ಲಿ ನಿಮ್ಮ ಮನೆಗೆ ಬಂದಿದ್ದೇನೆ. ನಿಮಗೆ ಸಿರಿ ಸಂಪತ್ತು ಬರಲಿ ಎಂದು ಗಂಜಿ ಅಂಬಲಿಯನ್ನು ಚೆಲ್ಲಿ ಹೋಗಿದ್ದೇನೆ ಎಂದು ಹೇಳಿದಂತೆ ಅವರಿಗೆ ಭಾಸವಾಯಿತು. ನಂತರದ ದಿನವೇ ಒಬ್ಬ ರೈತ ಬಂದು ಶಾಸ್ತ್ರಿಗಳೇ ನನಗೆ ಸಾಕಷ್ಟು ಭೂಮಿಯಿದೆ. ಆದರೆ ಅದು ಕೋರ್ಟಿನಲ್ಲಿ ಚರ್ಚೆಯಲ್ಲಿದೆ. ನೀವು ಆ ಕೋರ್ಟು ಕಛೇರಿಯ ಕೆಲಸವನ್ನು ನೋಡಿಕೊಳ್ಳಿ, ನಾನು ಭೂಮಿಯಲ್ಲಿ ಬೆಳೆ ತೆಗೆಯುತ್ತೇನೆ. ಬಂದುದರಲ್ಲಿ ಇಬ್ಬರೂ ಸಮವಾಗಿ ಹಂಚಿಕೊಳ್ಳೋಣ ಎಂದು ಹೇಳಿದನು. ನಂತರ ಆ ರೈತನು ಆ ಊರನ್ನು ಬಿಟ್ಟು ಇಡೀ ಭೂಮಿಯೆಲ್ಲಾ ಈ ಶಾಸ್ತ್ರಿಗಳಿಗೆ ಕೊಟ್ಟು ಹೋದನು ಎಂದು ಇಲ್ಲಿಯ ಜನಪದರು ಹೇಳಿದ ಕಥೆಯಾಗಿದೆ.

ಹೀಗೆ ಈ ದೈವವು ಸಂಡೂರು ಪ್ರದೇಶದ ಜನರಿಗೆ ಇಷ್ಟ ದೈವವಾಗಿದ್ದ ಈ ರೀತಿಯ ಪವಾಡಗಳನ್ನು ಕುರಿತ ಕತೆಗಳು ಸಾಕಷ್ಟು ಈ ದೈವದ ಹಿನ್ನೆಲೆಯಲ್ಲಿ ಸಿಗುತ್ತದೆ.

ಚಿದಂಬರ ಸಪ್ತಾಹ ಹಾಗೂ ಏಳು ದಿನ ಅಖಂಡ ಸಪ್ತಾಹ ಭಜನೆ ಕಾರ್ಯಕ್ರಮವನ್ನು ವಿಶೇಷವಾದ ರೀತಿಯಲ್ಲಿ ಮಾಡಿ ದೈವವನ್ನು ಪೂಜಿಸುತ್ತಾರೆ.

೧೮೪೮ರಲ್ಲಿ ಬ್ರಿಟೀಷ್ ಅಧಿಕಾರಿ ಬ್ರೂಸ್ ಫುಟ್ ಅವರು ಸಂಡೂರನ್ನು ಈ ರೀತಿ ವರ್ಣಿಸಿದ್ದಾರೆ. ಅಗಲ ಕಿರಿದಾದ ರೀತಿಯಲ್ಲಿ ಇರುವ ಶಿಲೆಯಲ್ಲಿ ಎತ್ತರದ ಬೆಟ್ಟಗಳು ವಾಯುವ್ಯದಿಂದ ಆಗ್ನೇಯ ದಿಕ್ಕಿನವರೆಗೆ ಸಮಾನಾಂತರವಾಗಿವೆ. ಅವುಗಳಿಗೆ ಲಂಬವಾಗಿ ಒಂದು ಸಣ್ಣ ನದಿ ಮಧ್ಯದಲ್ಲಿ ಒಂದು ಊರು ಎಂದು ಅಂದಿನ ಸಂಡೂರನ್ನು ಪರಿಚಯಿಸಿದ್ದಾರೆ.

ಅಧ್ಯಾಯ ಐದು

ಸಮಕಾಲಿನತೆ ಮತ್ತು ಜನಪದ ದೈವಗಳು

ಅಧ್ಯಾಯ ಐದು

ಸಮಕಾಲಿನತೆ ಮತ್ತು ಜನಪದ ದೈವಗಳು

ಪ್ರಾಚೀನ ಕಾಲದಿಂದಲೂ ಮೌಖಿಕ ಸಂಪ್ರದಾಯದ ಜನರಲ್ಲಿ ಉಳಿದು ಬೆಳೆದು ಬಂದಿರುವ ದೈವಗಳು ಜನಪದ ದೈವಗಳೆಂದು ಕರೆಯಬಹುದು. ಜನಪದರು ಪೂಜಿಸುವ ದೈವಗಳ ಸಮೂಹವನ್ನೆ ಜನಪದ ದೈವವೆಂದು ಅಧ್ಯಯನದ ಪರಿಮಿತಿಯಲ್ಲಿ ಇಟ್ಟುಕೊಂಡಿದ್ದೇನೆ. ಆದರೂ ಇದರಲ್ಲಿ ಇಷ್ಟದೇವತೆ, ಮನೆ-ಮನ ಹಾಗೂ ಗ್ರಾಮದೇವತೆಗಳ ಮಿಶ್ರಣವೇ "ಜನಪದ ದೈವ" ವಾಗಿ ಬಳಸಿಕೊಳ್ಳಲಾಗುತ್ತಿದೆ. ಇದರಿಂದ ಮೊಫತ್ ಹಾಗೂ ಲೀವ್ವೀಸಂರವರು (ಮೊಫತ್ ಮತ್ತು ಲಿವ್ವೀಸ್) "Local goddesses encom pass a wide range of deities extending from the kin-based house hald and lineage, veriety to the territorial deities of hamlet, village and religion ಎಂದು ವಿವರಿಸಿದ್ದಾರೆ. ಹೀಗೆ ಒಂದು ಹಳ್ಳಿಯಲ್ಲಿ ಅಥವಾ ಗ್ರಮಾದಕ್ಕೆ, ಒಂದು ಪ್ರದೇಶಕ್ಕೆ ಸೀಮಿತವಾಗಿ ಬೆಳೆದು ಬರುವ ದೈವಗಳು ಗ್ರಾಮದೈವಗಳನ್ನೆ ಬಹುದಾಗಿದೆ. ಈ ಗ್ರಾಮದೇವತೆಯನ್ನು ಅಧಿದೇವತೆ, ಊರಿನದೇವತೆ, ಊರನ್ನು ಕಾಪಾಡುವ ದೈವವೆಂದು ಜನಪದರ ನಂಬಿಕೆಯ

ಜನಪದ ದೈವ ಮತ್ತು ಆಧುನಿಕ ದೈವಗಳ ತುಲನಾತ್ಮಕವಾಗಿ ಅಧ್ಯಯನ ಮಾಡಿದಾಗ ಅವುಗಳ ಒಳತಿರಳು ಏನೆಂಬುದು ತಿಳಿಯುತ್ತದೆ. ಪ್ರಚಲಿತದಲ್ಲಿರುವ ದೈವಗಳು ಶುದ್ಧ ಜನಪದ ದೈವ, ಶುದ್ಧ ಆಧುನಿಕ ದೈವವನ್ನು ಗುರುತಿಸಲಿಕ್ಕಾಗದ ರೀತಿಯಲ್ಲಿ ಹಲವಾರು ಬದಲಾವಣೆಗಳನ್ನು ಹೊಂದಿದೆ. ಅಂದರೆ ಜನಪದ ದೈವಗಳಲ್ಲಿ ಆಧುನಿಕ ಮಾದರಿಯ ಒಲವುಗಳನ್ನು ಹೊಂದಿದ್ದರೆ, ಅಧುನಿಕ ದೈವಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಯಿದ್ದರೂ ಮೂಲ ಜನಪದ ದೈವಗಳ ಆಚರಣೆ ವಿಧಿವಿಧಾನಗಳಂತೆಯೇ ಸಾಗಿಕೊಂಡು ಸಂಪೂರ್ಣಗೊಳಿಸುವರು. ಅಂತೆಯೇ "ಆಧುನಿಕ ದೈವವನ್ನು (ಶಿಷ್ಯರನ್ನು) ತಿರಸ್ಕರಿಸಿದೆ ಗ್ರಾಮೀಣರನ್ನು ಪುರಸ್ಕರಿಸದೆ ಎರಡು ಸಂಸ್ಕೃತಿ - ಸಂಪ್ರದಾಯಗಳಿಗಿರುವ ಜೀವನ ಮೌಲ್ಯಗಳನ್ನು ನಾವಿಂದು ಹುಡುಕಿಕೊಂಳ್ಳಬೇಕಾಗಿದೆ" ಎಂಬ ಬಸವರಾಜ ಸಬರದರ ಮಾತು ಸಮಂಜಸವಾದರೂ ಎರಡು ಸಂಸ್ಕೃತಿಗಳ ಪರ-ವಿರೋಧಗಳನ್ನು ಅರ್ಥೈಸಿಕೊಂಡು ಸಾಗಬೇಕಾದುದು ಅವಶ್ಯವಾಗಿದೆ.

ದ್ರಾವಿಡ ಸಂಸ್ಕೃತಿಯ ಪ್ರತೀಕವಾಗಿ ಸ್ತ್ರೀ ದೈವಗಳನ್ನು ಪೂಜಿಸಿದರೆ ಆರ್ಯರು ಪುರುಷ ದೈವವನ್ನು ಪೂಜಿಸುತ್ತಿರುವುದು ಸ್ಪಷ್ಟ ಎಂದು ತಿಳಿದು ಕೊಳ್ಳಬಹುದಾಗಿದೆ. ದ್ರಾವಿಡ ಸಂಸ್ಕೃತಿಯ ಪ್ರತೀಕವಾಗಿ ಜನಪದ ದೈವಗಳನ್ನು ಗುರ್ತಿಸಿದರೆ, ಆರ್ಯ ಸಂಸ್ಕೃತಿಯ ದ್ಯೋತಕವಾಗಿ ಆಧುನಿಕ ದೈವಗಳನ್ನು ಗುರ್ತಿಸಬಹುದಾಗಿದೆ. ಹೀಗೆ ದೈವಗಳ ಅಧ್ಯಯನದಿಂದ ಮಾನವನ ಚರಿತ್ರೆಯನ್ನು ಅರ್ಥಮಾಡಿಕೊಂಡಂತಾಗುತ್ತದೆ. ಭಾರತೀಯ ಸಂಸ್ಕೃತಿಯೂ ದ್ರಾವಿಡ ಮೂಲದ್ದೇ ಆಗಿತ್ತು. ಆದರೆ ಆರ್ಯರು ಆಗಮನದಿಂದ ಸಂಸ್ಕೃತಿಕರಣಗೊಂಡು ಒಂದಾಯಿತು. ಹೀಗೆ ಬೇರ್ಪಟ್ಟನಂತರ ಭಿನ್ನ ಭಿನ್ನ ಸಂಸ್ಕೃತಿಗಳ ನಡುವೆ ಸಂಘರ್ಷ ಏರ್ಪಟ್ಟಿರಬೇಕು. ಇದರಿಂದ

"ಆಗ ಜನಪದ ದೇವತೆಗಳ ಮೇಲೆ ಶಿಷ್ಠ ದೇವತೆಗಳ ಪ್ರಭಾವ ಶಿಷ್ಟ ಸಮುದಾಯಕ್ಕೆ ಜನಪದ ದೇವತೆಗಳ ಭಯ ಏಕಕಾಲಕ್ಕೆ ಕಾಣಿಸಿಕೊಂಡಿರಬೇಕು." (ಡಾ. ಬಸವರಾಜ ಸಭರದ) ಹೀಗೆ ಹಲವಾರು ರೀತಿಯಲ್ಲಿ ಜನಪದ ಆಧುನಿಕರಲ್ಲಿ ಭಿನ್ನತೆಯೊಂದಿಗೆ ಸಾಮ್ಯತೆಯನ್ನೊಳಗೊಂಡಿದೆ. ಇದೆಲ್ಲದರ ಪ್ರತೀಕವಾಗಿಯೇ ಎಂಬಂತೆ ಮಾನವನು ತಾನು ದೇವತಾ ಕಾರ್ಯ ಮಾಡಬೇಕಾದ ಅನಿವಾರ್ಯ ಪ್ರಸಂಗ ಒದಗಿ ಬಂದಿದೆ. ಏಕೆಂದರೆ ದೈವದ ಸೇವೆಗಯ್ಯದಿದ್ದರೆ ಸಾಕುಪ್ರಾಣಿ, ಬೆಳೆಗಳಿಗೆ ತಮಗೂ ಮತ್ತು ಮಕ್ಕಳಿಗೂ ರೋಗ ರುಜಿನ ಬರುವುದೆಂಬ ಭೀತಿಯಿಂದ (ಭಯದಿಂದ) ಜನಪದ ದೈವಗಳಕೋಪಕ್ಕೆ ಗುರಿಯಾಗದೆ ಇಂದು ಸಹ ಅವುಗಳ ಆರಾಧನೆ ಕೆಲವು ದೈವಗಳಿಗೆ ನಿತ್ಯ ಇಲ್ಲದಿದ್ದರೂ ವರ್ಷಕ್ಕೆ ಎರಡೂ ಇಲ್ಲವೆ ಮೂರು ವರ್ಷಕ್ಕೊಮ್ಮೆ ಉತ್ಸವ ಮಾಡಿ ಆರಾಧನೆ ಕೈಗೊಳ್ಳುತ್ತಿರುವುದು ಕಂಡು ಬರುತ್ತದೆ. ಇಂತಹ ಜನಪದ ದೈವಗಳು ಗ್ರಾಮಗಳಲ್ಲಿ ಆಧುನಿಕ ಸೊಗಡಿಗೆ ಹೊಂದಿಕೊಂಡು ಸಾಗುವುದರಿಂದ ಜನಪದ ದೈವವನ್ನು ಕಡೆಗಣಿಸಿ ಶಿಷ್ಟ ಪರಿಕಲ್ಪನೆಯ ದೈವಗಳಿಗೆ ಮೊರೆ ಹೊಗುತ್ತಿದ್ದಾರೆ. ಹೀಗೆ ಹುಟ್ಟಿಕೊಂಡ ಜನಪದ ದೈವಗಳ ಪ್ರಾಚೀನತೆ ತೀರಾ ಪುರಾತನವಾದುದು. ಮಹೆಂಜೋದಾರೋ-ಹರಪ್ಪಾಗಳಲ್ಲಿ ಕ್ರಿ.ಪೂ ಅನೇ ಶತದಲ್ಲಿ ದೇವತಾ ವಿಗ್ರಹಗಳ ಆರಾಧನೆಯಿತ್ತೆಂದು ಅಲ್ಲಿಯ ಶೋಧನೆ ಪ್ರಕ್ರಿಯೆಯ ನಂತರ ದೊರಕಿದ ಮುದ್ರೆಗಳಿಂದ ತಿಳಿದು ಬರುತ್ತದೆ.

ಕಾಡು ಮನುಷ್ಯ ಗ್ರಾಮ ಜೀವನಕ್ಕೆ ಇಳಿದಾಗ ಸೃಷ್ಟಿಯಾದ ದೈವಗಳಿಗೆ ಅಥವಾ ಜನಪದ ದೈವಗಳಿಗೆ ಯಾವುದೇ ರೀತಿಯ ಆಸ್ತಿಪಾಸ್ತಿಯಾಗಲೀ, ಯಾವುದೇ ಆಡಳಿತ ಮಂಡಿಗಳಲ್ಲಿ ಇರುವುದಿಲ್ಲ. ಇವು ಬಡಜನರ ಶಕ್ತಿಯುತವಾದಂತಹ ದೈವಗಳಾಗಿರುತ್ತವೆ. ಆದರೆ ಆಧುನಿಕ (ಶಿಷ್ಠ) ದೈವಗಳು ಶ್ರೀಮಂತವಾಗಿರುತ್ತವೆ. ಸಮೃದ್ಧ ಆಸ್ತಿ-ಪಾಸ್ತಿಯನ್ನು ಹೊಂದಿರುತ್ತವೆ. ಇಲ್ಲಿ ಲಿಖಿತ ಇತಿಹಾಸ ಇಲ್ಲ,ಅಲ್ಲಿ ಮಾತ್ರ ಲಿಖಿತತೆ ಇರುತ್ತದೆ.

ಅಲ್ಲದೆ ಜನಪದ ದೈವಗಳಿಗೆ ಚೌಕಾಕಾರದ ಗರ್ಭಗುಡಿಗಳು ಮುಂದೆ ಮೇಲ್ಛಾವಣಿಯು ಅಷ್ಟಕಷ್ಟೆ ಇರುತ್ತದೆ. ಆದರೆ ಅಧುನಿಕ ಜಗತ್ತಿನಲ್ಲಿರುವ ಶಿಷ್ಟ ದೈವಕ್ಕೆ (ದೈವಗಳಿಗೆ) ವಾಸ್ತು ಮಾದರಿಯ ಕಟ್ಟಡದೊಂದಿಗೆ ಭವ್ಯ ಶಿಲ್ಪವುಳ್ಳ ದೇವಾಲಯದ ರಚನೆಯನ್ನೊಳಗೊಂಡಿರುತ್ತದೆ. ಜನಪದ ದೈವಗಳಿಗೆ ಗರ್ಭಗುಡಿ ಪ್ರತ್ಯೇಕವಾಗಿಲ್ಲದಿದ್ದರೂ ಅಲ್ಲಿ ಕಪ್ಪಾದ ಗುಂಡುಕಲ್ಲು ಗೋಡೆಗೆ ಆನಿಸಿಕೆ ಇಡಲಾಗಿರುತ್ತದೆ. ಕೆಲವು ಗುಡಿಗಳಲ್ಲಿ ತನುಕೂಡ (ಮಣ್ಣಿನ ಬಿಂದಿಗೆಯಲ್ಲಿ ತೆಂಗಿನ ಕಾಯಿ ಇಟ್ಟು ಅದರಲ್ಲಿ ನದಿ ಇಲ್ಲವೆ ಬಾವಿಯ ನೀರು ಹಾಕಿಟ್ಟು ಪೂಜಿಸುತ್ತಾರೆ) ವಿಟ್ಟು ಪೂಜಿಸುವುದನ್ನು ಕಾಣುತ್ತೇವೆ. ಇನ್ನು ಕೆಲವು ಜನಪದ ದೈವಗಳಿಗೆ ಕೆಲವು ಹೆಸರಿನ ಮಾದಿರಯ ದೈವ ಮೂರ್ತಿಯನ್ನು ಕಟ್ಟಿಗೆಯಿಂದ ಮಾಡಿಸಿ ಅದಕ್ಕೆ (ಕೆಂಪು) ಸೀರೆ ಉಡಿಸಿ ಪೂಜಿಸತೊಡಗಿದ್ದಾರೆ. ಸಂಡೂರು ಪ್ರದೇಶದಲ್ಲಿ (ಧರ್ಮಸಾಗರ) ಮತ್ತು ಆದರ ಸುತ್ತ - ಮುತ್ತಲಿನ ಗ್ರಾಮಗಳಲ್ಲಿ ಕೆಲವು ಸ್ತ್ರೀ ದೈವಗಳ ಗುಡಿಗಳಲ್ಲಿ ಆದಿಮಾನವನು ಬಳಸುತ್ತಿದ್ದ ಎನ್ನುವ ಕೈ ಕೊಡಲಿಗಳನ್ನೇ ಇಂದಿಗೂ ದೈವ ಮೂರ್ತಿಗಳಾಗಿ ಬಳಸುತ್ತಿದ್ದಾರೆ. ಆ ಕೊಡಲಿಗಳನ್ನು ಆಯಾ ದೈವದ ಜಾತ್ರೆ - ಉತ್ಸವ ದಿನಗಳಲ್ಲಿ ಮಾತ್ರ ಬಳಸುತ್ತಾರೆ. ಈಗ ಆಧುನಿಕತೆಯಿಂದಾಗಿ ಹಲವು ಗ್ರಾಮಗಳಲ್ಲಿ ಹಿಂದೆ ಇದ್ದ ಸ್ತ್ರೀ ಕಟ್ಟಿಗೆ ದೈವವಲ್ಲದೆ ಸ್ತ್ರೀ ದೈವದ ಕಂಚಿನ, ಬೆಳ್ಳಿಯ ರೂಪದ ವಿಗ್ರಹಗಳು ಹಾಗೂ ಕಪ್ಪು ಕಲ್ಲಿನಲ್ಲಿ ಸುಂದರವಾಗಿ ಕೆತ್ತಿದ ದೇವಿ ಮೂರ್ತಿಗಳಿವೆ.

ಇಂತಹ ಜನಪದ ದೈವಗಳಿಗೆ ದಿನನಿತ್ಯವು ಪೂಜೆ ಮಾಡುವುದಿಲ್ಲ ಯಾವುದೋ ವಿಶಿಷ್ಠ ದಿನಗಳಲ್ಲಿ ಉತ್ಸವಗಳಲ್ಲಿ ಇಡೀ ಗ್ರಾಮದವರು ಒಟ್ಟಾಗಿ ಪಾಲ್ಗೊಂಡು ಆಚರಿಸುವರು. ಆದರೆ ಆಧುನಿಕದಲ್ಲಿ ಹೆಚ್ಚಾಗಿರುವ ಶಿಷ್ಠ ದೈವಗಳಾದ ರಾಘವೇಂದ್ರ, ಶಿವ, ತಿರುಪತಿ ಮುಂತಾದ ದೈವಗಳಿಗೆ ನಿತ್ಯವು ಪೂಜೆ ನಡೆಯುತ್ತದೆ. ಶಿಷ್ಟ,

ದೈವದ ಪೂಜಾರಿಗಳು ಸಂಸ್ಕೃತ ಶ್ಲೋಕವನ್ನು ಪಠಿಸುವ ಬ್ರಾಹ್ಮಣರಾಗಿರುತ್ತಾರೆ. ಜನಪದ ದೈವಗಳಿಗೆ ಅವಿದ್ಯಾವಂತದ ಸಂಪ್ರದಾಯದ ಕೆಲವು ಜಾತಿಗೆ ಮೀಸಲಾದ ಜನರು ಪೂಜಾರಿಗಳಾಗಿರುತ್ತಾರೆ. ಹಿಂದೆ ದೈವವನ್ನು ಯಾವ ಜಾತಿಯವರೆಯಾಗಲೀ ಪೂಜಿಸಬಹುದಾಗಿತ್ತು. ಆದರೆ ಈಗ ಸಂಸ್ಕೃವನ್ನು ಅರಿತ ಬ್ರಾಹ್ಮಣರೇ ಪೂಜಿಸಬೇಕು. ಎನ್ನುವಂತ ಪರಿಸ್ಥಿತಿ ಇದೆ.

ಆಧುನಿಕತೆಯ ಆಹ್ವಾನದ ಜೊತೆಗೆ ಜನಪದರು ಹಲವಾರು ಸಮಸ್ಯೆಗಳಿಗೆ ಗುರಿಯಾಗುತ್ತಿದ್ದಾರೆ. ಇದಕ್ಕೆ ವಾಜ್ಞಾನಿಕ ಅಭಿವೃದ್ಧಿಯೇ ಜನಪದ ಹಿನ್ನೆಡೆಗೆ ಕಾರಣದಂತಾಗಿದೆ. ಈ ಹಿಂದೆ ಜನಪದರು ತಮಗೆ ಒದಗಿದ ಕಷ್ಟ-ನಷ್ಟ, ನೋವು-ನಲಿವುಗಳಿಗಾಗಿ ಜನಪದ ದೈವಗಳ ಮೊರೆ ಹೋಗಿ ಆ ದೈವವೇ ತಮ್ಮ ರಕ್ಷಕ ದೈವವೆಂಬ ನಂಬಿಕೆಯಿತ್ತು. ಈಗ ಇಂತಹ ದುಗುಡು-ದುಮ್ಮಾನ, ರೋಗ-ನಿವಾರಣೆಗಾಗಿ ವೈದ್ಯರ ಬಳಿ ತೆರಳಿ ತಪಾಸಣೆಯನ್ನು ಆಧುನಿಕ ಜಗತ್ತಿನಲ್ಲಿ ಪಡೆದುಕೊಂಡು ಬರುತ್ತಿರುವುದಾಗಿ ಕಾಣಿಸುತ್ತದೆ. ಅಲ್ಲದೆ ಮನರಂಜನೆಗಾಗಿ ಜಾತ್ರೆ-ಉತ್ಸವ, ಹಬ್ಬ-ಹರಿದಿನಗಳಲ್ಲಿ ಬಯಲಾಟ, ನಾಟಕ, ಗೊಂಬೆಯಾಟ, ಯಕ್ಷಗಾನಗಳನ್ನು ನೋಡಿ ಮನ ತಣಿಸುತ್ತಿದ್ದರು. ಇಂದಿಗೂ ಸಂಡೂರಿನಲ್ಲಿ ಈ ಬಯಲಾಟ ಯಕ್ಷಗಾನಗಳನ್ನು ವರ್ಷಕ್ಕೆ ಒಂದು-ಸಾರಿ ಇಲ್ಲವೆರಡು ಸಾರಿಯಾದರೂ ಕಾಣಬಹುದಾಗಿದೆ. ಆದರೆ ಇಂದು ಬಯಲಾಟದ ಸ್ಥಾನವನ್ನು ವೈಜ್ಞಾನಿಕ ಅನ್ವೇಷಣೆಯ ದ್ಯೋತಕವಾಗಿರುವ ಸಿನಿಮಾ,ದೂರದರ್ಶನ ವೀಡಿಯೋಗಳು ಪಡೆದುಕೊಂಡಿವೆ. ಇವುಗಳನ್ನು ನೋಡುವುದರಿಂದ ಮನೆ ರಂಜನೆ ಪಡೆಯುತ್ತಿದ್ದಾರೆ. ಇವು ಒಂದು ರೀತಿ ಸಮೂಹ ಮಧ್ಯಮಗಳಾಗಿ ಪರಿಣಮಿಸಿವೆ. ಈ ಸಮೂಹ ಮಾಧ್ಯಮಗಳಿಂದಾಗಿ ಹಿಂದೆ ಜನಪದರಲ್ಲಿದ್ದ ಜಾತ್ರೆ ಉತ್ಸವ ಜನಪದ ಹಾಡುಗಳು ಮಾಯವಾಗಿವೆ.

ಜೀವನ ಹಲವಾರು ರಹಸ್ಯ ವಿಚಾರಗಳಾದ ಫಲಸಂತಾನ ನೀಡುವುದು, ಮಳೆ ತರಿಸಿ ಬೆಳೆ ನೀಡುವುದು, ಮನಸ್ಸಿಗೆ ಶಾಂತಿ ನೀಡುವುದು, ಕೋರ್ಟ್ ಕಛೇರಿಗಳಲ್ಲಿ ವಿವಾದಗಳನ್ನು ಬಗೆಹರಿಸುವುದು, ಬರಗಾಲ ಬಾರದಂತೆ ಇರಿಸುವುದು. ಗ್ರಾಮದ ಜನರಲ್ಲಿ ಏಕತೆ ಮೂಡಿಸುವುದು ಮುಂತಾದ ಕಾರ್ಯಗಳನ್ನು ಜನಪದ ದೈವಗಳು ಯಾವುದೋ ರೂಪದಲ್ಲಿ ಬಂದು ನೆರವಾಗುವವೆಂಬ ಪ್ರತೀತಿ ಇತ್ತು. ಈಗ ಅಧುನಿಕ ಪ್ರಪಂಚದಲ್ಲಿ ಶೋಧನಾ ಕ್ರಿಯೆ ಹೆಚ್ಚಾದಂತೆಲ್ಲಾ ವೈಜ್ಞಾನಿಕ ಅಂಶಿಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಾಗುತ್ತಿದ್ದಾರೆ. ಇದರಿಂದಲೇ ''ಮೇಲೊಂದು ಸ್ವರ್ಗವಿದೆ, ಕೆಳಗೊಂದು ನರಕವಿದೆ'' ಎಂಬ ಕಲ್ಪನೆಯಿಂದಲೂ ದೂರವಾಗುತ್ತಿರುವುದು ಸ್ಪಷ್ಟ ಅಲ್ಲದೆ ಚಂದ್ರನ ಮೇಲೆ ಕಾಲಿಟ್ಟು ಅಲ್ಲಿಯೂ ಮಾನವರು ವಾಸ ಮಾಡ ಬಹುದೆಂಬ ಸುಳುಹುಗಳು ಪತ್ತೆಹಚ್ಚುವಲ್ಲಿ ಯಶಸ್ವಿಯಾಗಿದ್ದರಿಂದ ಭಕ್ತಿಯ ಪರಾ ಕಾಷ್ಟತೆ ಗೌಣವಾಗುತ್ತಿದೆಯೆಂದು ತಿಳಿದು ಬರುತ್ತದೆ. ಹಿಂದೆ ಚಂದ್ರ ಸೂರ್ಯರೇ ದೇವರೆಂಬ ನಂಬಿಕೆ ಇತ್ತು. ಆದರೂ ಈಗಲೂ ಕೆಲವು ಗ್ರಾಮಗಳಲ್ಲಿ ಮಾಡನಂಬಿಕೆ, ಅಂಧಕಾರಗಳಿಂದ ಕಳಚಿ ಆಚೆ ಬರಲು ಸಾಧ್ಯವಾಗುತ್ತಿಲ್ಲದಿರುವುದು ವ್ಯಕ್ತವಾಗುತ್ತದೆ.

ಜನಪದ ದೈವಗಳು ಕೆಲವು ಸಂಬಂಧಗಳನ್ನು ಹೊಂದಿವೆ ಮನುಷ್ಯ ಮತ್ತು ಸಮಾಜ ಮನುಷ್ಯ ಮತ್ತು ಮನುಷ್ಯ, ಮನುಷ್ಯ ಮತ್ತು ನಿಸರ್ಗದ ಸಂಬಂಧ ರೂಪಿಸುತ್ತಿವೆ. (ಡಾ. ಸಿದ್ಧಲಿಂಗಯ್ಯ) ಇದರಿಂದಲೇ ''ದ್ರಾವಿಡ ಸಂಸ್ಕೃತಿಯಲ್ಲಿ ಸ್ತ್ರೀ ದೇವತೆಗಳೆ ಪ್ರಧಾನವಾದರೆ ಆರ್ಯಸಂಸ್ಕೃತಿಯಲ್ಲಿ ಪುರುಷ ದೇವತೆಗಳೇ ಪ್ರಧಾನವಾಗಿವೆ'' (ಬಸವರಾಜ ಸಬರದ) ಈ ಕಾರಣದಿಂದಲೇ ಜನಪದರಲ್ಲಿ ಮಾತೃಪ್ರಧಾನ ಸಂಸ್ಕೃತಿಯಾದ ಮೂಲಕಲ್ಪನೆಯನ್ನೆ ದೃಷ್ಟಿಯಲ್ಲಿಟ್ಟುಕೊಂಡು ಹೆಚ್ಚಾಗಿ ಸ್ತ್ರೀ ದೈವದ ಆರಾಧನೆಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಇದನ್ನು ಕೆಳವರ್ಗದವರಲ್ಲಿ ಅತಿಯಾಗಿ ಕಾಣ ಸಿಗುತ್ತವೆ. ಅಲ್ಲದೆ ಪ್ರಾಕೃತಿಕ ವಸ್ತುಗಳ ಪೂಜ್ಯ ಭಾವನೆಯಿಂದಲೂ ಸಮಾಜದ

ಹಿರಿಯರನ್ನು ಗೌರವಿಸುವುದು. ಜನಪದರು ಸಮಾಜದ ವಿರುದ್ಧ ಅಪ್ಪತಪ್ಪಿ ವರ್ತಿಸಲಾರರು ಆದರೆ ಆಧುನಿಕ ಜಗತ್ತಿನಲ್ಲಿ ಈರೀತಿ ಸಂಬಂಧಗಳ ಕಲ್ಪನೆಯ ಕೊಂಡಿ ಕಳಚಿದಂತೆ ಗಮನಕ್ಕೆ ಬರುತ್ತದೆ. ನೈಸರ್ಗಿಕ ವಸ್ತುಗಳಿಗೆ ಆಗೌರವ ಸೂಚಿಸುವುದು. ಹಿರಿಯರಿಗೆ ಸಮಾಜಕ್ಕೆ ವಿರುದ್ಧವಾಗಿ ವರ್ತಿಸುವುದು ಅವರ ಆದ್ಯ ಕರ್ತವ್ಯವಾಗಿದೆ. ಎಂಬಂತೆ ಜೀವನ ಸಾಗಿಸುತ್ತಿದ್ದಾರೆ.

ಆಧುನಿಕ ಜಗತ್ತಿನಲ್ಲಿ ವೈದಿಕೀಕರಣಕ್ಕೆ ಉನ್ನತಸ್ಥಾನ ಕಲ್ಪಿಸಲಾಗಿದೆ. ವೈದಿಕ ಅರ್ಚಕರ ಸಂಪರ್ಕ ಬಂದಕೂಡಲೇ ಜನಪದ ದೈವಗಳ ಕಿವಿಗಳ ಮೇಲೆ ಸಂಸ್ಕೃತದ ಘೋಷವು ಬೀಳಲು ಪ್ರಾರಂಭವಾಗಿ ಅರ್ಚನ ವಿಧಾನವೇ ಕಣ್ಮರೆಯಾಗಿದೆ. ಪರಂಪರಾಗತವಾಗಿ ರೂಡಿಯಲ್ಲಿದ್ದ ಕೆಳವರ್ಗದ ಪೂಜಾರಿಗಳು ಇಂದು ಕೆಲವು ಜನಪದ ದೈವಗಳನ್ನು ದೇವಾಲಯಗಳಲ್ಲಿ ಪೂಜೆ ಮಾಡುವಂತಿಲ್ಲ. ಆದರೂ ಅವರವರ ಮನೆಯಲ್ಲಿ ಪ್ರತ್ಯೇಕವಾದ ಗರ್ಭಗುಡಿ ಪೂಜಾಕಾರ್ಯವೂ ಎಡಬಿಡದೆ ಸಾಗಿದೆ. ಇದಕ್ಕೆ ಇಂದು ಗ್ರಾಮದೇವಾಲಯದಲ್ಲಿ ಸರ್ಕಾರವೇ ನೇಮಿಸಿದ ಪೂಜೆಮಾಡುತ್ತಿದ್ದಾರೆ. ಹಿಂದೆ ಈ ದೈವಗಳನ್ನು ಐದಾರು ಮನೆದವರು ಪೂಜೆ ಮಾಡುತ್ತಿದ್ದರು. ಅದರಿಂದ ಈ ಅಧುನಿಕತೆ ಹೊಸ್ತಿಲಲ್ಲಿ ಜನಪದ ಪೂಜಾರಿಗಳಿಗೆ ತುಂಬಾ ತೊಂಜರೆಯಾಗುತ್ತಿದೆ. ಇವರಿಗೆ ಜಾತ್ರೆ ಉತ್ಸವ ವಿಶೇಷಾಚಾರಣೆಗಳಲ್ಲಿ ಮಾತ್ರ ಗುಡಿಗಳಲ್ಲಿ ಪ್ರವೇಶಾವಕಾಶವಿರುತ್ತದೆ. ಅದರೆ ಹೀಗೆ ಆಧುನಿಕತೆಯಿದ್ದರೂ ಸಂಡೂರು ಪ್ರದೇಶದಲ್ಲಿ ಹಿಂದಿನಿಂದ ಗ್ರಾಮದೈವಗಳನ್ನು ಪೂಜಿಸಿಕೊಂಡ ಬಂದ ಮನೆತನದವರೇ ಇಂದಿಗೂ ಪೂಜಾರಿಗಳಾಗಿದ್ದಾರೆ. ಅಲ್ಲಿನ ಗ್ರಾಮದೈವಗಳೆಂದರೆ ಉಡುಚಲಮ್ಮ, ಊರಮ್ಮ, ಬನ್ನಿಕಾಳಮ್ಮ ಮುಂತಾದವು ಪುರುಷ ದೈವಗಳೆಂದರೆ ಗಂಡಿನರಸಿಂಹಸ್ವಾಮಿ ವಿಠ್ಠೋಬದೇವರು, ಶಿವಪುರದ ಹಿಂದಿನ ವಿರೋಪಾಕ್ಷ ಈ ಗಿನ ಶಿವನ ಅಥವಾ ಲಿಂಗದಾ ದೈವವಾಗಿದೆ.

ಈ ಆಧುನಿಕತೆಯ ಬೆಳೆಯುತ್ತಿದ್ದು ಜನಪದ ದೈವಗಳಲ್ಲಿ ಮಾರ್ಪಡು ಹೊಂದುತ್ತಿದ್ದರು ಸಂಡೂರು ಪ್ರದೇಶದಲ್ಲಿ ಗ್ರಾಮ ದೈವಗಳನ್ನು ಕೆಳವರ್ಗದ ಜಾತಿಯವರಾದ ಬಡಿಗೆಯರು, ಅಗಸರು, ಪೂಜಿಸುವುದನ್ನು ಕಾಣಬಹುದಾಗಿದೆ.

ಆಧುನಿಕತೆ ಹೆಚ್ಚಿರುವ ಪ್ರದೇಶಗಳಲ್ಲಿ ಗ್ರಾಮಗಳಲ್ಲಿ ಜನಪದ ದೈವಗಳ ಪೂಜಿಸುವಿಕೆ ಕಡಿಮೆ, ಅದರೆ ಆಧುನಿಕತೆಯು ಕಡಿಮೆ ಇದ್ದ ಗ್ರಾಮಗಳಲ್ಲಿ ಜನಪದ ದೈವಗಳ ಆರಾಧನೆಯು ಅಧಿಕ ಸಂಖ್ಯೆಲ್ಲಿರುತ್ತದೆ. ಆಧುನಿಕ ಜಗತ್ತಿನ ದೈವಗಳ ಮಾರ್ಪಡಿನಿಂದ ಜನಪದ ದೈವಗಳಲ್ಲಿ ತುಂಬಾ ಮಾರ್ಪಾಡುಗಳಾಗಿವೆ. ಈಗ ಆಗಿರುವ ಕೆಲವು ಮಾರ್ಪಡುಗಳನ್ನು ಗಮನಿಸುವುದಾದರೆ ಜನಪದ ದೈವಗಳ ಉತ್ಸವ ಆಚರಣೆಗಳ ವೇಳೆಯಲ್ಲಿ ಪಂಜು ಹಿಡಿದುಕೊಂಡು ಸಾಗುತ್ತಿದ್ದರು. ಈಗ ಅದರ ಬದಲಿಗೆ ಪೆಟ್ರೋಮ್ಯಾಕ್ಸ್ ಹಾಗೂ ಬ್ಯಾಟರಿ ವಿದ್ಯುತ್ ಚಾಲಿತ ಟ್ಯೂಬ್‌ಗಳನ್ನು ಉಪಯೋಗಿಸುತ್ತಿರುವರು. ಕುಂಬಾರನ ಮಣ್ಣಿನ ಹಣತೆ ಬದಲಿಗೆ ವಿದ್ಯುತ್ ದೀಪ ಬೆಳಗಿಸುವರು. ಕೆಲ ಕ್ಷಣ ಕಡಿತವಾದರೆ ಸಾಕು ದೈವಗಳು ಬೆವತು ಹೋಗುವ ಪರಿಸ್ಥಿತಿ ಒದಗಿದೆ. ಇದರಿಂದ ಕೆಲವು ದೈವಗಳು ಜನರೇಟರ್ ಬಳಕೆಯಿಂದ ಉತ್ತಮ ಸೌಲಭ್ಯ ಬಂದಿದೆ. ಈ ಹಿಂದೆ ತಮಟೆ ಬಾರಿಸುತ್ತಾ ಉತ್ಸವ-ಆಚರಣೆದಿನವನ್ನು ಸಾರು ಹಾಕುವುದರ ಮೂಲಕ ಜನರಿಗೆ ತಿಳಿಸುತ್ತಿದ್ದರು. ಆದರೆ ಈಗ ಧ್ವನಿ ವರ್ಧಕಗಳ ಮೂಲಕ ತಿಳಿಸುವ ಪರಿಸ್ಥಿತಿ ಇದೆ. ಇನ್ನು ಉತ್ಸವ ಮೂರ್ತಿಯನ್ನು ಪಲಕ್ಕಿಯಲ್ಲಿ ಇಲ್ಲವೆ ವ್ಯಕ್ತಿಯೊಬ್ಬ ಹೊತ್ತುಕೊಂಡು ಮಡಿಯಿಂದಲೇ ಊರಲ್ಲಿ ಮೆರವಣಿಗೆ ಮೂಲಕ ತರುತ್ತಿದ್ದರು. ಆದರೆ ಈಗ ಮಡಿಯು ಇಲ್ಲವಾಗಿದೆ. ದೈವರು ಟ್ರಾಕ್ಟರ್ ಮೇಲೇರಿದೆ ಮೆರವಣಿಗೆಯ ಮೂಲಕ ತರಲಾಗುತ್ತಿದೆ. ಆದರೆ ನಮ್ಮ ಸಂಡೂರು

ಪ್ರದೇಶದಲ್ಲಿ ಸಂಪೂರ್ಣವಾಗಿ ಮಡಿಯ ಕಲ್ಪನೆಯಿಂದ ಕಳಚಿಲ್ಲ ಈಗಲೂ ಹಳೆಯ ಪದ್ಧತಿಗಳು ಮುಂದುವರೆಯುತ್ತಿವೆ.

ಜನಪದ ದೈವಗಳು ಬಹುಮಟ್ಟಿಗೆ ಜನಪದರಿಂದಲೇ ಪರೀಕ್ಷೆಗೊಳಗಾಗುವ ಪರಿಸ್ಥಿತಿ ಒದಗಿರುತ್ತದೆ. ತಾವು ಕೇಳಿಕೊಂಡ, ಕೋರಿಕೊಂಡ ಇಚ್ಚೆ (ಅಭಿಷ್ಟ)ಗಳು ಈಡೇರದಿದ್ದರೆ, ಜನಪದ ದೈವವನ್ನು ಮೂದಲಿಸಿ ಬಯ್ಯುತ್ತಾರೆ. ಹೀಯಾಳಿಸಿ ಹಂಗಿಸುತ್ತಾರೆ. ಈ ವಿಚಿತ್ರ ರೀತಿಯ ವರ್ತನೆಗಳನ್ನು ಮಾಡಲು ತೊಡಗುವರು. ಕಸ ಪೊರಕೆಯಿಂದ ಹೊಡೆಯುವುದು, ಇದಾವುದಕ್ಕೂ ತಮ್ಮ ಕಾರ್ಯ ಸಂಪೂರ್ಮವಾಗಿ ಆಗದ ಸ್ಥಿತಿಗೆ ಬಂದಾಗ ಆದೈವವನ್ನು ಊರ ಹೋರಗಿರುವ ರಸ್ತೆ ಬದಿಗೋ ಇಲ್ಲವೆ ನದಿ-ಹಳ್ಳ-ಕೊಳ್ಳಗಳಲ್ಲಿ ಎಸೆದು ಬರುವುದಾಗಿ ಸೂಚಿಸಿ ಭೀತಿಗೊಳಿಸುತ್ತಾರೆ. ಇದರಿಂದ ಜನಪದ ದೈವಗಳು ಭಕ್ತರ ಈಡೇರಿಕೆಯನ್ನು ಈಡೇರಿಸುವಲ್ಲಿ ಸಫಲವಾಗುತ್ತಿವೆ. ಇದು ಒಂದು ವೇಳೆ ಫಲಕಾರಿಯಾಗಿದ್ದರೆ. ಬೇರೆ ದೈವಕ್ಕೆ ಶರಣಾಗುತ್ತಾರೆ. ಇದರಿಂದಲೇ ಇಂದು ದೇವರನ್ನು ಕಂಡು ಭಕ್ತರು ಹೆದರಿಕೊಳ್ಳುವುದಕ್ಕಿಂತ ಭಕ್ತರ ಕೈಯಿಂದ ಉಳಿವಿಗಾಗಿ ದೈವಗಳೆ ಹೆದರುವ ಸ್ಥಿತಿ ಬಂದೊದಗಿದೆ. ಭಯ ಭಕ್ತಿಗಳು ಇಲ್ಲಿ ಸಮಾನವಾಗಿರುತ್ತವೆ.

ಜನಪದ ದೈವಗಳು ನೋಡಲು ಭಯಾನಕವಾಗಿರುತ್ತವೆ. ಆಧುನಿಕವಾದ ಶಿಷ್ಟದೈವಗಳು ಸೌಮ್ಯರೂಪದವುಗಳಾಗಿರುತ್ತವೆ. ಜನಪದ ದೈವಗಳೊಂದಿಗೆ ಮಾತಿನ ಚಕಮಕಿಯು ಏಕವಚನದಿಂದ ಕೂಡಿರುತ್ತದೆ. ಆದರೆ ಶಿಷ್ಠ ದೈವಗಳಿಗೆ ಬಹುವಚನದ ದಾಟಿಯನ್ನೇ ಬಳಸುವರು. ಇಲ್ಲಿ ಸ್ತ್ರೀ ದೈವವು ಕೋರೆಹಲ್ಲು ಮೀಸೆಯನ್ನು ಹೊಂದಿದ್ದು ಒಂದು ಕೈಯಲ್ಲಿ ಖಡ್ಗ-ಮತ್ತೊಂದು ಕೈಯಲ್ಲಿ ಬಿಲ್ಲುಬಾಣ, ಶಂಖ, ಚಕ್ರವನ್ನು ಇನ್ನೊಂದು ಕೈಯಲ್ಲಿ ಹಿಡಿದು ಸಿಂಹ-ಹುಲಿ ಇಲ್ಲವೆ ಕುದುರೆಯ ಮೇಲೆ ಸವಾರಿ ಮಾಡುವ ದೈವವು ಕೊರಳಲ್ಲಿ ರುಂಡಮಾಲೆ ಧರಿಸಿರುವುದರಿಂದ ಪುರುಷ ಪ್ರಧಾನ ಸಂಸ್ಕೃತಿಯನ್ನು ಮಟ್ಟಹಾಕಿದ ಮಾತೃಪ್ರಧಾನ ಸಂಸ್ಕೃತಿಯ ಪ್ರತೀಕವಾದಂತೆ ಕಾಣಿಸುತ್ತದೆ. ಆದರೆ ಶಿಷ್ಟ ದೈವಗಳಲ್ಲಿ ಕೆಲವು ಪುರುಷ ದೈವಗಳಿಗೆ ಮೀಸೆ ಇಲ್ಲದ್ದು ಗೋಚರಿಸುತ್ತದೆ. ಜನಪದ ದೈವಗಳು ಮಾತನಾಡಿದರೆ ಆಧುನಿಕ ದೈವಗಳು ಮಾತನಾಡುವುದಿಲ್ಲ. ಜನಪದರು ಇರುವ ಹಟ್ಟಿಗೆ ದೈವಗಳು ಸಾಗಿ ಹೋಗುತ್ತವೆ. ಆದರೆ ಅಧುನಿಕ ದೈವ ಇರುವ ಸ್ಥಳಕ್ಕೆ ಹೋಗಿ ಪೂಜೆ ಮುಗಿಸಿಕೊಂಡು ಬರುವ ವಾಡಿಕೆ ಈಗಲೂ ಇದೆ.

ಇವತ್ತಿನ ಸಂದರ್ಭದಲ್ಲಿ ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯಿಂದಲೂ ಜನಪದ ಕೃಪಾಶಕ್ತಿಯು ಕುಂಠಿತವಾಗುತ್ತಿದೆ. ಅಲ್ಲದೆ ಪ್ರತಿಷ್ಠಿತ ವರ್ಗದವರ ಶಿಷ್ಠ ದೈವಗಳು ಸಮಾಜದಲ್ಲಿ ತಮ್ಮನ್ನು ಪೂಜಿಸುವ ವರ್ಗದವರಂತೆಯೇ ಪ್ರಭಾವಶಾಲಿಗಳಾಗಿ ಜನಪದ ದೈವಗಳನ್ನು ಹಿಂದೂಡತೊಡಗಿವೆ. ಶಿಷ್ಠ ಮೌಲ್ಯಗಳ ದಾಳಿಗೆ ಜನಪದ ಮೌಲ್ಯಗಳ ತುತ್ತಾಗುತ್ತಿರುವುದರಿಂದ ಸಮಾಜದ ಜೊತೆಗೆ ಗ್ರಾಮದೈವಗಳ ಸಂಬಂಧ ಸಡಿಲವಾಗುತ್ತಿದೆ. (ಸಿದ್ಧಲಿಂಗಯ್ಯ) ಇದಲ್ಲದೆ ಜನಪದ ಪೂಜಕರು ಸಹ ಇಂದು ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳುತ್ತಿದ್ದಾರೆ. ಮೂಲ ಪೂಜಾರಿಕೆ ವೃತ್ತಿಯನ್ನು ಅವರ ಮಕ್ಕಳು ಬಯಸುತ್ತಿಲ್ಲ. ಜೊತೆಗೆ ಉನ್ನತ ವ್ಯಾಸಾಂಗದತ್ತ ಮನಸ್ಸನ್ನು ಹರಿಸುತ್ತಿರುವುದರಿಂದ ಜನಪದ ದೈವಗಳು ಸಹಜವಾಗಿಯೇ ಕಣ್ಮರೆಯಾಗುತ್ತಿವೆಯೆಂದು ತೋರುತ್ತದೆ.

ಮೊದಲು ಜನಸಂಖ್ಯೆ ಕಡಿಮೆ ಇತ್ತು ಅದಕ್ಕಾಗಿ ಜನಹೆಚ್ಚು ಬೆಳೆದು ಆರಾಮಾಗಿ ಉಂಡು ತಿಂದಿದ್ದು ಇಷ್ಟಷ್ಟು ಸುಖವನ್ನುಂಟು ಮಾಡಲು ಗ್ರಾಮದೇವತೆಯನ್ನು ಬೇಡಿಕೊಂಡು ಪೂಜಿಸುವುದು ಸಹಜವಾಗಿತ್ತು ಆದರೆ ಈಗ ಜನಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಬೇರೆ ಬೇರೆ ಸಮಸ್ಯೆಗಳು ಹುಟ್ಟಿಕೊಳ್ಳುತ್ತಿವೆ. ಮೊದಲು ಹಳ್ಳಿಯಲ್ಲಿದ್ದ

ಜನ ಬೇರೆ ಊರುಗಳಿಗೆ ವಲಸೆ ಹೋಗುವುದು, ಆ ಹಳ್ಳಿಗಳಿಗೆ ಬೇರೆ ಊರಿನವರು ಬಂದು ನೆಲೆಸುವುದು ನಡೆದಿದೆ. ಮನುಷ್ಯನಿಗೆ ಈಗ ಹೊಟ್ಟೆಗೆ ಹಿಟ್ಟು ಮೈಗೆ ಬಟ್ಟೆ, ಇರಲು ಮನೆ, ಖರ್ಚಿಗೆ ದುಡ್ಡು ಒದಗಿಸುವುದೊಂದೇ ಮುಖ್ಯ ಚಿಂತೆಯಾಗಾದೆ. ಈಗ ಅವರಷ್ಟಕ್ಕೆ ಅವರಾಗಿರುವುದರಿಂದ ಮೊದಲಿನಂತೆ ಎಲ್ಲರೂ ಸೇರಿ ಗ್ರಾಮ ದೇವತೆಯ ಉತ್ಸವ, ಪೂಜೆ ಮಾಡುವ ಯೋಜನೆ ಬಿಟ್ಟಿರುವುದರಿಂದ ಗ್ರಾಮ ದೇವತೆಯ ಪ್ರಭಾವ ಕುಗ್ಗಲು ಕಾರಣವಾಗಿದೆ.

ತಿಂಗಳಿನಿಂದ ತಿಂಗಳಿಗೆ ಬಾಜಾರದ ಬೆಲೆಗಳು ಗಗನದಂತೆ ಬೆಳೆಯುತ್ತ ಹೋರಟಿರುವುದರಿಂದ ಜನಸಂಖ್ಯೆ ವರುಷದಿಂದ ವರ್ಷಕ್ಕೆ ಹೆಚ್ಚಾಗುತ್ತ ನಡೆದಿರುವುದರಿಂದ ಈಗ ಕುಟುಂಬವನ್ನೇ ರಕ್ಷಿಸುವದೇ ಕಠಿಣದ ಪರಿಸ್ಥಿತಿಯಾಗಿದೆ. ಹೊಟ್ಟೆ ಬಟ್ಟೆಗೆ ಈಗ ಸರಿಹೊಗದಿರುವಾಗ ದೈವಗಳ ಪೂಜೆ, ಉತ್ಸವ, ಮಾಡುವದೆಲ್ಲಿಂಬ? ಎಂಬ ಪ್ರಶ್ನೆ ಏಳುತ್ತಿದೆ. ಇದರ ಜೊತೆಗೆ ಆಧುನಿಕ ಪ್ರಭಾವದಿಂದ ಗ್ರಾಮದ ಹಿಂದಿನ ಅಮೆಗತಿಯ ವೇಗಕ್ಕೆ ಹೊಸ ರೀತಿಯ ಚಲನ-ವಲನ, ಆಂದೋಲನಗಳು ಹುಟ್ಟಿಕೊಂಡು ಗ್ರಾಮೀಣ ಮನಸ್ಸಿನ ಮೇಲೆ ತೀವ್ರ ಪ್ರಭಾವ ಆಗಿ ಜನರ ಧಾರ್ಮಿಕ ನಂಬಿಕೆಗಳು ಶಿಥಿಲಗೊಳ್ಳುತ್ತಿವೆ.

ಆಧುನಿಕ ಯುಗದ ಪ್ರಭಾವ ಸಂಡೂರ ಗ್ರಾಮದ ಮೇಲೆ ಕಡಿಮೆ ಆದ್ದರಿಂದ ಗ್ರಾಮದೇವತೆಗಳ ಪ್ರಭಾವ ಇಲ್ಲಿ ಆದಷ್ಟು ಹೆಚ್ಚಾಗಿ ಇರುವುದು ಕಾಣಸಿಗುತ್ತವೆ. ಹಳ್ಳಿಗಳಲ್ಲಿ ಬುಡಕಟ್ಟಿನ ಜನರು ಇನ್ನೂ ಉಳಿದಿರುವುದರಿಂದ ಗ್ರಾಮ ದೇವತೆಗಳ ಗುಡಿ ನಾಶಪಡಿಸಿದರೆ, ಪಾಪ ಬರುವುದೆಂಬ ಕಲ್ಪನೆ ಇನ್ನೂ ಇದೆ. ಬೇರೆ ದೇವತೆಗಳು ಆ ಊರಿನಲ್ಲಿ ಕಾಲಿಡದಿರುವುದರಿಂದ, ಮಾಂಸ ತಿನ್ನುವ ಜನರು ಹೆಚ್ಚಾಗಿರುವುದರಿಂದ, ಶಿಕ್ಷಣ ಹೊಂದಿದವರು ಅಧಿಕ ಇರುವುದರಿಂದ ಇನ್ನೂ ಈ ಭಾಗದಲ್ಲಿ ಗ್ರಾಮದೈವಗಳ ಪ್ರಭಾವ ಇದ್ದದ್ದು ಕಂಡು ಬರುವುದು. ಸಂಡೂರು ಪ್ರದೇಶದಲ್ಲಿ ಗ್ರಾಮದೈವಗಳ ಉಪಾಸನೆ ಒಂದು ಮೋಜಿನ ಜಾತ್ರೆಯಾಗಿದ್ದದ್ದು ಕಾಣಸಿಗುತ್ತದೆ. ಸಂಡೂರು ಗ್ರಾಮದಲ್ಲಿ ಬ್ರಹ್ಮಣರು ದತ್ತಾತ್ರೇಯ ಹಾಗೂ ರಾಘವೇಂದ್ರ ಸ್ವಾಮ ಮತ್ತು ಶಂಕರಾಚಾರ್ಯರನ್ನು, ಲಿಂಗಾಯಿತರು, ಶರಣರಾದ ಬಸವೇಶ್ವರನಿಗೆ, ವೀರಭದ್ರ ದೈವಕ್ಕೆ, (ದೇವರನ್ನು) ಮರಾಠರು ಅಂಬಾಭವಾನಿಯನ್ನು ಹಿಂದುಳಿದವರು ಅಂದರೆ ಕೆಳವರ್ಗದವುರ ಉಡುಚಲಮ್ಮ, ಊರಮ್ಮ, ಮುಂತಾದ ದೇವರನ್ನು, ಮುಸಲ್ಮಾನರು ದರ್ಗಾಗಳಿಗೆ ಪೂಜಿಸುವರು. ಹೀಗೆ ಆಧುನಿಕತೆ ಬೆಳೆದರು ಸಂಡೂರ ಪ್ರದೇಶದಲ್ಲಿ ಎಲ್ಲಾ ಧರ್ಮದವರು ತಮ್ಮ ತಮ್ಮ ದೈವವನ್ನು ಪೂಜಿಸಿದರು ಒಬ್ಬರಿಗೊಬ್ಬರೂ ಹಬ್ಬ ಉತ್ಸವಗಳಲ್ಲಿ ಪಾಲ್ಗೊಳ್ಳುವುದು ಕಾಣಸಿಗುತ್ತದೆ.

"ಆಧುನಿಕ ನಾಗರೀಕತೆಯ ತರ್ಕ ಒಂದು ಏಕರೂಪೀ ಜೀವನಕ್ರಮವನ್ನು ರೂಪಿಸುವುದಾಗಿದೆ. ಹಳೆಯ ಜ್ಞಾನವವ್ಯಸ್ಥೆಗಳು ಭಾವನಾಲಯಗಳು ತೀವ್ರರೀತಿಯ ಹಿಂಸೆಯನ್ನು ಅನುಭವಿಸಿ ಕಣ್ಮರೆಯಾಗುತ್ತಿದೆ". ಗ್ರಾಮದೇವತೆಗಳು ಶೀಘ್ರುವಾಗಿ ಕಣ್ಮರೆಯಾಗುತ್ತಿರುವುದನ್ನು ಕೂಡ ಈ ನಾಗರೀಕತೆಯ ತರ್ಕದಲ್ಲೇ ನೋಡಬೇಕಾಗಿದೆ. ಆಧುನಿಕ ಬಂಡವಾಳಶಾಹಿ ನಾಗರೀಕತೆ ತನಗಿಂತ ಭಿನ್ನವಾದ ಲೋಕಗ್ರಹಿಕೆ, ನಂಬಿಕೆ, ಆಚರಣಾ ಕ್ರಮಗಳನ್ನು ನಿರ್ದಯವಾಗಿ ಹೊಸಕಿಹಾಕುತ್ತಿದೆ. ಆಧುನೀಕರಣದ ಸಂದರ್ಭದಲ್ಲಿ ಗ್ರಾಮ ದೇವತಾ ವ್ಯವಸ್ಥೆ ಸೂಚಿಸುತ್ತಿರುವ ಮೌಲ್ಯಗಳು ಮತ್ತು ಎದುರಿಸುತ್ತಿರುವ ಸಮಸ್ಯೆಗಳನ್ನು ಸಾರಾಂಶರೂಪದಲ್ಲಿ ಕೆಳಗೆ ಹೇಳಲಾಗಿದೆ.

ಗ್ರಾಮದೇವತೆಗಳು ಸ್ತ್ರೀ ಚೈತನ್ಯ ಶಕ್ತಿಯ ಆರಾಧನೆ ಎಂದರೆ ತಪ್ಪಾಗಲಾರದು. ಕೆಳವರ್ಗಗಳು ಲೋಕವನ್ನು ನೋಡುವ ಕ್ರಮವನ್ನು ಇವು ಸೂಚಿಸುತ್ತವೆ. ಸ್ಥಳೀಯ ಮೂಲದಿಂದ ಬಂದ ಈ ಗ್ರಾಮದೇವತೆಗಳ ಅರ್ಚಕರು ಸಾಮಾನ್ಯವಾಗಿ ಕೆಳ ಜಾತಿಗೆ ಸೇರಿದವರಾಗಿರುತ್ತಾರೆ. ಆದ್ದರಿಂದ ಗ್ರಾಮದೇವತೆಗಳು ಇಷ್ಟಪಡುವ ಆಹಾರವು ಕೆಳವರ್ಗದ ಆಹಾರ ಪದ್ಧತಿಗೆ ಸಂಬಂದಿಸಿದ್ದೆ ಆಗಿರುತ್ತದೆ. ಆಯಾ ಜನವರ್ಗದ ಭಾಷೆ, ಉಪಭಾಷೆಗಳೇ ಆಗ

ಬಳಕೆಯಾಗುವುದನ್ನು ಕಾಣಬಹುದು. ಹೀಗೆ ಗ್ರಾಮದೇವತೆಗಳು ತಮ್ಮ ಸಮಾಜದ ವೈದಿಕೇತರ ಜನವರ್ಗದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಗ್ರಾಮದೇವತೆಯ ಪರಿಕಲ್ಪನೆ ಮೂರು ನೆಲೆಗಳಲ್ಲಿ ಕ್ರಿಯಾಶೀಲವಾಗಿದೆ. ಅವು ಮನುಷ್ಯ ಮತ್ತು ಸಮಾಜ, ಮನುಷ್ಯ ಮತ್ತು ಮನುಷ್ಯ, ಮನುಷ್ಯ ಮತ್ತು ನಿಸರ್ಗ ಸಂಬಂಧದ ನೆಲೆಯಲ್ಲಿ ಗ್ರಾಮದೇವತೆಯ ಪರಿಕಲ್ಪನೆ ವರ್ಣ ಸಂಕರದ ಮೇಲೆ ಹೇರಿದ ನಿಷೇಧವಾಗಿ ಕಾಣುತ್ತದೆ. ಮನುಷ್ಯ ಮತ್ತು ನಿಸರ್ಗದ ನೆಲೆಯಲ್ಲಿ ಗ್ರಾಮದೇವತೆಯ ಪರಿಕಲ್ಪನೆ ಪ್ರಕೃತಿಯ ವಿವಿಧ ವ್ಯಾಪಕಗಳ ಆರಾಧನೆಯಾಗಿದೆ.

ಗ್ರಾಮದೇವತೆ ಮಾನವ ತನ್ನ ಸಾಂಘಿಕ ಜೀವನದಲ್ಲಿ ಗ್ರಾಮಗಳನ್ನು ಕಟ್ಟಿಕೊಂಡ ನಂತರದ ಕಲ್ಪನೆಯಾಗಿದ್ದು, ಈ ಪರಿಕಲ್ಪನೆ ವಿಸ್ತರಣೆಯಾದಂತೆಲ್ಲಾ ಶಿಷ್ಟದೇವತೆಗಳ ಸಂಪರ್ಕ ಇವುಗಳಿಗೆ ಒದಗಿಬಂದು ಅವುಗಳು ಬದಲಾವಣೆಗೆ ಒಳಗಾಗುತ್ತವೆ. ಈ ಬದಲಾವಣೆ ಮುಖ್ಯವಾಗಿ ಕಂಡುಬರುವುದು ವೈದಿಕೀಕರಣದಲ್ಲಿ. ಹೀಗೆ ವೈದಿಕೀಕರಣಕ್ಕೆ ಪಕ್ಕಾಗುವ ಗ್ರಾಮದೇವತೆಗಳ ಸ್ವರೂಪದಲ್ಲಿ ಗುಣ ಸ್ವಭಾವದಲ್ಲಿ ಅಪಾರವಾದ ಬದಲಾವಣೆಗೆ ಒಳಗಾಗುತ್ತವೆ. ವೈದಿಕ ಅರ್ಚಕರ ಸಂಪರ್ಕ ಬಂದ ಕೂಡಲೇ ಗ್ರಾಮದೇವತೆಗಳ ಕಿವಿಯ ಮೇಲೆ ಸಂಸ್ಕೃತದ ಮಂತ್ರಘೋಷಣೆಗಳು ಬೀಳಲು ಪ್ರಾರಂಭವಾಗಿ ಜನಪದ ಅರ್ಚನಾವಿಧಾನವೇ ಕಣ್ಮರೆಯಾಗುತ್ತದೆ. ಕೋಣ, ಕುರಿ, ಕೋಳಿಗಳ ಬಲಿಯ ಬದಲು ತೆಂಗಿನಕಾಯಿ, ಬಾಳೆಹಣ್ಣು, ಮೃಷ್ಟಾನ್ನ ಭೋಜನದ ನೈವೇದ್ಯ ಆಗುತ್ತದೆ. ಕೆಲವು ಹಳ್ಳಿಗಳಲ್ಲಿ ಕೋಣನ ಮೈಗೆ ಸೂಜಿಯನ್ನು ಚುಚ್ಚಿ ಅದರ ಮೈಯಿಂದ ರಕ್ತತೆಗೆಯುವ ಪದ್ಧತಿ ಈಗ ಆರಂಭವಾಗಿದೆ. ಅಹಿಂಸೆಯ ಪರಿಕಲ್ಪನೆಯ ಪ್ರಭಾವವು ಇದಕ್ಕೆ ಕಾರಣವಿರಬಹುದು. ದೇವತೆಗಳಿಗೆ ಬೆಳ್ಳಿ ಬಂಗಾರ ತೊಡುಗೆ ಆರಂಭವಾಗುತ್ತದೆ. ಅನೇಕ ಸಂದರ್ಭದಲ್ಲಿ ದೇವತೆಯ ಹೆಸರೆ ಬದಲಾವಣೆ ಆಗುತ್ತದೆ. ಕಾಳಮ್ಮ ಕಾಳಿಕಾ ಎಂಬ ಹೆಸರನ್ನು, ಮೂಕಮ್ಮ ಮೂಕಾಂಬಿಕೆ ಹಾಗೆ ಉಡುಚವ್ವ ಉಡುಚಲಮ್ಮ ಎಂಬ ಹೆಸರನ್ನು ಪಡೆಯುತ್ತಾಳೆ.

ಸಿಗುವ ಸೌಲಭ್ಯಗಳೆಲ್ಲ ಗ್ರಾಮದೇವತೆಗಳಿಗೂ ಸಿಗಲು ಪ್ರಾರಂಭವಾದದ್ದು ಆಧುನೀಕರಣದ ಪರಿಣಾಮ. ಗ್ರಾಮದೇವತೆಯ ಹಬ್ಬದಲ್ಲಿ ಅನುವಂಶೀಕವಾಗಿ ಮಡಿವಾಳರು ಹಿಡಿಯುತ್ತಿದ್ದ ಪಂಜಿನ ಬದಲು ಟ್ಯೂಬ್ ಲೈಟ್‌ಗಳನ್ನು ಹಿಡಿದು ಮೆರವಣಿಗೆ ಮಾಡುತ್ತಾರೆ. ಕುಂಬಾರ ಮಾಡಿಕೊಡುತ್ತಿದ್ದ ಮಣ್ಣಿನ ಹಣತೆಯ ಬದಲು ವಿದ್ಯುತ್‌ದೀಪಗಳು ಬೆಳಗುತ್ತವೆ. ಕ್ಷೌರಿಕನ ಓಲಗ ಮತ್ತು ಅಸ್ಪೃಶ್ಯನ ತಮಟೆಯ ಬದಲು ಗ್ರಾಮಫೋನ್ ರೆಕಾರ್ಡಗಳು ಧ್ವನಿವರ್ಧಕದ ಮೂಲಕ ಕೇಳಿಸುತ್ತವೆ. ಇವು ಹಳ್ಳಿಯ ಹೆಂಗಸರು ಗ್ರಾಮದೇವತೆಗಳನ್ನು ಕುರಿತು ಹಾಡುವ ಹಾಡುಗಳನ್ನು ಮೂಲೆಗುಂಪು ಮಾಡುತ್ತವೆ. ಟ್ರಾಕ್ಟರಿನಲ್ಲಿ ಗ್ರಾಮದೇವತೆಯ ಮೆರವಣಿಗೆ ಹೊರಡುವುದರಿಂದ ಮಡಿವಾಳರು, ಹಾಸುತ್ತಿದ್ದ ನಡೆಮೂಡಿ ಇಲ್ಲವಾಗುತ್ತದೆ. ಆಧುನಿಕ ವಾಹನ ಸೌಕರ್ಯ ವ್ಯವಸ್ಥೆಯು ಜಾತ್ರೆ ಹಬ್ಬಗಳಿಗೆ ಹೆಚ್ಚು ಹೆಚ್ಚು ಜನರನ್ನು ಆಕರ್ಷಿಸಲು ಸಹಾಯಕವಾಗಿದೆ. ಜಾತ್ರೆಯಲ್ಲಿ ನಾಟಕ ಕಂಪನಿಗಳಲ್ಲದೆ ಟೂರಿಂಗ್ ಟಾಕೀಸುಗಳೂ, ಸರ್ಕಸ್ ಕಂಪನಿಗಳೂ ಉಂಟು. ಮಡಿಕೆ ಕುಡಿಕೆಗಳಿದ್ದ ಮಾರುಕಟ್ಟೆಯಲ್ಲಿ ಆಧುನಿಕ ಸ್ಟೀಲ್ ಮತ್ತು ಪ್ಲಾಸ್ಟಿಕ್ ಪಾತ್ರೆಗಳನ್ನು ಕಾಣುತ್ತೇವೆ. ಬೆಂಡು ಬತ್ತಾಸು ಮಾರುತ್ತಿದ್ದ ಜಾಗದಲ್ಲಿ ಆಧುನಿಕ ತಿಂಡಿ ತಿನಿಸುಗಳನ್ನು ಮಾರುವ ಹೋಟೆಲುಗಳು ಕಂಡುಬರುತ್ತವೆ. ಹೀಗೆ ಗ್ರಾಮದೇವತೆಯ ಜಾತ್ರೆಗಳು ವಾಣಿಜ್ಯ ಸ್ವರೂಪವನ್ನು ಪಡೆದುಕೊಳ್ಳುತ್ತಿವೆ. ಜನಪದರು ತಮ್ಮ ಮತ್ತು ಮಕ್ಕಳ ಹಾಗೂ ದನಕರುಗಳ ಆರೋಗ್ಯವನ್ನು ಕಾಪಾಡಲು ಗ್ರಾಮದೇವತೆಗಳ ಮೊರೆಹೋಗುತ್ತಿದ್ದರು. ಆದರೆ ಈಗ ಆಸ್ಪತ್ರೆಗಳ ಸ್ಥಾಪನೆಯಿಂದಾಗಿ ಜನಗಳ ಮತ್ತು ದನಗಳ ಆರೋಗ್ಯವನ್ನು ನೋಡಿಕೊಳ್ಳುವುದರಿಂದ ಗ್ರಾಮದೇವತೆಗಳನ್ನು ಗ್ರಾಮೀಣರು ಕೇವಲ

ಮಾನಸಿಕವಾಗಿ ಅವಲಂಬಿಸಿದ್ದಾರೆ. ಕಳ್ಳತನ ಆಸ್ತಿಯ ಜಗಳಗಳಿಗೆ ಗ್ರಾಮೀಣರು ಗ್ರಾಮದೇವತೆಗಳನ್ನು ಪರಿಹಾರಕ್ಕಾಗಿ ಅವಲಂಬಿಸುವುದರ ಬದಲು ಪೋಲೀಸ್ ಠಾಣೆಗಳು ಮತ್ತು ಕೋರ್ಟು ಕಛೇರಿಗಳನ್ನು ಆಶ್ರಿಯಿಸುತ್ತಾರೆ.

ಜನರ ಒಗ್ಗಟ್ಟಿನ ಸಂಕೇತವಾಗಿದ್ದ ದೇವತೆಯ ಜಾಗದಲ್ಲಿ ಗ್ರಾಮೀಣ ಮುಖಂಡರುಗಳು ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾಗಿ ಅಧಿಕಾರ ಚಲಾಯಿಸುತ್ತಾರೆ. ಗ್ರಾಮೀಣ ಜನತೆ ತಮ್ಮ ವಿವಿಧ ರೀತಿಯ ಸಮಸ್ಯೆಗಳಿಗೆ (ರೋಗ ರುಜಿನ, ಜಗಳ, ಸಂಕಟ ಇತ್ಯಾದಿ) ಇದ್ದ ಪಾರಂಪರಿಕ ತಂತ್ರಜ್ಞಾನದ ಒಂದು ಅವಿಭಾಜ್ಯ ಅಂಗವನ್ನಾಗಿ ಗ್ರಾಮದೇವತೆಯನ್ನು ಪರಿಗಣಿಸುತ್ತಿದ್ದರು. ಹಿಂದೆ ಕಾಯಿಲೆಯಾದಾಗ ಮದ್ದು ಕೊಡಿಸುವುದು ಎಷ್ಟು ಅನಿವಾರ್ಯವೋ ಅಷ್ಟೆ ಅನಿವಾರ್ಯ ಗ್ರಾಮದೇವತೆಗೆ ಹರಕೆ ಹೊರುವುದಾಗಿತ್ತು. ಆದರೆ ಆಧುನಿಕರಣದ ಪರಿಣಾಮವಾಗಿ ಹೊಸ ಪರಿಹಾರ ವ್ಯವಸ್ಥೆಗಳು ಪ್ರವೇಶವಾಗುತ್ತಿದ್ದಂತೆ ಗ್ರಾಮದೇವತೆಯ ಕೃಪಾಶಕ್ತಿಗೆ ಈ ತಂತ್ರಜ್ಞಾನದಲ್ಲಿ ಬಹುಮಟ್ಟಿಗೆ ಕಡಿಮೆ ಸ್ಥಾನ ಸಿಗುತ್ತದೆ. ಶಿಷ್ಠ ದೈವಗಳು ಸಮಾಜದಲ್ಲಿ ತಮ್ಮನ್ನು ಪೂಜಿಸುವ ವರ್ಗದವರಂತೆಯೇ ಪ್ರಭಾವಶಾಲಿಗಳಾಗಿ ಗ್ರಾಮದೇವತೆಗಳನ್ನು ಹಿಂದೂಡುತ್ತಿವೆ. ಶಿಷ್ಟ ಮೌಲ್ಯಗಳ ದಾಳಿ ಜನಪದ ಮೌಲ್ಯಗಳು ತುತ್ತಾಗುತ್ತಿರುವುದರಿಂದ ಸಮಾಜದ ಜೊತೆಗೆ ದೈವಗಳ ಸಂಬಂಧ ಸಡಿಲವಾಗುತ್ತಿದೆ. ಆಧುನಿಕರಣದಲ್ಲಿ ನಂಬಿಕೆ ಇರುವ ಆಳುವ ವರ್ಗ ಕೆಲವು ಜನಪದ ಆಚರಣೆಗಳನ್ನು ನಿಲ್ಲಿಸುವ ಪಣತೊಟ್ಟಿರುವುದರಿಂದ ಅವು ಕಣ್ಮರೆ ಆಗುತ್ತಿವೆ.

ಇಷ್ಟಾದರೂ ಸಂಡೂರಿನ ಗ್ರಾಮೀಣರಲ್ಲಿ ಹಿಂದೆ ಇದ್ದ ಗ್ರಾಮದೈವಗಳ ಆಚರಣೆಗಳನ್ನು ಕಾಣಬಹುದಾಗಿದೆ. ಅವರು ತಮ್ಮ ಜೀವನ ಕ್ರಮದ ಒಂದು ಭಾಗವಾಗಿ ಈ ದೈವಗಳನ್ನು ಅವಲಂಬಿಸಿದ್ದಾರೆಂದರೆ ತಪ್ಪಾಗದು.

ಅಧ್ಯಾಯ ಆರು

ಉಪಸಂಹಾರ

ಅಧ್ಯಾಯ ಆರು

ಉಪಸಂಹಾರ

ಕರ್ನಾಟಕ ಚರಿತ್ರೆಯನ್ನು ಅವಲೋಕಿಸಿದಾಗ ಕರ್ನಾಟಕವು ಐತಿಹಾಸಿಕ ಮಹತ್ವ ಪಡೆದ ಪ್ರಾಚೀನ ನಾಡಾಗಿದೆ. ಸಾಮ್ರಾಜ್ಯಗಳ ನಿರ್ಮಾಣ ಮತ್ತು ಅವುಗಳ ವ್ಯವಸ್ಥೆಯಲ್ಲಿ ಧಾರ್ಮಿಕ ದರ್ಶನ, ದಿವ್ಯದೃಷ್ಟಿ, ಸಾಹಿತ್ಯ ದೃಷ್ಟಿ, ಕಲಾದೃಷ್ಟಿ ಆದಿಯಾಗಿ ಕಲೋಪಾಸನೆಯಲ್ಲಿ ಹೇಗೆ ಜೀವನದ ಎಲ್ಲ ರಂಗಗಳಲ್ಲಿಯೂ ಕರ್ನಾಟಕದ ಸಾಧನೆ ಸಾರ್ಥಕತೆಯನ್ನು ಪಡೆದಿದೆ. ಅತಿ ಪ್ರಾಚೀನ ಕಾಲದಿಂದಲೂ ಭಾರತೀಯ ಸಂಸ್ಕೃತಿಗೆ ತನ್ನದೆ ಆದ ಉಜ್ವಲ ಪರಂಪರೆಯನ್ನಿತ್ತು ಅದನ್ನು ಬೆಳೆಸಿಕೊಂಡು ಬಂದಿದೆ. ಹಾಗೂ ಇಂತಹ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯ ಒಂದು ತಾಲೂಕು ಸಂಡೂರಾಗಿದೆ.

ಸಂಡೂರು ಗ್ರಾಮದೈವಗಳ ಹಲವು ಮುಖಗಳನ್ನು ಈ ಅಧ್ಯಯನದಿಂದ ನೋಡಬಹುದಾಗಿದೆ. ಆದರೆ ಇದು ಸಂಡೂರು ಗ್ರಾಮದೈವಗಳ ಬಗೆಗಿನ ಕೊನೆಯ ಹಂತವೇನಲ್ಲ. ಏಕೆಂದರೆ ಪ್ರಾರಂಭದಲ್ಲೆ ಹೇಳಿದಂತೆ ಈ ದೈವಗಳದ್ದು ಅಗೋಚರಯುತವಾದ ಒಂದು ಶಕ್ತಿಯಾಗಿರುತ್ತದೆ. ಈ ದೈವ ಶಕ್ತಿಯನ್ನು ಸಾವಿರಾರು ವರ್ಷಗಳಿಂದ ಬಾಳಿ ಬದುಕಿನಲ್ಲಿ ಬೀಡು ಬಿಟ್ಟು ವಿಸ್ತಾರವಾಗಿ ಬೆಳೆದು ಅದರ ನೆರಳನ್ನೀಯುತ್ತಾ ಕ್ರಮಾಗತ ಮಾರ್ಗದಲ್ಲೇ ನಡೆದಿರುವ ಸಂಡೂರು ಜನಪದದ ಜೀವಂತ ದೈವಗಳ ಸಂಸ್ಕೃತಿ ಆಚರಣೆ, ಸಂಪ್ರದಾಯಗಳನ್ನು ಸಂಪೂರ್ಣವಾಗಿ ವಿವೇಚಿಸಿ ಕೊನೆ ಮುಟ್ಟಿಸುವುದು ಕೊನೆಯಾಗದ ಕೆಲಸವೇ ಸರಿ. ಏಕೆಂದರೆ ಸಂಡೂರು ಜನಪದರು ನಂಬಿರುವ ದೈವಶಕ್ತಿ ಒಂದು ಸನಾತನ ವೃಕ್ಷದಂತಿದೆ. ಅದು ಕಾಲದಿಂದ ಮತ್ತು ಸತ್ವಪೂರಿತವಾಗಿ ಬದಲಾವಣೆ ಹೊಂದುತ್ತಾ ಸನಾತನವಾಗಿದೆ. ಆದರೆ ಅದು ನಿತ್ಯ ಚೇತನ. ಹೊಸ ಹೊಸ ಬಿಳಲುಗಳನ್ನು ಬೇರೂರಿ ಬದಲಾವಣೆಗೊಳ್ಳುತ್ತಿದೆ. ಹೀಗೆ ಹಿಂದಿನ ಪರಂಪರೆಯನ್ನು ಚಿತ್ರಿಸಲು ಒಂದು ಸಣ್ಣ ಪ್ರಯತ್ನವನ್ನು ನಾನಿಲ್ಲಿ ಮಾಡಿದ್ದೇನೆ.

ಸಂಡೂರು ಹಲವು ಸಮುದಾಯಗಳಿಂದ ಕೂಡಿದ ವೈವಿಧ್ಯಮಯವಾದ ಒಂದು ತಾಣ. ಇಲ್ಲಿನ ಸಮುದಾಯಗಳಷ್ಟೆ ಇಲ್ಲಿನ ಜಾನಪದ ದೈವಗಳು ವೈವಿಧ್ಯಮಯವಾಗಿಯೂ ವಿಶಿಷ್ಟತೆಯಿಂದ ಕೂಡಿವೆ. ಇಲ್ಲಿನ ಸ್ಥಳ ಮತ್ತು ಸಮುದಾಯಗಳ ವೃತ್ತಿ, ಸಂಪ್ರದಾಯ, ಆಚರಣೆ, ನಂಬಿಕೆಗಳು, ಜನಪದರ ಹಾಡುಗಳು ಮುಂತಾದವು ಅವುಗಳದೇ ಆದ ಪ್ರಾದೇಶಿಕ ಹಂತದಲ್ಲಿ ವೈವಿಧ್ಯಮಯವಾಗಿ ಕಂಡುಬರುತ್ತದೆ. ಅಂದರೆ ದೈವಗಳನ್ನು ಕುರಿತು ಸಂಪ್ರದಾಯ, ಆಚರಣೆ, ಚರಿತ್ರೆಗಳಲ್ಲಿ ಪ್ರತ್ಯೇಕತೆ ಕಂಡರೂ ಅವು ಜನಪದ ಹಾಡುಗಳಲ್ಲಿ ಹಿಡಿದಿಟ್ಟಿವೆ. ಹೀಗೆ ಇವೆಲ್ಲವುಗಳನ್ನು ಕೇಳುವ ಮೂಲಕ, ಅವುಗಳನ್ನು ಅನುಸರಿಸಿ ಹಾಡುವ ಮೂಲಕ ಈಗಿನವರು ಕಲಿಯುವಂತಹದು ಸಾಕಷ್ಟಿದೆ. ಇವು ಮೌಖಿಕ ಪರಂಪರೆಯ ಮೂಲಕ ಮುಂದುವರೆಯುತ್ತವೆ.

ಕ್ರಿಸ್ತಶಕದ ಆರಂಭದಿಂದ ಹಲವು ಸಂಪ್ರದಾಯ ಆಚರಣೆಯ ಹೊಸ ಅಂಶಗಳನ್ನು ಸಂಡೂರು ಪ್ರದೇಶವು ರೂಢಿಸಿಕೊಂಡಿದೆ. ಭೌಗೋಳಿಕವಾಗಿ ಈ ಪ್ರದೇಶವು ವಿಭಿನ್ನ ರೀತಿಯಿಂದ ಕಾಣಬರುತ್ತದೆ. ಏಕೆಂದರೆ ಸುತ್ತಲೂ

ಗುಡ್ಡಬೆಟ್ಟಗಳಿಂದ ಆವೃತವಾದ ಮತ್ತು ಹಚ್ಚ ಹಸುರಿನಿಂದ ಕೂಡಿದ ಹಾಗೂ ಕೆಂಪು ಗುಡ್ಡಗಳಿರುವುದನ್ನು ಕಾಣಬಹುದು. ದೊಡ್ಡದಾದ ನಾರೀ ಹಳ್ಳ ಇರುವುದರಿಂದ ಇಲ್ಲಿ ನೀರಿನ ಸಮಸ್ಯೆ ಇಲ್ಲ. ಕೃಷಿಗೆ ಯೋಗ್ಯವಾದ ಭೂಮಿಯು ಲಭ್ಯವಿರುವುದರಿಂದ ಆಹಾರ ಧಾನ್ಯಗಳನ್ನು ಬೆಳೆಯುವ ಅವಕಾಶ ಹೇರಳವಾಗಿತ್ತು. ಗುಡ್ಡಗಾಡು ಪ್ರದೇಶ ಪಶು ಸಾಕಾಣಿಕೆಗೆ ಒಂದು ಪ್ರಶಸ್ತ ಪರಿಸರವನ್ನುಂಟು ಮಾಡಿತ್ತು. ಆದರೆ ಈಗಿನ ಸಂಡೂರಿನ ಭೌಗೋಳಿಕ ಪರಿಸ್ಥಿತಿ ತುಂಬಾ ಹದಗೆಡುತ್ತಿದೆ. ಏಕೆಂದರೆ ಇಲ್ಲಿ ಕಬ್ಬಿಣದ ಅದಿರನ್ನು ತೆಗೆಯುವ ದೃಷ್ಟಿಯಿಂದ ಬಂಡವಾಳಶಾಹಿಗಳು ಸರ್ಕಾರದ ನಿಯಮಕ್ಕೆ ವಿರುದ್ಧವಾಗಿ ಹೆಚ್ಚಾಗಿ ಆಳವಾಗಿ ತೆಗೆಯುವುದರಿಂದ ಭೂಮಿಯಲ್ಲಿರುವ ಸತ್ವವು ನಾಶವಾಗುತ್ತದೆ. ಗುಡ್ಡಗಳನ್ನು ಸ್ಫೋಟಕಗಳಿಂದ ಸ್ಫೋಟಿಸುವುದರಿಂದ ಮಳೆಯ ಅಭಾವವು ತಲೆದೋರಿದೆ. ಇದರಿಂದ ರೈತರಿಗೆ ತುಂಬಲಾರದ ನಷ್ಟವುಂಟಾಗಿದೆ. ಒಂದು ರೀತಿಯಲ್ಲಿ ಸುಂದರವಾದ ಸಂಡೂರಿನ ಪರಿಸರವು ನಾಶವಾಗುತ್ತಿದೆ. ಹೀಗೆ ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಸಂಡೂರಿನ ನಾಗರಿಕರು ಎಚ್ಚೆತ್ತು ಕೊಳ್ಳುವ ಅವಶ್ಯಕತೆ ಇದೆ.

ಆಧುನಿಕತೆಯು ಸಂಡೂರಿನ ಪರಿಸರವನ್ನು ನುಂಗಿ ನೊಣೆದುಹಾಕುತ್ತಿದೆ. ಪಕ್ಕದಲ್ಲಿಯೇ ಜಿಂದಾಲ್‌ನಂತಹ ರಾಕ್ಷಸಾಕಾರದ ಕೈಗಾರಿಕೆಯು ತಲೆಯೆತ್ತಿದೆ. ಜಾಗತೀಕರಣವು ಹಳ್ಳಿಯಿಂದ ದಿಲ್ಲಿಯವರೆಗೂ ಎಲ್ಲರ ಜೀವನವಿಧಾನವನ್ನು ಪ್ರಭಾವಿಸಲು ಯತ್ನಿಸುತ್ತಿದೆ. ಇಂತಹ ಸಂಕ್ರಮಣ ಸ್ಥಿತಿಯಲ್ಲಿ ಉಡುಚಲಮ್ಮ ನಮ್ಮ ಸಂಸ್ಕೃತಿಯ ಜೀವಾಳವಾಗಿ, ಎಲ್ಲ ಜನಪದರ ಆಶಯವಾಗಿ, ಆಧುನಿಕ ಬದುಕಿನ ಬರ್ಬರತೆಯ ಗಾಯಗಳನ್ನು ಮಾಯಿಸುವ ಶಕ್ತಿಯಾಗಿದ್ದಾಳೆಂದರೆ ತಪ್ಪಲ್ಲ. ಆಕೆ ಕೇವಲ ಶಕ್ತಿಮಾತ್ರವಾಗಿರದೆ ಎಲ್ಲ ಕೆಡುಕಿಗೂ ಪ್ರತಿರೋಧದ ಸಂಕೇತವಾಗಿದ್ದಾಳೆ. ಆದಿಮ ಜಗತ್ತಿನಿಂದ ಆಧುನಿಕದವರೆಗೂ ತನ್ನ ನಿರಂತರ ಅಸ್ತಿತ್ವವನ್ನು ಸಾಬೀತುಪಡಿಸುತ್ತಲೇ ನೊಂದ ಆತ್ಮಗಳಿಗೆ ತಂಪೆರೆಯುವ ಜಲಧಾರೆಯಾಗಿದ್ದಾಳೆ. ಆ ಮೂಲಕ ಜನಪದದ ಬದುಕಿನ ಶ್ರೇಷ್ಠ ಮೌಲ್ಯಗಳಿಗೆ, ಬದುಕಿನ ಪ್ರೀತಿಗೆ ಸಾವಿಲ್ಲವೆಂದು ಸಾರುತ್ತಿದ್ದಾಳೆ.

ಇದು ನನ್ನ ಅಧ್ಯಯನದ ಫಲಶ್ರುತಿಯೆಂದು ಹೇಳಿಕೊಳ್ಳುವುದರಲ್ಲಿ ನನಗಾವ ಸಂಕೋಚವೂ ಇಲ್ಲ.

ಕ್ಷೇತ್ರಕಾರ್ಯದ ಸಂಶೋಧನೆಯೆನ್ನುವುದು ನಿಂತನೀರಲ್ಲ. ಸದಾ ಹರಿಯುತ್ತಲೇ ಇರುತ್ತದೆ. ನಾನು ತೆಗೆದುಕೊಂಡ ಈ ಸಂಡೂರು ಪರಿಸರದ ಗ್ರಾಮದೈವಗಳು ಕುರಿತಾದ ನನ್ನ ಅಧ್ಯಯನವು ನನ್ನ ಮಟ್ಟಿಗೆ ಕೊನೆಗೊಂಡಿದ್ದರೂ ಹಾಗೆಯೆ ಅದನ್ನು ಮತ್ತೊಬ್ಬ ಸಂಶೋಧಕರು ಮುಂದುವರೆಸಬಹುದು. ಹೀಗೆ ಸಂಡೂರು ಗ್ರಾಮಕ್ಕೆ ಸಂಬಂಧಿಸಿದ ಕ್ಷೇತ್ರಕಾರ್ಯದಲ್ಲಿ ಸಂಗ್ರಹವಾದ ಮಾಹಿತಿಯನ್ನು ತಿಳಿಸುವ ಪ್ರಯತ್ನವನ್ನು ನಾನಿಲ್ಲಿ ಮಾಡಿದ್ದೇನೆ. ಆದರೂ ಅದು ಅಂತಿಮವಲ್ಲ, ಏಕೆಂದರೆ ಸಂಶೋಧನೆಯೆನ್ನುವುದು ಸದಾ ಹರಿಯುವ ಹೊಳೆಯಾಗಿರುತ್ತದೆ ಎಂಬುದು ನನ್ನ ಗ್ರಹಿಕೆಯಾಗಿದೆ.

ಅನುಬಂಧಗಳು

ಅನುಬಂಧ ೧

ಸ್ತ್ರೀದೈವಗಳು, ಪುರುಷ ದೈವಗಳು, ಹಾಡುಗಳು

ಉಡುಚಮ್ಮ

ನೆನಸಿದವರ ಮನಸಿನೊಳಗೆ, ದೇವಿ ನೀಕರೆದವರ

ಕನಸಿನೊಳಗೆ ತಾಯೀ ನೀ ಬಂದಂತ ಕಷ್ಟಗಳ

ಹಿಂದು ಕಾಣಿಸಮ್ಮ ಕಾಪಾಡಮ್ಮ ಶಾಂಬವಿನೀ ||ಪ||

ನಿತ್ಯಬುತ್ತಿ ಪೂಜೆ ದೇವಿಗೆ, ನಿತ್ಯ ಎಲ್ಲಿ ಪೂಜೆ

ತಾಯಿಗೆ, ತಪ್ಪದೆ ಮಂಗಳವಾರ ಮಗ್ಗಿಮಲ್ಲಿಗಿ

ದಂಡಿ ಭಕ್ತರು ನಡೆಸುವರು ತಾಯಿಗೆ ||೧||

ಹಾರದ ಗೂಳಿದೇವಿಗೆ ತೊರಿದೆ ಬೆಲ್ಲವು

ತಾಯಿಗೆ ಕಾವುಣಿ ಹೊಡೆದ ಕುರಿ ನಿನಗೆ ದೇವಿ

ಕಾಪಾಡಮ್ಮ ಶಾಂಭವೀ ನೀ ||೨||

ರಡೆದ ತಾಯಿ ತಂದೆ ದೇವಿ ನೀ ಎನಗೆ

ಬಂಧು-ಬಳಗವು ಎಲ್ಲ ತಾಯಿನೀ ಬಂದಂತ

ಕಷ್ಟಗಳ ಹಿಂದೂ ಕಾಣಿಸಮ್ಮ ಶಂಭೋಶಂಕರಿ ಶಾಂಭವೀನೀ ||೩||

ಜಯಮಂಗಲಂ ಜಗದಾಂಬಿಗೀಗ ಜಯಮಂಗಲಂ

ಸಾಲು ನಂದದೀಪ ನಡುವೆ ನಿನ್ನ ರೂಪ

ತೋರಿದ ಪ್ರತಾಪ ಪರಿಹರಿಸೆನ್ನ ಪಾಪ ||ಪ||೧||

ಸುತ್ತ ಮುತ್ತ ತೋಟ ನಡುವೆನಿನ್ನ ಪೀಠ

ತೋರಿದಿ ಚೆಲ್ಲಾಟ ತೋರೆನಿನ್ನ ಆಟ ||೨||

ಶಿರದ ಮೇಲಿನ ದಂಡಿ ತೆಗೆದು ಕೊಡುವುದು

ಕಂಡೆ ದಂಡೀಗಿ ಪಾಯಸ ಕಂಡು ದನ್ಯಳಾದೆ ||೩||

ಮಾತೆಂಗ್ವೆನ ಗುಡಿ ಮುಂದೆ ಇರುವುದು

ಸಿಡಿಲಗ್ನಿ ಗುಂಡ ಹಾರಿ ತಾಯಿ ದಯಮಾಡೆ ||೪||

ತುತನಾ ಭದ್ರ ತೀರ ಇರುವ ಸೋಮೇಶ್ವರ

ಸಂಡೂರು ಅಂಭಾಪೂರ ಉಡುಚಮ್ಮ ದೇವಿ ||೫||

ಜಯ ಮಂಗಲಂ ಜಗದಾಂಬಿಗೀಗ ಜಯಮಂಗಳಂ

ಉಡುಸುಲಮ್ಮ

ಎನು ಅಂದ ಎನು ಚಂದ ಉಡುಸುಲಮ್ಮ

ನಿನ್ನ ನೋಡಲಿಕ್ಕೆ ಎರಡು ಕಣ್ಣು ಸಾಲದಮ್ಮ||

ನಿನ್ನ ನೋಡಲಿಕ್ಕೆ ಎರಡು ಕಣ್ಣು ಸಾಲದಮ್ಮ

ಗದ್ದಿಗೆ ಮೇಲೆ ಕುಳಿತಿಯಮ್ಮ | ನೀನು

ಮುತ್ತಿನ ಮೂಗುತಿ ಧರಿಸಿಯಮ್ಮ

ನೀನು ಮುತ್ತಿನ ಮೂಗುತಿ ಧರಿಸಿಯಮ್ಮ

ಪಟ್ಟೆ ಪೀತಾಂಬರ ಉಟ್ಟೆಯಮ್ಮ | ನೀನು

ಜರತಾರಿ ಕುಪ್ಪಸ ತೊಟ್ಟೆಯಮ್ಮ

ನೀನು ಜರತಾರಿ ಕುಪ್ಪಸತೊಟ್ಟೆಯಮ್ಮ

ಮುತ್ತಿನ ದಂಡಿಯ ಹಾಕಿಯಮ್ಮ | ನೀನು

ಅರಿಸಿನ ಕುಂಕುಮದ ಚೆಲುವಿಯಮ್ಮ

ನೀನು ಅರಿಸಿನ ಕುಂಕುಮದ ಚೆಲುವಿಯಮ್ಮ

ಎನು ಅಂದ ಏನು ಚಂದ ಉಡುಸುಲಮ್ಮ

ನಿನ್ನ ನೋಡಲಿಕೆ ಎರಡು ಕಣ್ಣು ಸಾಲದಮ್ಮ

ಊರಮ್ಮ

ಜಯತೇ ಜಯ ಮಂಗಳಾಂಗಿಯೇ

ಆಯರುಡಾದೇವಿಯೇ |

ಭಯವೆಲ್ಲಾ ಕಳದಿಯೆ ಸಿವೆ |

ಹುವೇ | ಭುವೆ | ಮಹೇಶ್ವರೀಯೇ ||

ಶರಣರಾ ಸಲಹುವಾ ಬಿರಿದಾಂಕಾ ದೇವಿಯೇ

ಪರಮಾತ್ಮಳೇ ಬರಾದಿದುರುಳರ ಸಿರವನ್ನು ಹರಿವೇ ||

ಬಂದು ಶತಾದೀಪ ಬಂದಾನ ವೇದೀಪಾ

ವಂದಿಪೆವು | ಕೃಪೆಯಿಂದಾ ಸೌರಕ್ಷಿಸು

ಮಂದಯಾನಿ || ಜಯತೆ ||

ಜಯತೇ ಜಯ ಮಂಗಳಾಂಗಿಯೇ

ಗ್ರಾಮ ದೈವಗಳ ಹಾಡು

ಆಯನೋಡೆ ಮರದ ಛಾಯ ನೋಡೆ ।
ಸರಗ ಸಾವಂತಿಗೆ ವನವಾ ನೋಡೆ ॥
ಹಂಪ ನೋಡೆ ಮರದ ತಂಪಾ ॥ ।
ಕೆಂಪು ಸಾವಂತಿಗೆ ಗುಂಪಾನೋಡೆ ॥
ಮಲ್ಲೀಗೆ ವನದಾಗ ಎಲ್ಲಿ ಸಲ್ಲಿದಾರೇನು ।
ಹಳ್ಳದಾಗೆಲ್ಲಾ ಸಸಿ ನೆಟ್ಟೆ ॥
ಹಳ್ಳದಾಗೆಲ್ಲಾ ಸಸಿನೆಟ್ಟು ಹುಲಿಗೆಮ್ಮ ।
ಎಲ್ಲಿ ಹೋದರೇನು ನಿಜವಂತೆ ॥ ಅಯ ನೋಡೆ ॥
ಹೊತ್ತಿ ಹೊತ್ತಿ ಬೀಜ ಎಲ್ಲಾ ಚಲ್ಲಿದರೇನ ।
ಹೊತ್ತೀನಾಗೆಲ್ಲಾ ಸಸಿನೆಟ್ಟು ॥
ಹೊತ್ತೀನಾಗೆಲ್ಲಾ ಸಸಿನೆಟ್ಟು ಅಂಕ್ಲಮ್ಮ
ಎತ್ತ ಹೋದರೇನೆ ನಿಜವಂತಿ ॥ ಅಯ ನೋಡೆ ॥
ಉಪ್ಪನೀರು ಬಾವ್ಯಾಗ ಹುಚ್ಚಿಆಗಿ ನಿಂತಾಳೆ
ಉಪ್ಪು ಮಂತ್ರಿಸಿ ಹೊಗದಾಳೆ
ಉಪ್ಪೇನ ಮಂತ್ರಿಸಿ ಹೊಗದಾಳೆ ಮಾರೆಮ್ಮ
ಉಪ್ಪ ಮಾನವರಿದೆ ತಿಳಿವಲ್ದೆ ॥ ಆ. ನೋ ॥
ಸಿಹಿನೀರ ಬಾವ್ಯಾಗ ಜಾಣ್ಯಾಗೆ ನಿಂತಾಳೆ
ಜ್ವಾಳ ಮಂತ್ರಿಸಿ ಹೊಗದಾಳೆ
ಜ್ವಾಳ ಮಂತ್ರಿಸಿ ಹೊಗದಾಳೆ ಊರಮ್ಮ
ಜಾಣೆ ಮಾನವರಿಗೆ ತಿಳಿಯವಲ್ದೆ ॥ ಆ. ನೋ॥
ಹರಿಯೇನೆ ನೀರಿಗೆ ಸರವೂನ್ನಾ ಹೊಂಟಾಳೆ
ಅರವತ್ತು ಡೊಳ್ಳು ಕರಕಂದೆ
ಅರವತ್ತು ಡೊಳ್ಳು ಕರಕಂದೆ ಉಡುಚಮ್ಮ
ಸರವೊನ್ನ ಹೊಂಟಾಳೆ ಜಳಕಾಕೆ ॥ ಆ. ನೋ ॥
ಸರವೊನ್ನಾ ಹೊಂಟಾಳೆ ಜಳಕಾಕ ಉಡಚಮ್ಮ ಕ್ಯಾದಿಗೆ ಗಿಡದಾಗೆ ತಿಳಿಯನೀರೆ
ಕ್ಯಾದಿಗಿ ಗಿಡದಾಗೆ ತಿಳಿಯನೀರೆ ಅಂಕ್ಲಮ್ಮಾ
ನೀಲೇನೆ ನೀರಿಗೆ ಹೊಂಟಾಳೆ ॥ ಆ. ನೋ ॥
ಸರವೊನ್ನಾ ಹೊಂಟಾಳೆ ಜಳಕಾಕ ಉಡಚಮ್ಮ
ಕ್ಯಾದಿಗಿ ಗಿಡದಾಗೆ ತಿಳಿನೀರೆ
ಕ್ಯಾದಿಗಿ ಗಿಡದಾಗೆ ತಿಳಿನೀರೆ ತಗಂದು
ಬಂದು ನಿಂತಾಳೆ ಅಗಸೀಗೆ ॥ ಆ. ನೋ ॥
ಅಕ್ಕೈಲೀ ಹಡ್ಲೀಗಿ ಈಕೈಲಿ ಹಡ್ಲೀಗಿ
ಬಂದು ನಿಂತಾಳೆ ಅಗಸೀಗೆ

ಬಂದು ನಿಂತಾಳೆ ಅಗಸೀಗೆ ಉಡಚಮ್ಮಾ

ಬಂದು ಏಳವ್ವಾ ರಯಿತಾರಿಗೆ ॥ ಆಯ ನೋಡೆ ॥

ಆಯ ನೋಡೆ ಮರದ ಛಾಯನೋಡೆ

ಸರಗ ಸವಂತಿಗೆ ವನವಾ ನೋಡೆ ॥

ದೇವಿಗೆ ಹೂಮುಡಿಸು ಹಾಡು

ಗುಡಿಯಾಗೆ ಹೂವಾ ಸೂರ್ಾಡುತ್ತಿದ್ದಾವೆ ।

ಬಂಡಿಯಾ ಏಕಟ್ಟಿ ದುಂಡಾನೆ ಬಿರಮಣ್ಣಾ ।

ದುಂಡಾ ಮಲ್ಲಿಗೆ ಎಡಾಕಿಟ್ಟು ।

ಗುಡಿಯಾಗೆ ಹೂವಾ ಸೂರ್ಾಡುತ್ತಿದ್ದಾವೆ.

ಕೆಂಪು ಹೂವ ಬಲು ಇಷ್ಟ ದೇವಿಗೆ

ಕೆಂಪಾನ ಡೇರೆ ಕೆಂಪ ಹೂವ ಬಲು ಇಷ್ಟ ದೇವಿಗೆ

ಕೆಂಪೂ ಹೂವ ಮುಡಿಸಾ ಬರಮಣ್ಣಾ ॥

ದುಂಡನೇನೆ ಮಲ್ಲಿಗೆ ಎಡಕಿಟ್ಟು ಬಲಕಿಟ್ಟು

ದಂಡೀಯಾ ಕಟ್ಟಿ ಹಟ್ಟೀಲಿ ।

ಗುಡಿಯಾಗೆ ಹೂವ ಸೂರ್ಾಡುತ್ತಿದ್ದಾವೆ. ॥

ಪೂಜೆಯ ಏಕಟ್ಟಿ ಪೂಜಾರಿ ಬರಮಣ್ಣ

ಚೌಡಕಿ ಹಾಡು

ಚೌಡಕಿ ಚೌಡಕಿ ನನ್ನಾವಳು ತಂತಿನೋಡೆ ॥

ಹೆಣ್ಣು ಮಕ್ಕಳು ಮಣ್ಣಮಾಡಿತವ್ವಾ ಬಳ್ಳಿಕಾರನ ಚೌಡಿಕೆ ॥

ಚೌಡಿಕೆ ಚೌಡಿಕೆ ನನ್ನಾವಳು ತಂತಿ ನೋಡೆ ।

ಹತ್ತಿ ಗಿಡದಾಗ ಹುಟ್ಟಿತವ್ವಾ ನನ್ನಾ ಬಾಲರಾಮನ ಚೌಡಿಕೆ ।

ಕ್ಯಾದಿಗಿ ವನದಾಗ ಹುಟ್ಟಿತವ್ವಾ ನನ್ನ ಬಾಲರಾಮನ ಚೌಡಿಕೆ ॥

ಮನೆ ಗಿಡದಾಗ ಹುಟ್ಟಿತವ್ವಾ ನನ್ನ ಕಂದರಾಮನ ಚೌಡಿಕೆ ।

ಸಂಪಗಿ ಗಿಡದಾಗ ಹುಟ್ಟಿತವ್ವಾ ನನ್ನ ಬಾಲರಾಮನ ಚೌಡಿಕೆ ॥

ಮೂರು ವರುಷದಾ ಭಾಗ್ಯದ ಮುದುಕಿ ನನ್ನಾಗುಡ್ಡ ನೀರುತ್ತೊಡೆ ॥

ಗುಡ್ಡ ಸೇರುತ್ತೊತೆ ನನ್ನವ್ವಾ ಜಾಗ ಹುಡುಕುತ್ತೊತೆ

ಬಳ್ಳಾರಿ ಜಿಲ್ಲೆಯ ಸಂಡೂರದ ಪರಿಸಿ ಬರತೈತೆ

ಪರಸಿ ಬರತೈತೆ ಊರಮ್ಮಾ ಜಾಗ ಉಡುಕುತೈತೆ

ಮೂರು ತಾಸು ರಾತ್ರ್ಯಾಗ ಪಾಲಕಿ ಹೊಂಡತ್ತೊತೆ ನನ್ನವ್ವಾ ॥

ಪಾಲಕಿ ಮುಂದೆ ಜೋಗೇರು ಅರತಿ ಮುಂದಾ ಮೆರಿಯುತ್ತೈತೆ ॥

ಮಂಗಳ ಗೀತೆ

ಸಾಲೇಲಿ ಮನೆಸಾರಿಗೆ ಅಳ್ಳದಲ್ಲಿ ಗುಡಿಹೊಯ್ದು ।

ಮಾನ ಮುತ್ತಿನಾ ರಂಗನೊಯ್ದು
ಮಾರಾಯ ನಿಂಗಾಟಿಗೋಗಾಕೆ ಮಲ್ಲಿಗುವ್ವಚ್ಚೀರಿ ತಾರಣಾಕೆ ।
ಜಯ ಮಂಗಳೊ ನಿತ್ರೆ ಶುಭಮಂಗಳೋ ॥
ತುಪ್ಪದಲ್ಲಿ ಮನಿಸಾರಿಸಿ ಒಪ್ಪದಲ್ಲಿ ಗುಡಿಹೊಯ್ದು
ಮಾನ ಮುತ್ತೀನಾರಂಗಾ ವೊಯ್ದಿ
ಮಾರಾಯ ನಿಂಗಾಟಿಗೋಗಾಕೆ ಬರುತಾಳೆ ಮಲ್ಲಿಗುವ್ವಚ್ಚೀರಿ ತಾರಣಾಕೆ
ಜಯ ಮಂಗಳೋ ನಿತ್ರ ಶುಭ ಮಂಗಳೊ ॥
ಮಂಗಳವಾದರೆ ಮದನ ಸುವ್ವರಾದ
ತಿಂಗಳಿಗೆ ಪಡುವನ್ನಾ ತಳ್ಳಂತಾದೆ ।
ತಿಂಗಳಿಗೆ ಹಡೆವನ್ನಾ ತಂದು ಮುಂದಿಡುವಂತೆ ।
ಗಂಗಾ ಪಾರ್ವತಿದೇವಿ ಅರಸಾರಿಗೆ ।
ಜಯ ಮಂಗಳೋ ನಿತ್ರೆ ಶುಭಮಂಗಳೊ ॥
ಅರಿಸಿಣಾ ಕುಂಕುಮ ಥಂದಾ ಛತ್ರಿಕೆ ಇಡಿದು
ಜಂಬಾದಿಂದಾ ಇಳಿದಿಟ್ಟೆನನಗೆ ತಿಳಿಸೆ ।
ಕರ್ಪೂರದಾ ಅಡಿಕೆ ನಾಕ ಯಾಲಕ್ಕಿ ಎಲೆ ಸುಣ್ಣಾ
ಪತ್ತಾರೆ ಲಾವಂಗಾ ಸಲಕೀಲೆ ತಂದಾರೆ
ಜಯ ಮಂಗಳೊ ನಿತ್ರ ಶುಭಮಂಗಳೊ ॥
ಉಡುಚವ್ವಳ ಕಳಸ ಈರೇಶ (ಈಶ್ವರ)
ದಿಟ್ಟವಂತಾ ಜೋಗಿ ಬಿಡಿದಿಲಾ ಹಾಡುವಾಗ
ಅಪ್ಪಾ ಸಂಡೂರಿನ ಈರೇಶ
ಜಯ ಮಂಗಳೊ ನಿತ್ರ ಶುಭಮಂಗಳೊ ॥
ದೇವ ಕೋಳಿ ಕೊಗಾಲಿ ಲೋಕ ಬೆಳಗಾಗಲೀ
ತಾಟವಾಳ ಪಕ್ಷಿನಾಕಾಗ ತೆಳಗಾ ಇಕ್ಕಾಲಿ
ಕಿಡಿಗಣ್ಣು ರುದ್ರನವರು ವಾ ಬಾಲಾನಾ ಕೋಳಿ
ಕೊರುವೈದು ಮಾನವರು ಎಬ್ಬಿಸಾಲಿ ।
ಜಯ ಮಂಗಳೊ ನಿತ್ರ ಶುಭಮಂಗಳೊ ॥

ಬಡಿಗೇರರು ಗ್ರಾಮದೈವಗಳನ್ನು ಮಾಡಲು ಬಳಸುವ ಗಿಡಗಳು

ಬಡಿಗೇರರು ಗ್ರಾದೇವತೆಗಳ ಮೂರ್ತಿಗಳನ್ನು ಮಾವಿನ ಕಟ್ಟಿಗೆ ಗಿಡದಿಂದಲೇ ಮಾಡುವರೆಂದು ಹೇಳುವದು ಅಸಂಜಸವಾದ ವಿಚಾರವಾದರೂ ಹೀಗೆ ಹೇಳುವ ಹಾಡು ತುಂಬಾ ಕಲಾಪೂರ್ಣವಾಗಿ ಭಾವಪೂರ್ಣವಾಗಿ ಗರತಿ ಕಟ್ಟಿರುವಳು

ಮುಂಜಾಲಾದರೂ ಎದ್ದಾನ ಬಡಗ್ಯಾ
ಹಾಲುಭಾನಾ ಉಂಡಾನ ॥
ಕೋಲ ನೋಡೆ ಮಾನುಣೆ ಕೋಲನೋಡೆ

ಹಾಲು ಬಾನ ಉಂಡಾನ ಬಡಗ್ಯಾ
ಮಾಯಿನ ಗಿಡಕಾ ಹೋಗ್ಯಾನ ಬಡಗ್ಯಾ
ಕೋಲ ನೋಡೆ ಮಾನುಣಿ ಕೋಲನೋಡೆ
ಮಾಯಿನ ಗಿಡಕಾ ಹೋಗ್ಯಾನ ಬಡಗ್ಯಾ
ಬಡ್ಗಿ ಕಡಿದು ಭಾಗಮ್ಮನ ಮಾಡಿದಾ
ಕೋಲ ನೋಡೆ ಮಾನುಣಿ ಕೋಲನೋಡೆ
ಬಡ್ಗ ಕಡಿದು ಭಾಗಮ್ಮನ ಮಾದಿದಾ
ದ್ಯಾಯ ಕಡಿದು ದ್ಯಾವಮ್ಮನ ಮಾಡಿದಾ ||
ಕೋಲು ನೋಡೆ ಮಾನುಣಿ ಕೋಲು ನೋಡೆ
ದ್ಯಾಯ ಕಡಿದು ದ್ಯಾವಮ್ಮನ ಮಾಡಿದಾ
ಕೊಲ್ಲೆ ಕಡಿದು ಎಲ್ಲಮ್ಮನ ಮಾಡಿದಾ
ಕೋಲ ನೋಡೆ ಮಾನುಣಿ ಕೋಲ ನೋಡೆ
ಕೊಲ್ಲೆ ಕಡಿದು ಎಲ್ಲಮ್ಮನ ಮಾಡಿದಾ
ಮಗ್ಗಿ ಕೊಯ್ದು ಮರಿಯಮ್ಮನ ಮಾಡಿದಾ
ಕೋಲ ನೋಡೆ ಮಾನುಣಿ ಕೋಲನೋಡೆ
ಮಗ್ಗಿ ಕೊಯ್ದು ಮರಿಯಮ್ಮನ ಮಾಡಿದಾ
ಕಾಯಿ ಕಡಿದು ಕಾಳಮ್ಮನ ಮಾಡಿದಾ
ಕೋಲು ನೋಡೆ ಮಾನುಣಿ ಕೋಲನೋಡೆ
ಚೆಂಡಿ ಕಂಡಿದು ಚೌಡಮ್ಮನ ಮಾಡಿದಾ
ಚೆಂಡೆ ಕಡಿದು ಚೌಡಮ್ಮನ ಮಾಡಿದಾ
ಕೋಲು ನೋಡೆ ಮಾನುಣಿ ಕೋಲುನೋಡೆ
ಕಾಯಿಕಡಿದು ಕಾಳಮ್ಮನ ಮಾಡಿದಾ
ಪಂಟೆ ಕಡಿದು ಪಾಲಕಮ್ಮನ ಮಾಡಿದಾ
ಕೋಲು ನೋಡೆ ಮಾನುಣಿ ಕೋಲು ನೋಡೆ

ಸಂಡೂರು

ವಿಶ್ವಖ್ಯಾತಿಯ ನನ್ನೂರು
ತಿಳಿಯೇ ತಮ್ಮ ಅದು ಸಂಡೂರು
ದಕ್ಷಿಣ ಕಾಶೀ ಕ್ಷೇತ್ರ ನನ್ನೂರು !
ವಿಭೂತಿ ಬೆಟ್ಟದ ತವರೂರು
ಗಿಡಮೂಲಿಕೆಗಳು ನೂರಾರು
ಗುಡ್ಡ ಬೆಟ್ಟಗಳು ಹಲವಾರು
ತಿಳಿಯೇ ತಮ್ಮ ಇದು ಸಂಡೂರು
ಮಣ್ಣು ಅಗೆದರೂ ಚಿನ್ನವಿಲ್ಲ

ಬಗೆಬಗೆ ಅದಿರಿನ ಖಜಾನೆಯಿಲ್ಲಿ
ರಮ್ಯ ಜಲಾಶಯ ನಾರೀಹಳ್ಳ
ತೆನೆಗಳು ತೂಗಿ ತುಂಬಿವೆ ಬಳ್ಳ
ತಿಳಿಯೋ ತಮ್ಮ ಇದು ನನ್ನೂರು
ಸೋಮಾರಿಗಳಿಗೆ ಜಾಗವೇ ಇಲ್ಲ !
ಆಳಾಗಿದುಡಿದು ಅರಸನಾಗಿ ಉಣ್ಣುವರು ಎಲ್ಲಾ !!
ಮುಗ್ಧ ಜನರ ನನ್ನೂರು
ವಿಶ್ವಖ್ಯಾತಿಯ ಸಂಡೂರು
ಆಧುನಿಕತೆಯಲ್ಲಿ ಸಂಡೂರು
ಅಂದು
ಸಂಡೂರಿನ ಸುಂದರ ಕಾನನ
ಗಗನ ಚುಂಬಿ ಮರಗಳ ವನ
ಜೊಳು ಜೂಳು ನೀರಿನ ನೀನಾದನ
ಹಕ್ಕಿ ಪಕ್ಷಿಗಳ ಇಂಚರ ಗಾಯನ
ಹುಲಿ ಜಿಂಕೆ ನರಿ ಮೋಲಗಳ ತಾಣ
ಸ್ಕಂದ ಕುಮಾರನು ನೆಲೆ ನಿಂತ ತಾಣ
ಋಷಿ ಮುನಿಗಳ ತಪೋವನ
ನೋಡುಗರ ಮನತಣಿಸುವ ಕಾನನ
ಮಹಾತ್ಮಾಜಿಯು ಮೆಚ್ಚಿದ ಸಂಡೂರು ಕಾನನ
ಇಂದು
ಸರ್ಕಾರದ ಅಣತಿ ನೀಡಿತು ಅದಿರು ತೆಗೆಯಲಿಕ್ಕೆ
ಬಂಡವಾಳ ಶಾಹಿಗಳು ಮುಗಿಬಿದ್ದರೂ ಕಾನನಕ್ಕೆ
ಭಾರಿಸ್ಫೋಟಕ ವಿಟ್ಟರೂ ಗಣಿ ತೆಗೆಯಲಿಕ್ಕೆ
ಭಾರಿ ವಾಹನಗಳು ದಾಳಿ ಇಟ್ಟವು ಕಾನನಕ್ಕೆ
ಮರಗಳು ಮಾಯವಾದವು ಮಾನವನ ದಾಹಕ್ಕೆ
ಹಕ್ಕಿ ಪಕ್ಷಿಗಳು ಹಾರಿದವು ಗಗನಕ್ಕೆ
ಜೂಳು ಜೂಳು ನೀರಿ ಬತ್ತಿತು ಪಾತಾಳಕ್ಕೆ ವನ್ಯ ಮೃಗಗಳು ಶರಣು ಮಾಡಿದವು ಕಾನನಕ್ಕೆ
ಸ್ಕಂದ ಕುಮಾರನು ಬೆದರಿದನು
ಗಣಿ ಮಾಲಿಕರ ಅರ್ಭಟಕ್ಕೆ
ಮಂಜು ಮಳೆಗಳು ಮುಟ್ಟದಾದವು ಕಾನನಕ್ಕೆ
ಸುಂದರ ಕಾನನ ಬೋಳಾಯಿತು ನೋಡಲಿಕ್ಕೆ
ಧೂಳು ತುಂಬಿತು ಸಂಡೂರು ಪರಿಸರಕ್ಕೆ
ರೈತರ ಜೀವನಕ್ಕೆ ತಂದಿತು ಭಾರಿ ಧಕ್ಕೆ

ಉಡುಸುಲಮ್ಮ

ಏನು ಅಂದ ಏನು ಚಂದ ಉಡುಸುಲಮ್ಮ

ನಿನ್ನ ನೋಡಲಿಕ್ಕೆ ಎರಡು ಕಣ್ಣು ಸಾಲದಮ್ಮ ॥

ನಿನ್ನ ನೋಡಲಿಕ್ಕೆ ಎರಡು ಕಣ್ಣು ಸಾಲದಮ್ಮ

ಗದ್ದಿಗೆ ಮೇಲೆ ಕುಳಿತಿಯಮ್ಮ । ನೀನು

ಮುತ್ತಿನ ಮೂಗುತಿ ಧರಿಸಿಯಮ್ಮ

ಪಟ್ಟೆ ಪೀತಾಂಬರ ಉಟ್ಟೆಯಮ್ಮ । ನೀನು

ಜರತಾರಿ ಕುಪ್ಪಸ ತೊಟೆಯಮ್ಮ

ಮುತ್ತಿನ ದಂಡಿಯ ಹಾರೆಯಮ್ಮ । ನೀನು

ಅರಿಸಿನ ಕುಂಕುಮದ ಚೆಲುವಿಯಮ್ಮ

ನೀನು ಅರಿಸಿನ ಕುಂಕುಮದ ಚೆಲುವಿಯಮ್ಮ

ಏನು ಅಂದ ಏನು ಚಂದ ಉಡುಸುಲಮ್ಮ

ನಿನ್ನ ನೋಡಲಿಕೆ ಎರಡು ಕಣ್ಣು ಸಾಲದಮ್ಮ

ಊರಮ್ಮ

ಜಯತೇ ಜಯ ಮಂಗಳಾಗಿಯೇ

ಆಯರುಡಾ ದೇವಿಯೇ ।

ಭಯವೆಲ್ಲಾ ಕಳದಿಯೆ ಸಿವೆ ।

ಹುವೇ । ಭುವೆ । ಮಹೇಶ್ವರೀಯೇ ॥

ಶರಣರಾ ಸಲುಹುವಾ ಬಿರಿದಾಂಕಾ ದೇವಿಯೇ

ಪರಮಾತ್ಮಳೇ ಬರಾದಿದುರುಳರ ಸಿರವನ್ನು ಹರಿವೇ ॥

ಬಂದು ಶತಾದಾಪ ಬಂದಾನ ವೇದೀಪಾ

ವಂದೆಪೆವು । ಕೃಪೆಯಿಂದಾ ಸೌರಕ್ಷಿಸು

ಮಂದಯಾನಿ ॥ ಜಯತೆ ॥

ಜಯತೇ ಜಯ ಮಂಗಳಾಂಗಿಯೇ

ಗಂಡಿ ನರಸಿಂಹ ಸ್ವಾಮಿಯನ್ನು ಕುರಿತಾದ ಚರಿತ್ರೆಯ ಹಾಡು

ನಾರಸಿಂಹನೆಂಬ ದೇವನು ನಂಬಿದಂತ ನರರಿಗೆಲ್ಲ ವರವ ಕೊಡುವನು ॥ ಪಲ್ಲ॥

ಓಂ ನಮಃಶಿವಾಯ ಎನುತಲಿ ಅಸುರ ತನ್ನ ಸುತನ ಕರೆದು ತೋರು ಎಂಬಾಗ

ನರಹರಿಯ ನಾಮವನ್ನು ನಗುನಗುತಲಿ ನೆನೆಯುತಿರಲು ಎಡತೊಡೆಯ ಮೇಲೆ

ಶಿಸುವು ಧರೆಗೆ ಒಡೆದು ನೂಕಿದನು

ಸುತ್ತು ಜನರ ಕರಸಿ ಬೇಗದಿ ಅಸುರ ತನ್ನ ಸುತನ ಕೊಲಿಸಬೇಕು ಎಂಬಾಗ ಅಟ್ಟ

ಅಡವಿಯೊಳು ವಿಷವನ್ನಿಟ್ಟು ಭೋಜನಂಗಳನ್ನೆ ಮಾಡಿ ಹರಿಯ ಸ್ಮರಣೆ ಮಾಡುತಲೇ

ಕುಂಜಿ ತಿಳಿದ ಜಟ್ಟಿ ಹಾಂಗೆ

ಅಂಬುಧಿಯೊಳ್ ಮಗನ ಮಲಗಿಸಿ ಮೇಲೆ ದೊಡ್ಡ ಬೆಟ್ಟವನ್ನು ಇಟ್ಟು ಬನ್ನಿರೋ

ಹರಿಯ ಕೃಪೆಗೆ ವಶನಾದ ತರುಳನೆಂದು ವರುಣದೇವ ಮರಣ ಇಲ್ಲದ್ಹಾಂಗೆ

ಮಾಡಿ ಮನೆಗೆ ತಟ್ಟಿ ಕಳುಹಿದಾನು ಬೆಟ್ಟದಿಂದ ಕಟ್ಟಿಉರುಳಿಸಿ ಅಸುರ ತನ್ನ

ಪಟ್ಟದಾನೆ ಕಾಲಲ್‌ಮೆಟ್ಟಿಸಿ ಅರಲು ಮನೆಯ ಮಾಡಿ ಸುಟ್ಟು ಹುಲಿಯ

ಬೋನಿನಲ್ಲಿ ಇಟ್ಟು ಯತ್ನವಿಲದೆ ಸುತನ ಕೊಲಲು ಶಕ್ತನಲದೆ ಪೋದನಂತೆ

ನಿನ್ನ ದೇವ ಇದ್ದ ಎಡೆಯನು ತೋರು ಎನುತ ಪಿತನು ತನ್ನ ಸುತನ ಕೇಳಲು

ಎನ್ನ ದೇವ ಇಲ್ಲದಂತ ಎಡೆಗಳುಂಟೇ ಲೋಕದಲ್ಲಿ ಕಂಬದಲ್ಲೂ ಇರುವನೆಂದು

ಕೈಯ ಮುಗಿದು ತೋರ್ದನಾಗ

ವಜ್ರಕಂಬವನ್ನೆ ಹೊಡೆಯಲು ನರಹರಿಯು ಉಗ್ರ ರೂಪವನ್ನೇ ತಾಳಿದ

ಕಟಕಟವೆಂಬ ಧ್ವನಿಯ ಮಾಡಿ ನಗಗಳಿಂದ ಹಿಡಿದು ಒತ್ತಿ

ಕರುಳು ಬಗೆದು ಮಾಲೆ ಹಾಕಿ ಕಂದ ಭಕ್ತನಪ್ಪಿಕೊಂಡ

ಅಂತರಿಕ್ಷದಲ್ಲಿ ಅಮರರು ನೋಡಿಆಗ ಪುಷ್ಪವೃಷ್ಟಿಯನ್ನೆ ಕರೆದರು

ಅಜನ ಪಡೆದ ದೇವಿ ಬಂದು ತೊಡೆಯ ಮೇಲೆ ಕುಳಿತುಕೊಂಡು

ಅಮರ ಪತಿಯರೆಲ್ಲ ನೋಡಿ ಅಂಜಬೇಡಂಥಾಭಯ ಕೊಟ್ಟ

ಲಕ್ಷ್ಮಿನಾರಸಿಂಹನ ಚರಿತೆಯ ಉದಯಕಾಲದಿ ಪಠಿಸುವಂತ

ಜನರಿಗೆಲ್ಲ ಪುತ್ರಸಂತಾನಗಳಿತ್ತು ಮತ್ತೆ ಬೇಡಿದ್ಹಾಂಗೆ ಕೊಟ್ಟು

ಭಕ್ತ ವತ್ಸಲ ಮುಕ್ತಿ ಕೊಡುವ ಪುರಂದರ ವಿಠಲರಾಯ

ವಕ್ತೃ ವಿವರ

೧. ಡಾ. ಗೋಪಾಲ್ ಶ್ರೀಮತಿ ಜಯಶ್ರೀ, ಸ್ಮಯೋರ್ ಅಡ್ಮಿಷನ್ ಕಲ್ಯಾಣ ಅಧಿಕಾರಿಗಳು

೨. ಅರುಣ ಕರ್ಮರ ಎಸ್.ಇ.ಎಸ್. ಕಾಲೇಜ್

೩. ರಾಮಚಂದ್ರ ಮಠದ, ಶ್ರೀಮತಿ ರತ್ನಾ, ಶಿವಪುರ ಪೂಜಾರಿ

೪. ಕೃಷ್ಣ ಕುಲಕರ್ಣಿ, ಶ್ರೀಮತಿ ರಾಧಾ, ನರಸಿಂಹಸ್ವಾಮಿ ಅರ್ಚಕರು

೫. ನಾನಾವಟಿ ಸರ್, ಶ್ರೀಶೈಲೇಶ್ವರ ಪ್ರೌಢ ಶಾಲೆ

೬. ಮುರಳೀಧರ ಭಟ್, ತಾರಕೇಶ್ವರ ಗುಡಿ

೭. ವಿಶ್ವನಾಥ ಕುಲಕರ್ಣಿ, ಉಮಾಬಾಯಿ, ಸಂಡೂರು

೮. ಹುಲಗಪ್ಪ ಅಗಸರು, ಉಡುಚಲಮ್ಮ ಗುಡಿ

೯. ಬಡಿಗೇರರು, ಊರಮ್ಮದೇವರ ಗುಡಿ

೧೦. ರವಿಭಟ್ಟರು, ಕನ್ನಿಕಾ ಪರಮೇಶ್ವರಿ ದೈವ ಅರ್ಚಕರು

೧೧. ಶ್ರೀಕೃಷ್ಣಭಟ್ ಜೋಷಿ ಶ್ರೀಮತಿ ಗಿರಿಜಾ ಬಾಯಿ, ಸಂಡೂರು

೧೨. ಕುಮಾರ ಕರ್ಮಕರ, ಎಸ್.ಇ.ಎಸ್ ಕಾಲೇಜು, ಸಂಡೂರು

೧೩. ಶ್ರೀ ಗುಂಡಣ್ಣರಾವ್, ಶ್ರೀಮತಿ ನಿರ್ಮಲಾ, ಹೊಸಪೇಟೆ

೧೪. ವಾಸುದೇವ ಬಡಿಗೇರು ಸರ್, ಕ.ವಿ.ವಿ.ಹಂಪಿ.

೧೫. ಶಶಿಧರ, ಶ್ರೀಮತಿ ಶಿಲ್ಪಾ, ಹೊಸಪೇಟೆ

೧೬. ಗಂಗಾಧರ, ಶ್ರೀಮತಿ ಜಯಲಕ್ಷ್ಮಿ, ಹೊಸಪೇಟೆ

೧೭. ಶ್ರೀ ಚೆನ್ನಬಸಪ್ಪ ಶ್ರೀಮತಿ ಪ್ರಮೀಳಾ

೧೮. ನಾನಾವಟಿ ಸರ್ ಎಸ್.ಆರ್.ಎಸ್. ಕಾಲೇಜು ಗ್ರಂಥಾಲಯ, ಸಂಡೂರು

೧೯. ಶ್ರೀಕೃಷ್ಣರಾವ್ ಶ್ರೀಮತಿ ಸರಿತಾ, ಸಂಡೂರು

೨೦. ಕುಲಕರ್ಣಿ ಸರ್. ಎಸ್.ಆರ್.ಎಸ್. ಸ್ಕೂಲ್, ಸಂಡೂರು

೨೧. ರಾಜಣ್ಣ, ಫೋಟೋ ಸ್ಟುಡಿಯೋ

೨೨. ಎಸ್.ಕೊಟ್ರೇಶ್

೨೩. ಶ್ರೀಕಾಳಿ ಮೇಷ್ಟ್ರು, ಕಲಾವಿದರು, ಸಂಡೂರು

೨೪. ಅಶೋಕ್ ಕುಲಕರ್ಣಿ

೨೫. ರವಿಕುಲಕರ್ಣಿ, ಸಂಡೂರು

೨೬. ಶ್ರೀನಿವಾಸ ಜೋಷಿ, ಶ್ರೀಮತಿ ಪದ್ಮಾವತಿ, ಸಂಡೂರು, ಶ್ಯಾನುಭೋಗರು

೨೭. ಡಾ. ಮಲ್ಲಿಕಾರ್ಜುನ ವಣೇನೂರು, ಅಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೮. ಶ್ರೀನಿವಾಸ ಜೋಷಿ, ಶ್ರೀಮತಿ ಗಾಯತ್ರೀ ಜೋಷಿ, ಹೊಸಪೇಟೆ

ಗ್ರಂಥ ಸೂಚಿ

೧. ಕರೀಗೌಡ ಬೀಚನಹಳ್ಳಿ - ಜಾತ್ರೆಗಳು - ಬೆಂಗಳೂರು, ೧೯೭೯

೨. ಕುಲಕರ್ಣಿ ಬೆಳಗಾಂವ - ಶ್ರೀ ಶಕ್ತಿಮಹಾತ್ಮೆ - ಹುಬ್ಬಳಿ

೩. ಕೃಷ್ಣಕುಮಾರ ಸಿ.ಪಿ. - ಜಾನಪದ ಪ್ರತಿಭೆ - ಮೈಸೂರು - ೧೯೭೩

೪. ಕೃಷ್ಣಮೂರ್ತಿ ಮತಿಘಟ್ಟ - ಏಳುಕೊಳ್ಳದ ಎಲ್ಲಮ್ಮ - ಬೆಂಗಳೂರು - ೧೯೬೫

೫. ಕೃಷ್ಣಶರ್ಮ ಬೆಟಗೇರಿ - ಕನ್ನಡ ಜಾ.ಸಮೀಕ್ಷೆ - ಧಾರವಾಡ - ೧೯೭೬

೬. ಗೋಪಾಲಕೃಷ್ಣ ಹೆಗಡೆ - ಶಿರಸಿಯ ಶ್ರೀಮಾರಿಕಾಂಬಾ - ಬೆಂಗಳೂರು - ೧೯೮೩

೭. ಚಂದ್ರಶೇಖರ ಕಂಬಾರರು - ಕ.ಜಾ. ವಿಶ್ವಕೋಶ - ಬೆಂಗಳೂರು - ೧೯೮೫

೮. ಚಲುವೇಗೌಡ ತ.ಬೆ. - ಕೆಲವು ಜ. ಸಂಪ್ರದಾಯಗಳು - ಮೈಸೂರು - ೧೯೭೮

೯. ಚಿದಾನಂದ ಮೂರ್ತಿ ಎಂ. - ಗ್ರಾಮೀಣ - ಬೆಂಗಳೂರು - ೧೯೭೭

೧೦. ಜವರೇಗೌಡ ದೇ. - ಜಾ.ಅ. - ಮೈಸೂರು - ೧೯೭೬

೧೧. ದವಳ ಶ್ರೀ -Folklore- Folklore - ಮಂಡ್ಯ - ೧೯೭೭

೧೨. ನಾಗರತ್ನ ಬಿ.ಎಸ್. - ಜಾನಪದ ಪರಿಕಲ್ಪನೆ - ಮೈಸೂರು - ೧೯೮೦

೧೩. ಹಂಪ ನಾಗ - ಕರ್ನಾಟಕ ಜಾತ್ರೆಗಳು - ಬೆಂಗಳೂರು

೧೪. ಹೆಚ್.ವಿ.ನಾಗೇಶ್ - ಗ್ರಾಮವ್ಯಾಸಾಂಗ - ಧಾರವಾಡ - ೧೯೮೧

೧೫. ನಾಯಕ ಎನ್.ಆರ್ - ಕರ್ನಾಟಕದ ಶಕ್ತಿದೇವತೆಗಳು - ಬೆಂಗಳೂರು - ೧೯೮೩

೧೬. ಪರಮಶಿವಯ್ಯ. ಜೀ.ಶಂ. - ದಕ್ಷಿಣಕರ್ನಾಟಕ ಜ.ದ ಕಾವ್ಯಪ್ರಕಾರಗಳು - ಮೈಸೂರು - ೧೯೭೯

೧೭. ಪ್ರಭ ಪ್ರಸಾದಕೆ.ಬಿ. - ದೇಗುಲಗಳ ದಾರಿಯಲ್ಲಿ - ಮೈಸೂರು - ೧೯೬೧

೧೮. ಬೋರಲಿಂಗಯ್ಯ ಹಿ.ಚಿ. - ಉಜ್ಜನಿ ಚೌಡಮ್ಮ - ಬೆಂಗಳೂರು - ೧೯೭೯

೧೯. ರಾಜಶೇಖರ ಪಿ.ಕೆ. - ಬೆಟ್ಟದ ಚಾಮುಂಡಿ - ಮೈಸೂರು - ೧೯೭೨

೨೦. ರಾಮಚಂದ್ರರಾವ್.ಎಸ್.ಕೆ. -ಭಾರತೀಯ ದೇವಾಲಯಗಳ ಜಾ.ಮೂಲ - ಬೆಂಗಳೂರು - ೧೯೮೧

೨೧. ಲಿಂಗಯ್ಯ ಡಿ. - ಕರ್ನಾಟಕದ ಗ್ರಾಮದೇವತೆಗಳು - ಬೆಂಗಳೂರು - ೧೯೮೪

೨೨. ವಿರೂಪಾಕ್ಷ ಗೌಡ. ಕೆ. - ಜಾನಪದ ಸಂಚಯ - ಬಳ್ಳಾರಿ ಜಿಲ್ಲೆ - ೧೯೭೯

೨೩. ಧರಮೂರ್ತಿ.ಮ. - ದೇವತೆಗಳು ಮತ್ತು ಹಬ್ಬಗಳು - ಬೆಂಗಳೂರು - ೧೯೮೧

೨೪. ಹೆಗಡೆ ಎಲ್.ಆರ್. - ಮೂಢನಂಬಿಕೆಗಳು - ಧಾರವಾಡ - ೧೯೭೮

೨೫. ಡಾ.ಅಂಬಳಿಕೆ ಹಿರಿಯಣ್ಣ ಜಾನಪದ ವಿವಕ್ಷೆ ೧೯೮೬ ಪ್ರಜ್ವಲ ಪ್ರಕಾಶನ ಮೈಸೂರು ೫೭೦೦೦೬

೨೬. ಡಾ. ಅಂಬಳಿಕೆ ಹಿರಿಯಣ್ಣ ಜಾನಪದ ಲೋಚನ ೧೯೯೪ ಪ್ರಜ್ವಲ ಪ್ರಕಾಶನ ಮೈಸೂರು ೫೭೦೦೨೩

೨೭. ಡಾ. ಅರವಿಂದ ಮಾಲಗತ್ತಿ ಜಾನಪದ ವ್ಯಾಸಂಗ ೧೯೮೫ ಶೈಲ ಪ್ರಕಾಶನ ನೇತಾಜಿಗಲ್ಲಿ ಮುದ್ದೇಬೀಹಾಳ್

೨೮. ಕಮಲಾ ಹೆಮ್ಮಿಗೆ ಸವದತ್ತಿ ಎಲ್ಲಮ್ಮ ೧೯೯೫ ಕರ್ನಾಟಕ ಜಾನದ ಮತ್ತು ಯಕ್ಷಗಾನ ಅಕಾದೆಮಿ ಬೆಂಗಳೂರು

೨೯. ಡಾ.ಕಲಬುರ್ಗಿ ಎಂ.ಎಂ. (ಸಂ) ಜಾನಪದ ಸಾಹಿತ್ಯದರ್ಶನ ಭಾಗ-II ೧೯೮೭ ಕನ್ನಡ ಅಧ್ಯನ ಪೀಠ ಕರ್ನಾಟಕ ವಿ.ವಿ. ಧಾರವಾಡ

೩೦. ಡಾ. ಕಲಬುರ್ಗಿ ಎಂ.ಎಂ. (ಸಂ) ಕರ್ನಾಟಕದ ಕೈಫಿಯತ್ತುಗಳು ಭಾಗ-III ೧೯೯೪ ಪ್ರಸಾರಾಂಗ ಕನ್ನಡ ವಿ.ವಿ.,ಹಂಪಿ, ವಿದ್ಯಾರಣ್ಯ

೩೧. ಕ್ಯಾತನಹಳ್ಳಿ ರಾಮಣ್ಣ ಜಾನಪದ ವಿಹಾರ ೧೯೮೫ ದಿನಕರ ಪ್ರಕಾಶನ, ಬೆಂಗಳೂರು

೩೨. ವೇ.ಗಂಗಾಧರ ಸ್ವಾಮಿಗಳು ಉಜ್ಜಿಯಿನಿ ಶ್ರೀಸಿದ್ಧಲಿಂಗ ಜಗದ್ಗುರುಗಳು ೧೯೯೪ ಶ್ರೀ ಸಿದ್ಧವೀರ ಶಿವಾಚಾರ್ಯ ಜ್ಞಾನಪ್ರಕಾಶನ, ೫೮೩ ೨೧೯

೩೩. ಚಂದ್ರಶೇಖರ.ಟಿ.ಆರ್. ಬಳ್ಳಾರಿ ಜಿಲ್ಲೆಯ ನಿಸರ್ಗ ಸಂಪತ್ತು ೧೯೯೪ ಶ್ರೀ ಸಿದ್ಧವೀರ ಶಿವಾಚಾರ್ಯ ಜ್ಞಾನಪ್ರಕಾಶನ, ೫೮೩ ೨೧೯

೩೪. ಚಿನ್ನಬಸಪ್ಪ ಗೊ.ರು. ಗ್ರಾಮಜ್ಯೋತಿ ಅಭಿನಂಧನಾ ಗ್ರಂಥ ೧೯೭೯ ಗ್ರಾಮಜ್ಯೋತಿ ಪ್ರಕಾಶನ ಬೆಂಗಳೂರು ೬೯

೩೫. ಡಾ. ವಾಸುದೇವ ಬಡಿಗೇರ, ಸಂಡೂರು ಪರಿಸರದ ಕಾರ್ತಿಕ ತಪೋವನ,

೩೬. ಕೆ. ನಂದ್ಯಪ್ಪ, ಸಂಡೂರು ದರ್ಶನ

೩೭. ಶ್ರೀ. ಸ್ಕಂದ ಕ್ಷೇತ್ರ ಮಹಾತ್ಮೆ, ಬ್ರಹ್ಮಶ್ರೀ ಬಾಲಚಂದ್ರಶಾಸ್ತ್ರಿ, ಶ್ರೀ ಮದ್‌ಜಗದ್ಗುರು ಶಂಕರಾಚಾರ್ಯ ಪಾಠಶಾಲಾ, ಧಾರವಾಡ, ೨೦೦೦



ಉಡುಚಲಮ್ಮ ದೇವತೆ, ಸಂಡೂರು



ಗಂಡಿ ನರಸಿಂಹ ಸ್ವಾಮಿ, ಸಂಡೂರು



ಊರಮ್ಮ ದೇವತೆ, ಸಂಡೂರು



ತಾರಕೇಶ್ವರ ದೈವ, ಸಂಡೂರು



ಊರಮ್ಮ ದೇವತೆ



ದೇವತೆಯ ಪಲ್ಲಕ್ಕಿ ಉತ್ಸವ



ಅಡಲಗಿ ಪೂಜೆ



ದೀಡ ನಮಸ್ಕಾರ ಹಾಕುವುದು



ಕುಂಭ ಹೊತ್ತ ಪೂಜಾರಿ



ಅರಿಶಣ, ಕುಂಕುಮ ಅಂಗಡಿ



ಜಾತ್ರೆಯ ತೇರು

